


ಐಕ್ಯರಂಗ

ಆರ್ಥಿಕ ಕೇಂದ್ರೀಕರಣದ ವಿರುದ್ಧ ದನಿಯೆತ್ತಬೇಕು - ಜ್ಯೋತಿಬಸು

ಕಾಂಗ್ರೆಸ್ಸೆಯೇತರ ಮುಖ್ಯಮಂತ್ರಿಗಳ ಕಲ್ಕತ್ತಾ ಸಮ್ಮೇಳನ



ಹರ್ಕಿಶನ್‌ಸಿಂಗ್ ಸುರ್ಜಿತ್

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೬
೫ ಫೆಬ್ರವರಿ ೧೯೮೯

ರೂ. 1-00

ಕರ್ನಾಟಕವೂ ಸೇರಿದಂತೆ ದೇಶದ ಹಲವೆಡೆ ಭಾಷಾ ಹಾಗೂ ಪ್ರಾದೇಶಿಕ ಸಂಕುಚಿತವಾದ ಬೆಳೆಯಲು ಅವಕಾಶ ನೀಡಿರುವ ಕೇಂದ್ರ ಸರ್ಕಾರದ ವಿಪರೀತ ಕೇಂದ್ರೀಕರಣದ ಸರ್ವಾಧಿಕಾರೀ ಪ್ರವೃತ್ತಿಗೆ ಜನವರಿ 28ರಂದು ಕಲ್ಕತ್ತಾದಲ್ಲಿ ಸಭೆ ಸೇರಿದ ಕಾಂಗ್ರೆಸ್ಸೆಯೇತರ ಮುಖ್ಯ ಮಂತ್ರಿಗಳ ಸಭೆಯ ಮೂಲಕ ಇನ್ನೊಂದು ಸವಾಲು ಹಾಕಲಾಯಿತು. ರಾಜೀವ್‌ಗಾಂಧಿ ಸರ್ಕಾರದ ಜನ-ವಿರೋಧಿ ನೀತಿಗಳ ವಿರುದ್ಧ ಹೋರಾಟವನ್ನು ತಾತ್ವಿಕ ತಳಹದಿಯ ಮೇಲೆ ಬಲಪಡಿಸುವತ್ತ ಇನ್ನೊಂದು ಹೆಜ್ಜೆಯಾದ ಈ ಸಭೆ ಕೂಡ ಎರಡು ವಾರಗಳ ಹಿಂದೆ ರಚನೆಗೊಂಡ ರಾಷ್ಟ್ರೀಯ ಆಂದೋನ ಸಮಿತಿ ಹಾಗೂ ಅದರ ಕಾರ್ಯಕ್ರಮದಂತೆ ಇಡೀ ದೇಶದ ಪ್ರಜಾಪ್ರಭುತ್ವವಾದಿಗಳ ಗಮನ ಸೆಳೆದಿದೆ.

ಪಶ್ಚಿಮಬಂಗಾಳ ಸರ್ಕಾರದ ಆಹ್ವಾನದ ಮೇರೆಗೆ ನಡೆದ ಒಂದು ದಿನದ "ಕೇಂದ್ರ-ರಾಜ್ಯ ಸಂಬಂಧಗಳು ಮತ್ತು ಸಂಬಂಧಿತ ಪ್ರಶ್ನೆಗಳ ಕುರಿತಾದ ಕಾಂಗ್ರೆಸ್ಸೆಯೇತರ ಮುಖ್ಯಮಂತ್ರಿಗಳ ಸಮ್ಮೇಳನ"ದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುರವರಲ್ಲದೆ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ಹರಿಯಾಣ ಮತ್ತು ಅಸ್ಸಾಂನ ಮುಖ್ಯ ಮಂತ್ರಿಗಳು ಭಾಗವಹಿಸಿದ್ದರು. ಅಲ್ಲದೆ ಪಶ್ಚಿಮ ಬಂಗಾಳದ ಹಣಕಾಸುಮಂತ್ರಿ ಡಾ॥ ಹಷೀಮ್ ದಾಸಗುಪ್ತ, ಕೇರಳದ ಹಣಕಾಸು ಮಂತ್ರಿ ವಿ.ವಿ.ಮೆನನ್, ಕೇರಳ ಯೋಜನಾ ಮಂಡಳಿಯ ಉಪಾಧ್ಯಕ್ಷ ಡಾ॥ ಐ.ಎಸ್.ಗುಲಾಟಿ, ಹರಿಯಾಣ ಯೋಜನಾ ಮಂಡಳಿಯ ಉಪಾಧ್ಯಕ್ಷ ಎಂ.ಪಿ.ಜೈನ್, ತೆಲುಗುದೇಶಂ ಮುಖಂಡ ಪಿ. ಉಪೇಂದ್ರ ಹಾಗೂ ಅಸ್ಸಾಂ ಗಣ ಪರಿಷತ್ ಮುಖಂಡ ದಿನೇಶ್ ಗೋಸಾಮಿ ಕೂಡ ಸಮ್ಮೇಳನದಲ್ಲಿ ಹಾಜರಿದ್ದರು.

ಅನಿವಾರ್ಯಕಾರಣಗಳಿಂದ ಭಾಗವಹಿಸಲಾಗದ ತಮಿಳುನಾಡಿನ ಮುಖ್ಯಮಂತ್ರಿಗಳು ಸಮ್ಮೇಳನಕ್ಕೆ ಶುಭಾಶಯ ಸಂದೇಶ ಕಳುಹಿಸಿದರು.

ಕೇಂದ್ರ-ರಾಜ್ಯ ಸಂಬಂಧಗಳ ಕುರಿತ ಸರ್ಕಾರಿಯಾ ಆಯೋಗದ ವರದಿಯ ಮೇಲೆ ಕೇಂದ್ರ ಸರ್ಕಾರ ಅಂತಿಮ

▸ ಪುಟ 8ಕ್ಕೆ

ರಾಷ್ಟ್ರೀಯ ಆಂದೋಲನ ಸಮಿತಿ ಮಹತ್ವಪೂರ್ಣ ಹೊಸ ಹೆಜ್ಜೆ

ರಾಷ್ಟ್ರೀಯ ಆಂದೋಲನ ಸಮಿತಿಯ ರಚನೆ ಹಾಗೂ ಅದರ ಕಾರ್ಯಕ್ರಮದ ಘೋಷಣೆಯ ನಂತರ ಹೆಚ್ಚಿನ ರಾಷ್ಟ್ರೀಯ ದಿನಪತ್ರಿಕೆಗಳು ಇದರ ಬಗ್ಗೆ ಸಂಪಾದಕೀಯ ಟಿಪ್ಪಣಿ ಬರೆದಿವೆ. ಕೆಲವನ್ನು ಬಿಟ್ಟು ಉಳಿದವೆಲ್ಲಾ ರಾಜಕೀಯವನ್ನು ಕಾರ್ಯಕ್ರಮಾತ್ಮಕ ಪ್ರಶ್ನೆಯ ಮೇಲೆ ಆಧರಿಸುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿವೆ. ಯಾರಿಗೂ ರಾಷ್ಟ್ರೀಯ ಆಂದೋಲನ ಸಮಿತಿಯ ಕಾರ್ಯಕ್ರಮವನ್ನು ಟೀಕಿಸುವುದು ಸಾಧ್ಯವಾಗಿಲ್ಲ.

ಈ ಸಮಿತಿ ಒಂದು ರಂಗವಲ್ಲ, ರಾಜೀವ್‌ಗಾಂಧಿ ಸರ್ಕಾರವನ್ನು ಸೋಲಿಸಬೇಕೆಂಬ ಜನತೆಯ ಆಕಾಂಕ್ಷೆಯನ್ನು ಪ್ರತಿಬಿಂಬಿಸುವ ಯಾವುದೇ ರಾಜಕೀಯ ಸಂಘಟನೆಗೆ ವಿರೋಧಿಯಲ್ಲ ಎಂದು ಮೊದಲೇ ಸ್ಪಷ್ಟಪಡಿಸಲಾಗಿತ್ತು.

ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಪ್ರಯತ್ನಿಸುವವರಿಂದ ಜನತೆ ಸಹಜವಾಗಿಯೇ ಕೆಲವು ಅಂಶಗಳನ್ನು ನಿರೀಕ್ಷಿಸುತ್ತಾರೆ. ಇಂದು ಕೋಮುವಾದಿ, ವಿಚ್ಛಿದ್ರಕಾರಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳ ಕೈಯಲ್ಲಿ ತೀವ್ರ ಅಪಾಯಕ್ಕೊಳಗಾಗಿರುವ ದೇಶದ ಸ್ವಾತಂತ್ರ ಮತ್ತು ಐಕ್ಯತೆಯನ್ನು ಅವರು ಬಲಗೊಳಿಸುವರೇ ? ರಾಜೀವ್ ಸರ್ಕಾರದ ಜನ-ವಿರೋಧಿ ಧೋರಣೆಗಳಿಂದ ಕಂಗಾಲಾಗಿರುವ ಜನಸಮೂಹಗಳಿಗೆ ಪರಿಹಾರ ನೀಡಲು ಅವರು ಶಕ್ತರೆ ?-

ಈ ನಿರೀಕ್ಷೆಗಳನ್ನು ಈಡೇರಿಸುವ ಉತ್ತಮ ವಿಧಾನವೆಂದರೆ ಬೂರ್ಜ್ವಾ-ಭೂಮಾಲಿಕ ವರ್ಗ ಆಳ್ವಿಕೆಗೆ ಪರ್ಯಾಯವಾದ ಧೋರಣೆಗಳನ್ನು ಜಾರಿಗೊಳಿಸಬಲ್ಲ ಒಂದು ಎಡ- ಪ್ರಜಾಪ್ರಭುತ್ವ ಪರ್ಯಾಯವನ್ನು ಒದಗಿಸುವುದು. ಪಶ್ಚಿಮ ಬಂಗಾಳ ಮತ್ತು ಕೇರಳದ ಎಡ- ಪ್ರಜಾಪ್ರಭುತ್ವ ರಂಗದ ವಿಜಯಗಳಿಂದ ಒಂದು ಪರ್ಯಾಯ ಮುಂದೆ ಬಂದಿದ್ದರೂ ಇಡೀ ದೇಶವನ್ನು ತಗೊಂಡರೆ ಅದಿನ್ನೂ ಒಂದು ವಾಸ್ತವತೆಯಲ್ಲ. ಅದನ್ನು ಕೈಗೆಟಕು ಘೋಷಣೆಯಾಗಿ ಮಾಡಬೇಕಾದರೆ ರಾಜಕೀಯ ಶಕ್ತಿಗಳ ಸಹ ಸಂಬಂಧಗಳಲ್ಲಿ ತೀವ್ರಗಾಮೀ ಬದಲಾವಣೆ ಅಗತ್ಯ. ಇದಕ್ಕೆ ಪಶ್ಚಿಮಬಂಗಾಳ, ಕೇರಳಗಳ ಎಡ ನೇತೃತ್ವದ ಸರ್ಕಾರಗಳ ಸಾಧನೆಗಳನ್ನು ಜನಜನಿತಗೊಳಿಸಬೇಕು. ಆದರೆ ಇಷ್ಟೇ ಸಾಲುವುದಿಲ್ಲ. ಕಾರ್ಮಿಕ ವರ್ಗ, ಕೃಷಿ ಕಾರ್ಮಿಕರು, ರೈತರು, ಯುವಜನರು, ವಿದ್ಯಾರ್ಥಿಗಳು ಮಹಿಳೆಯರು ಮತ್ತು ಇತರ ದುಡಿಯುವ ಜನವಿಭಾಗ ಗಳ ಹಿತಾಸಕ್ತಿಗಳನ್ನು ರಕ್ಷಿಸಲು ಸಾಮಾಜಿಕ ಚಳುವಳಿಗಳನ್ನು ಹರಿಯ ಬಿಡಬೇಕಾದುದೂ ಅತ್ಯಗತ್ಯ. ಈ ಗುರಿ ಸಾಧನೆಗೆ ಸಮಯಬೇಕು ನಿಜ. ಆದರೆ ಇದಲ್ಲದೆ ಅನ್ಯ ಮಾರ್ಗವಿಲ್ಲ. (ಪುಟ 8ಕ್ಕೆ)

ಮುಂದಿನ ಸಂಚಿಕೆಗಳಲ್ಲಿ

ಪ್ಯಾಲೆಸ್ಟೈನ್ ಹೋರಾಟ

ಮಹಾಧಿವೇಶನಗಳ ಅವಲೋಕನ

ಭಾರತದಲ್ಲಿ ಸಾರ್ವಜನಿಕ ವಲಯ

ತಪ್ಪು-ಧೋರಣೆ ಸರಿಪಡಿಸಿ ಆಡಳಿತ ಪರಿಣಾಮಕಾರಿಗೊಳಿಸಲು ಸಾಮೂಹಿಕ ಚಳುವಳಿ ಸಂಘಟಿಸಬೇಕು

ರಾಜ್ಯ ಸಮಿತಿಯ ನಿರ್ಣಯ

ಪಕ್ಷದ ರಾಜ್ಯ ಸಮ್ಮೇಳನ ಮತ್ತು ತ್ರಿವೇಂಡ್ರಂನಲ್ಲಿ ಸೇರಿದ ಪಕ್ಷದ 13ನೇ ಸಮ್ಮೇಳನ ಇತ್ತೀಚೆಗಷ್ಟೆ ಮುಕ್ತಾಯಗೊಂಡಿದೆ. ಅನಂತರದ ಕಾಲಘಟ್ಟದಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಒಂದಕ್ಕೊಂದು ಪರಿಣಾಮ ಬೀರುವಂಥ ಗಂಭೀರವಾದ ರಾಜಕೀಯ ಬೆಳವಣಿಗೆಗಳು ಬೆಳೆದು ಬಂದಿವೆ. ಪಕ್ಷದ 13ನೇ ಸಮ್ಮೇಳನ ಆದಕೂಡಲೇ 4 ಎಡಪಕ್ಷಗಳು, ಸಿ.ಪಿ.ಐ., ಪುರೋಗಾಮಿ ಪಕ್ಷ, ಆರ್.ಎಸ್.ಪಿ. ಹಾಗೂ ಬಹುಗುಣ ಅವರ ಲೋಕದಳ, ರಾಮ್‌ಧನ್ ಅವರ ಜನ ಮೋರ್ಚಾ ಮತ್ತು ಕಾಂಗ್ರೆಸ್(ಎಸ್) ಪಕ್ಷಗಳೆಲ್ಲ ಸೇರಿ ರಾಷ್ಟ್ರೀಯ ಆಂದೋಲನ ಸಮಿತಿಯನ್ನು ರಚಿಸಿ, ಕನಿಷ್ಠ ಕಾರ್ಯಕ್ರಮದ ತಳಹದಿಯಲ್ಲಿ ದೇಶಾದ್ಯಂತ ಪ್ರಚಾರ-ಪ್ರಕ್ಷೋಭೆ ನಡೆಸುವ ನಿರ್ಧಾರವನ್ನು ಪ್ರಕಟಿಸಿದರು. ನಮ್ಮ ಪಕ್ಷದ 13ನೇ ಸಮ್ಮೇಳನದ ರಾಜಕೀಯ ನಿರ್ಣಯವನ್ನು ತಮಿಳುನಾಡಿನಲ್ಲಿ ನಡೆದ ವಿಧಾನಸಭಾ ಚುನಾವಣೆ ದೃಢೀಕರಿಸಿದೆ. ಎಡ ಪಕ್ಷಗಳು ಬಲಿಷ್ಠವಾಗಿರುವಂಥ ಕೇಂದ್ರಗಳನ್ನು ಹೊರತುಪಡಿಸಿ, ದೇಶದ ಬಹುಭಾಗದಲ್ಲಿ ಜನರ ಅಸಮಾಧಾನಕ್ಕೆ ಮುಖಂಡತ್ವವಿಲ್ಲದಂತಾಗಿದೆ. ಆದರೆ, ದಕ್ಷಿಣದ ಮೂರು ರಾಜ್ಯಗಳಲ್ಲಿ ಮಾತ್ರ - ಅಂದರೆ ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದಲ್ಲಿ ಈ ಅಸಮಾಧಾನ ವಿರೋಧ ಪಕ್ಷಗಳ ಸುತ್ತ ನೆಲೆಯೂರಿದೆ. ಆಂಧ್ರಪ್ರದೇಶದಲ್ಲಿ ತಮ್ಮ ಶಾಸಕನ ಕೊಲೆಯಾದ ಕೂಡಲೇ ಕಾಂಗ್ರೆ ಪಕ್ಷ ಗೂಂಡಾ

▸ ಪುಟ 4ಕ್ಕೆ

"ಕಳೆದ ನಾಲ್ಕು ವರ್ಷಗಳ ಸರ್ಕಾರದ ಧೋರಣೆ ಕೋಮುವಾದಿ ಶಕ್ತಿಗಳನ್ನೂ ಗೌರವಾರ್ಹವಾಗಿಸಿದೆ"

-ಆರಿಫ್ ಮಹಮ್ಮದ್ ಖಾನ್

ಕೋಮುವಾದದ ರಾಜಕಾರಣ, ಅದರ ವಿರುದ್ಧ ಹೋರಾಟ ಇಂದು ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಚರ್ಚಾಸದ ವಿಷಯವಾಗಿದೆ. ಬೂರ್ಜ್ವಾ ರಾಜಕೀಯ ಪಕ್ಷಗಳಲ್ಲಿ ಕೋಮುವಾದದ ವಿರುದ್ಧ ಅವಿರತ ಹೋರಾಟ ಅಪರೂಪವಾದರೂ ಇಲ್ಲವೇ ಇಲ್ಲ ಎನ್ನುವ ಹಾಗಿಲ್ಲ. ಅಂತಹ ಒಂದು ಅಪರೂಪದ ಉದಾಹರಣೆ ಜನಮೋರ್ಚಾದ ನಾಯಕ ಆರಿಫ್ ಮಹಮ್ಮದ್‌ಖಾನ್. ಮುಸ್ಲಿಂ ಮಹಿಳೆಯರ ಮಸೂದೆಯನ್ನು ವಿರೋಧಿಸಿ ಅದಕ್ಕಾಗಿ ಮಂತ್ರಿ ಪದವಿ ತ್ಯಾಗ ಮಾಡಲು ಸಿದ್ಧವಿದ್ದ ಅಪರೂಪದ ಕಾಂಗ್ರೆಸ್ಸಿಗ. ಅವರು 'ಡೆಬನೋರ್' ಮಾಸಿಕಕ್ಕೆ ಕೊಟ್ಟ ಸಂದರ್ಶನದ ಆಯ್ದ ಭಾಗಗಳನ್ನು ಕೆಳಗೆ ಕೊಡಲಾಗಿದೆ. ಅವರು ಕಾಂಗ್ರೆಸ್ಸಿನ ಕೇಂದ್ರ ಸರ್ಕಾರದ ಕೋಮು ರಾಜಕಾರಣವನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆಯುತ್ತಾರೆ.

ಆ ಮಸೂದೆ (ಮುಸ್ಲಿಂ ಮಹಿಳೆಯರ ಮಸೂದೆ) ಕೋಮುವಾದಿ ಶಕ್ತಿಗಳನ್ನು ಗೌರವಾರ್ಹವಾಗಿಸಿತು ಎಂದು ನಿಮಗನ್ನಿಸುತ್ತದೆಯೆ?

ಸರ್ಕಾರ ತೆಗೆದುಕೊಂಡ ಧೋರಣೆ, ಇಡೀ ಪ್ರಶ್ನೆಯನ್ನು ನಿಭಾಯಿಸಿದ ರೀತಿ ಕೋಮುವಾದಿ ಶಕ್ತಿಗಳಿಗೆ ಗೌರವ ಮತ್ತು ಪ್ರತಿಷ್ಠೆ ನೀಡಿತು. ಇದನ್ನು ನಾನು ಈಗ ಮಾತ್ರ ಹೇಳುತ್ತಿಲ್ಲ. ಆಗಲೂ ನಾನು ಇದನ್ನೇ ಹೇಳಿದ್ದೆ. ಹೊಸದಾಗಿ ಸಿಕ್ಕಿದ ಗೌರವದೊಂದಿಗೆ ಕೋಮುವಾದಿ ಶಕ್ತಿಗಳಿಗೆ ಹೆಚ್ಚಿಗೆ ಶಕ್ತಿ ಬಂದಂತಾಗುತ್ತದೆ. ಈ ಶಕ್ತಿಯಿಂದ ನಮ್ಮ ಸಮಾಜದಲ್ಲಿ ಒಡಕು ತರುವ ಕೆಲಸ ಮಾಡುವ ಸಾಮರ್ಥ್ಯ ಅವುಗಳಿಗೆ ಹೆಚ್ಚುತ್ತದೆ ಎಂದೂ ನಾನು ಆಗ ಹೇಳಿದ್ದೆ. ಆ ನಂತರದ ಘಟನೆಗಳು ಇದು ನಿಜವೆಂದು ಸಿದ್ಧಪಡಿಸಿವೆ.

ಇದನ್ನು ವಿವರಿಸುತ್ತೀರಾ

ಕಳೆದ ಮೂರು ವರ್ಷಗಳಲ್ಲಿ ಕೋಮು ಘರ್ಷಣೆ ಪರಿಸ್ಥಿತಿ ಹೆಚ್ಚಾಗಿರುವುದು. ಭಾರತದಲ್ಲಿ ಹಿಂದೆಂದೂ ಇಲ್ಲದಷ್ಟು ತೀವ್ರವಾಗಿದೆ. ಹಳ್ಳಿ ಹಿರಿಯರು ಎಲ್ಲಾ ಪ್ರದೇಶಗಳಲ್ಲಿ ಇದನ್ನು ಹೇಳುತ್ತಿದ್ದಾರೆ. ದ್ವೇಷ ಮತ್ತು ವಿಭಜನೆಯ ರಾಜಕೀಯ ಹೊಂದಿರುವವರಿಗೆ ಗೌರವ ಹೆಚ್ಚಾಗುವಂತೆ ಮಾಡಿದ ಪರಿಸ್ಥಿತಿಯಿಂದಾಗಿ ಕೋಮು ವಿಭಜನೆ ಉಂಟಾಗಿದೆ.

ಆದರೆ ಹಿಂದೂ ಕೋಮು ಅಲೆ ಸಹ ಇದೆ ಎಂದು ನಿಮಗೆ ಅನಿಸುವುದಿಲ್ಲವೆ?

ಕೋಮುವಾದಿಗಳಲ್ಲಿ ವ್ಯತ್ಯಾಸಗಳನ್ನು ಹುಡುಕುವುದಕ್ಕಾಗಲಿ ಅಥವಾ ಲೇಬಲುಗಳನ್ನು ಹಚ್ಚುವುದಾಗಲಿ- ಇದನ್ನು ಮಾಡಲು ನಾನು ನಿರಾಕರಿಸುತ್ತೇನೆ. ಕೋಮುವಾದ ಒಂದು ಪ್ರತ್ಯೇಕ ಸಿದ್ಧಾಂತ. ಪ್ರತ್ಯೇಕ ಪಂಥ. ಅದನ್ನು ಆಚರಿಸುವವರು ಹಿಂದೂಗಳಿರಬಹುದು. ಮುಸ್ಲಿಮರಿರಬಹುದು. ಆದರೆ ಇಸ್ಲಾಂ, ಹಿಂದೂಧರ್ಮ ಅಥವಾ ಮಾರ್ಕ್ಸ್‌ವಾದದಂತೆ ಕೋಮುವಾದ ಒಂದು ಪ್ರತ್ಯೇಕ ಪಂಥ. ಅದು ಒಂದು ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ಸಿದ್ಧಾಂತ.

ಆದರೆ ಮಸೂದೆ ಬಗ್ಗೆ ಇಷ್ಟೊಂದು ವಾದವಿದೆ. ಮಸೂದೆಗೆ ಆಗಲೇ ಪ್ರಧಾನ ಮಂತ್ರಿಗೆ ಒಪ್ಪಿಸಿದಿದ್ದರೆ ಎಲ್ಲಾ ಮುಸ್ಲಿಮರ ಭಾವನೆಗಳಿಗೆ ಧಕ್ಕೆ ಮಾಡುತ್ತಿತ್ತು. ಮೂಲಭೂತ ವಾದಿಗಳಲ್ಲದ ಮುಸ್ಲಿಮರು ರೊಚ್ಚಿಗೇಳುತ್ತಿದ್ದರು ?

ಯಾವ ಮಾಹಿತಿ ಆಧಾರದ ಮೇಲೆ ನೀವು ಈ ತೀರ್ಮಾನಕ್ಕೆ ಬಂದಿದ್ದೀರಿ ಎಂದು ನನಗೆ ಗೊತ್ತಿಲ್ಲ. ಮೊನ್ನೆ ಮೊನ್ನೆವರೆಗೂ ಪಾಕಿಸ್ತಾನದಲ್ಲಿ ಸಂಪೂರ್ಣ ಜನತೆಯ ಮೇಲೆ ಮೂಲಭೂತವಾದಿಗಳ ಹಿಡಿತವಿದೆ ಎಂದು ಎಲ್ಲರೂ ತಿಳಿದಿದ್ದರು ಎಂದು ನಾವು ಮರೆತುಬಿಡಬಾರದು. ಆದರೆ (ಮತ ನೀಡಲು) ಅವಕಾಶ ಸಿಕ್ಕಿದಾಗ ಮುಲ್ಲಾಗಳಿಗೆ ಹೇಗೆ ಜನ ಒದೆ ಕೊಟ್ಟರು ನೋಡಿ.

ಆದರೆ ವ್ಯಕ್ತಿಗತ ಕಾನೂನು ಮಧ್ಯ ಪ್ರವೇಶ ಮಾಡಬಾರದು ಎಂದು ನಿಮ್ಮ ಅಭಿಪ್ರಾಯವೆ?

ನಾನು ಸಂವಿಧಾನ ಬದ್ಧನಾಗಿರುವ ಪ್ರತಿಜ್ಞೆ ತೆಗೆದುಕೊಂಡಿದ್ದೇನೆ. ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಸಾಮಾನ್ಯ ಸಿವಿಲ್ ಕೋರ್ಟ್‌ಗೆ ಪ್ರಯತ್ನಿಸುವುದು ಒಂದು. ಆದ್ದರಿಂದ ಅದರ ವಿರುದ್ಧ ನಾನು ಹೇಗೆ ಮಾತಾಡಲಿ? ಅದು ನಿರ್ದೇಶಕ ತತ್ವವಾಗಿದೆ ಎಂಬುದೇ ಸಾಮಾನ್ಯ ಸಿವಿಲ್ ಕೋಡ್‌ನ್ನು ಜನರ ಮೇಲೆ ಹೊರಿಸಬಾರದು ಎಂಬುದು ಸಂವಿಧಾನ ನಿರ್ಮಾಪಕರ ಆಶಯವಾಗಿತ್ತು ಎಂದು ತೋರಿಸುತ್ತದೆ. ಇನ್ನೂ ಬೇರೆ ಹಲವು ನಿರ್ದೇಶಕ ತತ್ವಗಳು ಸಂವಿಧಾನದಲ್ಲಿವೆ. ನಾವು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಸಾಧಿಸಿದ್ದೇವೆಯೆ? ಪಾನ ನಿರೋಧ ತರಲು ಸಾಧ್ಯವಾಗಿದೆಯೇ? ಪೂರ್ಣ, ಉದ್ಯೋಗ, ನಮಗೆ ಕೊಡಲು ಸಾಧ್ಯವಾಗಿದೆಯೇ? ಬೇರೆಮಾತುಬಿಡಿ, ನಾಗರಿಕರಿಗೆ ಭದ್ರತೆಯ ಅನ್ನಿಸಿಕೆ ಕೊಟ್ಟಿದ್ದೇವೆಯೆ? ಅದೇ ರೀತಿ ನಾನು ಸಾಮಾನ್ಯ ಸಿವಿಲ್ ಕೋಡ್ ಹೊರಿಸುವುದಕ್ಕೆ ವಿರೋಧಿ. ಸಂವಿಧಾನದ ನಿರ್ಮಾಪಕರು ಕೂಡಾ ಅದನ್ನು ಬಲವಂತವಾಗಿ ಹೇರುವುದಕ್ಕೆ ವಿರೋಧಿಗಳಾಗಿದ್ದರು.

ಆದರೆ ಒಬ್ಬ ಲಿಬರಲ್ ಮುಸ್ಲಿಂ ಆಗಿ...

ಅದಕ್ಕೆ ನಾನು ಬರುತ್ತಿದ್ದೆ. ಒಬ್ಬ ಲಿಬರಲ್ ಮುಸ್ಲಿಂ ಆಗಿ ಆ ಉದ್ದೇಶ ಸಾಧಿಸುವತ್ತ ತೊಡಕಾಗಿರುವ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸುವುದು ನನ್ನ ಕಳಕಳಿ. ನನ್ನ ಪ್ರಯತ್ನ ಆತ್ಮವಿಶ್ವಾಸ ಮತ್ತು ಭದ್ರತೆಯ ಅನ್ನಿಸಿಕೆ ಸೃಷ್ಟಿಸುವತ್ತ. ಯಾರೂ ಭಾದೆಪಡದ ಮತ್ತು ಯಾರಿಗೂ ತಮ್ಮ ವಿರುದ್ಧ ಅನ್ಯಾಯವಾಗುತ್ತಿದೆ ಮಲತಾಯಿ ಧೋರಣೆ ತೋರಿಸಲಾಗುತ್ತಿದೆ ಎಂಬ ಭಾವನೆ ಬಾರದಂತಹ ಸಮಾಜ ಕಟ್ಟುವತ್ತ ನನ್ನ ಪ್ರಯತ್ನ. ಸಂವಿಧಾನದ ನಿರ್ದೇಶನಗಳನ್ನು ಅಕ್ಷರಶಃ ಮತ್ತು ಅರ್ಥಶಃ ಪಾಲಿಸಿದರೆ ಎಲ್ಲಾ ನಿರ್ದೇಶಕ ತತ್ವಗಳನ್ನು ಪಾಲಿಸುವತ್ತ ಅದು ದೊಡ್ಡ ಹೆಜ್ಜೆ. ಇವತ್ತಿನ ಪರಿಸ್ಥಿತಿಯಲ್ಲಿ ಸರಿಯಾದ ವಾತಾವರಣ ತರಲು ಪ್ರಯತ್ನಿಸದೆ, ಸುಮ್ಮನೆ ಸಾಮಾನ್ಯ ಸಿವಿಲ್ ಕೋಡ್ ಬಗ್ಗೆ ಮಾತನಾಡಿದರೆ ಬಹುಶಃ ನೀವು ಮೂಲಭೂತವಾದಿಗಳನ್ನು ಬಲಪಡಿಸುತ್ತೀರಿ ಅಷ್ಟೇ!

ನೀವು ಹೇಳುತ್ತಿರುವ ಅಭದ್ರತೆಯ ಭಾವನೆ ಬಗ್ಗೆ ಬಂದರೆ, ಕಳೆದ ನಾಲ್ಕು ವರ್ಷಗಳಲ್ಲಿ ಇದು ಸಿಖ್ಖರಲ್ಲಿ ಮತ್ತು ಮುಸ್ಲಿಮರಲ್ಲಿ ಹೆಚ್ಚಿದೆ ಎಂದು ಅನಿಸುತ್ತದೆಯೆ?

ನನ್ನ ಪ್ರಕಾರ, ಒಂದು ಕೋಮು ಅಭದ್ರತೆಯ ಭಾವನೆಯಿಂದ ನರಳದೆ ಕೋಮುವಾದಿ ರಾಜಕೀಯ ಬೆಳೆಯಲಾರದು. ನಾನು ಬೇರೆ ಅಂಶಗಳು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ನೀವು ಕೋಮುವಾದಿ ರಾಜಕಾರಣಿಗಳ ಕಾರ್ಯವಿಧಾನ ಮತ್ತು ಕಾರ್ಯತಂತ್ರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ತಮ್ಮ ಕೋಮಿನಲ್ಲಿ ಅಭದ್ರತೆಯ ಭಾವನೆ ಸೃಷ್ಟಿಸುವುದು ಅವರ ಮೊದಲ ಕೆಲಸ. ಆ ಮೇಲೆ ಈ ಅಭದ್ರತೆಯಿಂದ ಕೋಮಿನ ಹಕ್ಕುಗಳನ್ನು 'ರಕ್ಷಿಸುವ' ಹೋರಾಟಗಾರನಾಗಿ ಪೋಸು ಕೊಡುವುದು ಅವರ ಕಾರ್ಯವಿಧಾನ. ಇದರಲ್ಲಿ ತಮ್ಮ ಕಾರಸ್ತಾನಗಳ ಮೇಲೆ ಮಾತ್ರ ಅವಲಂಬಿಸಿರುವುದಿಲ್ಲ. ಇನ್ನೊಂದು ಕೋಮಿನ ಕೋಮುವಾದಿ ಶಕ್ತಿಗಳ ಕಾರಸ್ತಾನಗಳ ಮೇಲೆ ಅವಲಂಬಿಸಿರುತ್ತಾರೆ.

ಬಾಬ್ರಿ ಮಸೀದಿ ಹಗರಣ ಮುಸ್ಲಿಮರಲ್ಲಿ ಅಭದ್ರತೆಯ ಭಾವನೆಯನ್ನು ಹೆಚ್ಚಿಸಿದೆ ಎಂದು ನಿಮಗನ್ನಿಸುತ್ತದೆಯೇ? ಅದನ್ನು ಕೆಟ್ಟದಾಗಿ ನಿರ್ವಹಿಸಲಾಯಿತೆ? ಈಗ ಏನು ಮಾಡಬೇಕೆನ್ನುತ್ತೀರಿ?

ಕಳೆದ ಮೂರು ವರ್ಷಗಳಲ್ಲಿ ಬಾಬ್ರಿ ಮಸೀದಿ ಅಥವಾ ರಾಮಜನ್ಮಭೂಮಿಯ ಹೆಸರಲ್ಲಿ ಏನೇನೂ ನಡೆಯಿತೋ ನಿಜವಾಗಲೂ ದುರದೃಷ್ಟಕರ. ನಾನು ಈಗ ಏನು ಹೇಳ ಹೊರಟದ್ದೇನೋ ಅದು ನನ್ನ ವೈಯುಕ್ತಿಕ ಗಮನಕ್ಕೆ ಬಂದದ್ದು ಇದನ್ನು ಹಿಂದೆ ಹೇಳುವುದನ್ನು ತಪ್ಪಿಸುತ್ತಿದೆ. ಆದರೆ ಈಗ ಅದನ್ನೆಲ್ಲಾ ಹೇಳಬೇಕಾದ ಕಾಲ ಬಂದಿದೆ. ಬಾಬ್ರಿ ಮಸೀದಿಯನ್ನು ಬಹುಸಂಖ್ಯಾತ ಕೋಮಿಗೆ ಯಾವಾಗ ತೆರೆಯಲಾಯಿತು ಎಂದು ನಿಮಗೆ ನೆನಪಿದೆಯೇ?

1985 ಕೊನೆ ಅಥವಾ 1986 ಮೊದಲು?

ಫೆಬ್ರವರಿ 1986. ಎರಡು ಮೂರು ವಾರಗಳ ಮೊದಲಷ್ಟೇ ಲೋಕಸಭಾದಲ್ಲಿ ಮುಸ್ಲಿಂ ಮಹಿಳೆಯರ ಮಸೂದೆಯನ್ನು ಮಂಡಿಸಲಾಗಿತ್ತು.... ಮುಂದಿನದನ್ನು ನಾನು ಸಂಪೂರ್ಣ ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ: ಸರ್ಕಾರ ಮುಸ್ಲಿಂ ಮಹಿಳೆ ಮಸೂದೆ ಸಮರ್ಥಕರ ಹತ್ತಿರ ಚಾಕಾಶಿ ನಡೆಸುತ್ತಿದ್ದಾಗ, ಇದರಿಂದಾಗಿ ಹಿಂದೂಗಳಿಂದ ವಿರುದ್ಧ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂಬ ಗುಪ್ತಚರ ವರದಿಗಳು ಕೇಂದ್ರ ಸರ್ಕಾರಕ್ಕೆ ಬಂದವು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಮುಸ್ಲಿಂ ಮಹಿಳೆಯರ ಮಸೂದೆಗೆ ಸಮತೋಲಿಸಲು ಏನಾದರೂ ಮಾಡಬೇಕೆಂದು ಯೋಚಿಸುತ್ತಿತ್ತು.

ಅಂದರೆ ಬಾಬ್ರಿ ಮಸೀದಿ ಹಗರಣ ಇದರಿಂದ ಆರಂಭವಾಯಿತೆ?

ಇದು ಒಂದು ಒಪ್ಪಂದದ ಭಾಗವಾಗಿತ್ತು. ಆದ್ದರಿಂದ ಶಬಾಬುದ್ದೀನ್ ಯಾವಾಗಲೂ ಮಿತಿ ಮೀರುವುದಿಲ್ಲ. ಹಾಗೇನಾದರೂ ಮಿತಿ ಮೀರಿದರೆ ಅಲಿ ಮಿಯಾಂ ಅವರನ್ನು ಹಿಂದಕ್ಕೆಳೆಯುತ್ತಾರೆ.

ಅಲಿ ಮಿಯಾಂ ಯಾರು?

ಅಬ್ದುಲ್ ಹಸನ್ ನದ್ವಿ, ಮುಸ್ಲಿಂ ವೈಯುಕ್ತಿಕ ಕಾನೂನು ಬೋರ್ಡ್‌ನ ಅಧ್ಯಕ್ಷ: ಬಾಬ್ರಿ ಮಸೀದಿ ಹಗರಣದ ಬಗ್ಗೆ ಕೋರ್ಟು ತೀರ್ಪು ಕೊಟ್ಟಾಗ, ಅಲಿ ಮಿಯಾಂರ ಪ್ರತಿಕ್ರಿಯೆ ಏನಿತ್ತು ಗೊತ್ತೆ? ಅವರ ಪ್ರತಿಕ್ರಿಯೆ "ಕಾಮಿ ಆವಾಜ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಎಷ್ಟೋ ಮಸೀದಿಗಳು ಬೇರೆ ಕಡೆ ಖಾಲಿ ಬಿದ್ದಿವೆ ಇದೂ ಇನ್ನೊಂದು ಎಂದಿಟ್ಟುಕೊಳ್ಳಬಹುದು ಎಂದು ಅವರ ಪ್ರತಿಕ್ರಿಯೆಯಾಗಿತ್ತು. ಆದ್ದರಿಂದಲೇ ನನಗನ್ನಿಸುತ್ತದೆ ಸೈಯ್ಯದ್ ಶಬಾಬುದ್ದೀನ್ ಪ್ರಜಾಪ್ರಭುತ್ವ ದಿನ ಬಹಿಷ್ಕರಿಸುವ, ಅಯೋಧ್ಯಾಗೆ ಜಾಥಾ ಹೊರಡುವ ಕರೆಗಳನ್ನು ಕೊಡುತ್ತಾರೆ. ಕೊನೆಯ ಗಳಿಗೆಗೆ ಇಂತಹ ಕರೆಗಳನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ಏಕೆಂದರೆ ಇಂತಹ ಕರೆಗಳನ್ನು ಅವರು ಕೊಟ್ಟಾಗ ಗೃಹಖಾತೆಯಿಂದ ಅವರಿಗೆ ಹೇಳಿ ಕಳಿಸಲಾಗುತ್ತದಂತೆ ಮತ್ತು ಅವರು ಮತ್ತು ಇತರ ಮುಸ್ಲಿಂ ವೈಯುಕ್ತಿಕ ಕಾನೂನು ಬೋರ್ಡು ಸದಸ್ಯರಿಗೆ ಹಿಂದೆ ಮಾಡಿದ ಒಪ್ಪಂದವನ್ನು ನೆನಪಿಸಲಾಗುತ್ತದಂತೆ.

ಅಂದರೆ ನೀವು ಹೇಳುವುದು ಇದು ಒಂದು ಕಾನೂನುಬದ್ಧ ಒಪ್ಪಂದವೆಂದೆ?

ಇದು ಗೃಹಖಾತೆ ನನಗೆ ಕೊಟ್ಟ ಮಾಹಿತಿ. ಇದು ಲಿಖಿತ ಒಪ್ಪಂದವೇನಲ್ಲ. ಆದರೆ ಲಿಖಿತ ಒಪ್ಪಂದವಂತೂ ಖಂಡಿತಾ.

ನೀವು ಹೇಳುವುದು ಬೆಚ್ಚು ಬೀಳಿಸುವಂತಹದ್ದು ಕೇಂದ್ರ ಸರ್ಕಾರ ಅತ್ಯಂತ ಕೆಳಮಟ್ಟದ ಕೋಮುವಾದಿ ರಾಜಕೀಯ ದೊಂಬರಾಟ ನಡೆಸುತ್ತಿತ್ತು ಎಂದು ನಿಮ್ಮ ಅಂಬೋಣವೆ?

ಬಾಬ್ರಿ ಮಸೀದಿ ಹಗರಣ ಮೊದಲ ಬಾರಿ ಸಾರ್ವಜನಿಕವಾಗಿ ಮುಂದೆ ಬಂದಾಗ ಜವಾಹರಲಾಲ ನೆಹ್ರೂ, ಆ ಜಿಲ್ಲೆಯಲ್ಲಿ ಡಿವಿಜನಲ್ ಕಮಿಷನರ್‌ರನ್ನು ಅಮಾನತ್ತಿನಲ್ಲಿಟ್ಟರು. ಈ ಹಗರಣವನ್ನು ಪುನರಾರಂಭ ಮಾಡಿದ ದಾಖಲೆ ಕೊಡಲು ತಯಾರಾದ ಆಫೀಸರುಗಳಿಗೆ ಈ ಬಾರಿ ಏನು ಮಾಡಲಾಗಿದೆ? ಏನಾದರೂ ಶಿಕ್ಷೆ ಕೊಡಲಾಗಿದೆಯೇ? ಆ ತೀರ್ಪು ಕೊಟ್ಟ ನ್ಯಾಯಾಧೀಶರನ್ನು ಹಳಿದು ಪ್ರಯೋಜನವಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ಸೂಪರಿಂಟೆಂಡೆಟ್ ಕೊಟ್ಟ ದಸ್ತಾವೇಜು ತೀರ್ಪಿಗೆ ಕಾರಣವಾಯಿತು. ಇದರರ್ಥ ಅವರು ಸರ್ಕಾರದ ನಿರ್ದೇಶನದ ಮೇಲೆನೇ ಈ ಕೆಲಸ ಮಾಡಿದ್ದಾರೆ. ಸರ್ಕಾರ ಎರಡು ಕೋಮುಗಳ ಭಾವನೆಗಳಿಗೆ ಕುಮ್ಮಕ್ಕು ಕೊಡುತ್ತಿತ್ತು.

ದಿಲ್ಲಿಯಲ್ಲಿ ಸರ್ಕಾರವೊಂದು ಕೋಮುಭಾವನೆಗಳನ್ನು ಈ ರೀತಿ ಉಪಯೋಗಿಸಿರುವುದು ಇದು ಮೊದಲ ಬಾರಿಗೆ ಎನ್ನಬಹುದೆ?

ಕೋಮುವಾದಿ ಶಕ್ತಿಗಳೆದುರು ಈ ರೀತಿ ಅವಮಾನಕಾರಿ ರೀತಿಯಲ್ಲಿ ಕೇಂದ್ರ ಸರ್ಕಾರ ಶರಣಾಗತವಾಗಿರುವುದು ಇದು ಮೊದಲ ಬಾರಿಗೆ ಎಂದು ಹೇಳಬಲ್ಲೆ.

ಸಲ್ಮಾನ್ ರಶ್ದೀ ಅವರ "ಸೆಟಾನಿಕ್ ವರ್ಸಸ್" ಪುಸ್ತಕವನ್ನು ಸರ್ಕಾರ ಕಾನೂನು ಬಾಹಿರಗೊಳಿಸಿದರ ಬಗ್ಗೆ ... ಕೋಮುವಾದಿ ಶಕ್ತಿಗಳಿಗೆ ಸರ್ಕಾರ ಮಣಿದಿದೆ ಎಂದು ನಿಮಗನ್ನಿಸುತ್ತದೆಯೇ?

ನನಗೆ ಹಾಗನ್ನಿಸುವುದಿಲ್ಲ. ನಾನು ಆ ಪುಸ್ತಕವನ್ನು ಓದಿಲ್ಲ. ಯಾವುದೇ ಚಳುವಳಿಯ ನಂತರ ಸರ್ಕಾರ ಕಾರ್ಯಾಚರಣೆ ನಡೆಸಿಲ್ಲವಾದ್ದರಿಂದ ಹಾಗೆ ಹೇಳಲು ಬರುವುದಿಲ್ಲ. ನಾನು ಪುಸ್ತಕ ಓದಿಲ್ಲವಾದ್ದರಿಂದ ಸರ್ಕಾರ ತನ್ನ ಅಧಿಕಾರವನ್ನು ಸರಿಯಾಗಿ ಉಪಯೋಗಿಸಿತೋ ಇಲ್ಲವೋ ಎಂದು ಹೇಳಲಾರೆ. ಆದರೆ ಒಂದು ಕೋಮು ಒಂದು ಪುಸ್ತಕದ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವಂತಿದ್ದರೆ ಸರ್ಕಾರಕ್ಕೆ ಅದನ್ನು ಕಾನೂನು ಬಾಹಿರ ಮಾಡುವ ಅಧಿಕಾರವಿದೆ. ಅಭಿವ್ಯಕ್ತಿ ಸ್ವಾತಂತ್ರವೆಂದರೆ, ಇನ್ನೊಬ್ಬರನ್ನು ನೋಯಿಸುವ ಹಕ್ಕು ಅಲ್ಲ ಎಂದು ಮಾತ್ರ ನಾನು ಹೇಳಬಲ್ಲೆ. ನಾನು ಪುಸ್ತಕ ಓದಿಲ್ಲವಾದ್ದರಿಂದ ಹೆಚ್ಚಿಗೆ ಹೇಳಲಾರೆ.

ನಿಮ್ಮ ಪ್ರಕಾರ ಮುಸ್ಲಿಮರ ಸಮಸ್ಯೆಗಳೇನು? ಎಲ್ಲಾ ಭಾರತೀಯರಿಗೆ ಯಾವ ಸಮಸ್ಯೆಗಳು ಇವೆಯೋ...ಅವೇ ಸಮಸ್ಯೆಗಳು ಮುಸ್ಲಿಮರಿಗಿವೆ.

ಮುಸ್ಲಿಮರಿಗೆ ವಿಶಿಷ್ಟ ಸಮಸ್ಯೆಗಳಿಲ್ಲವೇ ಹಾಗಾದರೆ ಉದಾಹರಣೆಗೆ? ಯಾವುದೇ ಕೋಮುಗಲಭೆಯಲ್ಲಿ ಮುಸ್ಲಿಮರಿಗೆ ಹೆಚ್ಚು ನಷ್ಟವಾಗುತ್ತದೆ. ಒಂದು ಅಲ್ಪ ಸಂಖ್ಯಾತ ಕೋಮು ಆಗಿ ಅಸಹಾಯಕತೆ ಮತ್ತು ಅಭದ್ರತೆಯ ಭಾವನೆ ತೀವ್ರವಾಗಿರುವುದಿಲ್ಲವೆ?

ಸಿಖ್ಖರು ಅಲ್ಪಸಂಖ್ಯಾತರಾಗಿದ್ದರು. ಆದರೆ ಆ ಥರಹದ ಭಾವನೆಗಳು ಅವರಿಗೆ 1984ಗಿಂತ ಮೊದಲು ಇದ್ದುವೇ? ಅಂದರೆ ಅಲ್ಪಸಂಖ್ಯಾತರಾಗಿದ್ದ ಮಾತ್ರಕ್ಕೆ ಅಭದ್ರತೆಯ ಭಾವನೆ ಬರಬೇಕೆಂದೇನಿಲ್ಲ. ಅಭದ್ರತೆಯ ಭಾವನೆ ಬೆಳೆಯುವುದು ಅಂತಹ ಒಂದು ವಿಶಿಷ್ಟ ಪರಿಸ್ಥಿತಿ ನಿರ್ಮಾಣವಾದಾಗ. ನನಗನಿಸುವ ಪ್ರಕಾರ ಕೋಮುಗಲಭೆಗಳು ಬರಿಯ ಲಕ್ಷಣ, ನಿಜವಾದ ರೋಗ ಬೇರೆ. ಕೋಮು ಸಿದ್ಧಾಂತ ನಿಜವಾದ ರೋಗ. ಇದರಿಂದಲೇ ಕೋಮು ಘರ್ಷಣೆಗಳು ಮತ್ತು ಅಭದ್ರತೆಯ ಭಾವನೆ ಬರಲು ಸಾಧ್ಯ. ಕೋಮು ಸಿದ್ಧಾಂತಗಳ ವಿರುದ್ಧ ಹೋರಾಡದೆ ಕೋಮುಗಲಭೆಗಳನ್ನು ತಡೆಯುವುದು ಕಷ್ಟ.

ಮಿಕಿಮೌಸ್ ಹಾಗೂ ಭೋಪಾಲ್ ದುರಂತ

'ಮಿಕಿಮೌಸ್' ಹುಟ್ಟುಹಬ್ಬ ಆಚರಿಸಲು ಖರ್ಚು ಎಷ್ಟು ಗೊತ್ತೇ? ಕೇವಲ 6ಕೋಟಿ. ಅಬ್ಬಾ ಆ ಧನಾಢ್ಯ ಯಾರಿರಬಹುದೆಂದು ಹುಬ್ಬೇರಿಸುತ್ತೀರಾ?

ಅಮೆರಿಕಾದ ಹುಚ್ಚು ದರ್ಬಾರು ನಡೆಸಿರುವ ಆಟ ಇದು. ಮಿಕಿಮೌಸ್ ಒಂದು ಇಲಿ ಅದೂ ಸಹ ಚಿತ್ರಕಾರರ ಕಾಲ್ಪನಿಕ ಇಲಿ. ಅದಕ್ಕೆ 60ವರ್ಷ ಆಯಿತಂತೆ. ಅಮೆರಿಕಾಗೆ ಕೋಡು ಬಂದಿದೆ ಇದಕ್ಕಾಗಿ ವಿಶ್ವದಾದ್ಯಂತ ನಡೆಯುವ ಇದರ ಹುಟ್ಟುಹಬ್ಬಕ್ಕೆ 6 ಕೋಟಿ ಡಾಲರುಗಳನ್ನು ವೆಚ್ಚ ಮಾಡುತ್ತಿದೆ.

ಕರ್ನಾಟಕದಲ್ಲೂ ಕೆಲವೇ ದಿನಗಳಲ್ಲಿ ಮಿಕ್ಕಿ ಮೂತಿ ತೋರಿಸಲಿದೆ. ಮಧ್ಯ ಪ್ರದೇಶದ ಭೋಪಾಲ್ ದುರಂತದಿಂದ ಸಹಸ್ರಾರು ಜನರನ್ನು ಇಲ್ಲವಾಗಿಸಿದ ಅಮೆರಿಕಾ ಅವರಿಗೆ ಪರಿಹಾರ ನೀಡದೆ ತಪ್ಪಿಸಿಕೊಂಡಿರುವಾಗ ಯಕಃಶ್ಚಿತ್ ಇಲಿಯ ಹುಟ್ಟುಹಬ್ಬ ಆಚರಿಸಲು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿರುವುದು ನಿಜಕ್ಕೂ ಆಶ್ಚರ್ಯಕರ. ಭೋಪಾಲ್ ದುರಂತ ನಡೆದ 4 ವರ್ಷಗಳ ಸತತ ನೋವಿನಲ್ಲಿ ಕಾರ್ಮಿಕರು

ಕೈಗಾರಿಕಾ ವಿವಾದ ಮಸೂದೆಯ ತಿದ್ದುಪಡಿಗಳಿಗೆ 5 ರಾಜ್ಯಗಳ ವಿರೋಧ

ಕೇಂದ್ರ ಸರ್ಕಾರ ತಂದಿರುವ ಕಾರ್ಮಿಕ ಸಂಘಗಳ ಮತ್ತು ಕೈಗಾರಿಕಾ ವಿವಾದಗಳ ಮಸೂದೆಯ ವಿವಿಧ ಅಂಶಗಳನ್ನು ಕೇರಳ, ಪಶ್ಚಿಮ ಬಂಗಾಳ, ಕರ್ನಾಟಕ, ಆಂಧ್ರಪ್ರದೇಶ ಹಾಗೂ ಅಸ್ಸಾಂ ಸರ್ಕಾರಗಳು ವಿರೋಧಿಸಿವೆ.

ಕೇಂದ್ರ ಸರ್ಕಾರ 1926 ಟ್ರೇಡ್ ಯೂನಿಯನ್ ಶಾಸನ ಮತ್ತು 1947ರ ಕೈಗಾರಿಕಾ ವಿವಾದ ಶಾಸನ ಮಾತ್ರವಲ್ಲ ಇತರ ಸಂಬಂಧಪಟ್ಟ ಕಾರ್ಮಿಕ ಶಾಸನಗಳ ಅಸಮರ್ಪಕತೆಗಳನ್ನು ನಿವಾರಿಸುವುದು ಹೆಚ್ಚು ಸೂಕ್ತವಾಗುತ್ತಿತ್ತು ಎಂದು ಈ ರಾಜ್ಯ ಸರ್ಕಾರಗಳು ಅಭಿಪ್ರಾಯ ಪಟ್ಟಿವೆ.

ಸಾಮೂಹಿಕ ಚೌಕಾಸಿಯನ್ನು ಮಿತಿಗೊಳಿಸಿ ಈ ಮಸೂದೆ ಕೈಗಾರಿಕಾ ಸಾಮರಸ್ಯ ಕಾಪಾಡುವ ಬದಲು ಅದರ ವಿರುದ್ಧ ಪರಿಣಾಮ ಬೀರಲಿದೆ. ಸದ್ಯ ಇರುವ ಕಾರ್ಮಿಕ ಸಂಘಗಳ ಮೇಲೆ ಅನಗತ್ಯ ಒತ್ತಡ ಹೇರುತ್ತದೆ, ಮಾಲೀಕರು ತಮ್ಮ ಆಶೀರ್ವಾದ ಪಡೆದ ಸಂಘಗಳನಷ್ಟೇ ಕಾರ್ಮಿಕರು ಆರಿಸುವಂತೆ ಒತ್ತಾಯ ಹೇರಲು ಅವಕಾಶ ನೀಡುತ್ತದೆ ಎಂದು ಈ ಸರ್ಕಾರಗಳು ತಕರಾರು ಎತ್ತಿವೆ. ಕಾರ್ಮಿಕ ಸಂಘಗಳ ಕಾರ್ಯಕಾರಿ ಸಮಿತಿಯಲ್ಲಿ ಇಬ್ಬರಿಗಿಂತ ಹೆಚ್ಚು ಸಂಖ್ಯೆಯ ಹೊರಗಿನವರು ಇರಬಾರದೆಂಬ ಮಿತಿಯನ್ನು ಈ ಸರ್ಕಾರಗಳು ವಿರೋಧಿಸಿವೆ ಎಂದು ತಿಳಿದುಬಂದಿದೆ.

ಪೌರ ನೌಕರರ ಪ್ರದರ್ಶನ

ಬೆಳಗಾಂ ಜಿಲ್ಲೆ ರಾಮದುರ್ಗದ ಪೌರ ಕಾರ್ಮಿಕರು ಖಾಯಂಗಾಗಿ, ಸಮವಸ್ತ್ರ, ತಲೆಯ ಮೇಲೆ ಮಲ ಹೊರುವುದನ್ನು ಪ್ರತಿಭಟಿಸಿ ಸರ್ವೀಸ್ ಆಧಾರದ ಮೇಲೆ ಬಡ್ತಿ ಮುಂತಾದ ಬೇಡಿಕೆ ಒತ್ತಾಯಿಸಿ ಪುರಸಭೆಯ ಕಚೇರಿ ಸಿಬ್ಬಂದಿ ಹಾಗೂ ಮಹಿಳಾ ಕೆಲಸಗಾರರನ್ನು ಒಳಗೊಂಡು ಆಕರ್ಷಕ ಮೆರವಣಿಗೆ ನಡೆಸಿದರು. ಸಂಘದ ಅಧ್ಯಕ್ಷ ಕಾ॥ ಬಿ.ಪಿ.ಕುಲಕರ್ಣಿ ಉಪಾಧ್ಯಕ್ಷ ಶ್ರೀ ವಿ.ವಿ.ಜೋಷಿ, ಅಧ್ಯಾಪಕ ಎಸ್.ಬಿ.ಹಳ್ಳಿ ಮುಂತಾದವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದರು. ಕಾ॥ ಜಮಾದಾರ ಪ್ರಧಾನ ಕಾರ್ಯದರ್ಶಿ, ಖಜಾಂಚಿ ಶಿಂಧೆ, ಕಾರ್ಯದರ್ಶಿ ಜೋಷಿಯವರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಬ್ಯಾಂಕ್ ನೌಕರರ ಪ್ರದರ್ಶನ

ಮೈಸೂರಿನ ಕೆ.ಆರ್.ವೃತ್ತದ ಬಳಿ ಇರುವ ಸಿಂಡಿಕೇಟ್ ಬ್ಯಾಂಕ್ ಆಡಳಿತ ವರ್ಗ ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ ಸಂಘವನ್ನು ಬಿಟ್ಟು ಉಳಿದ ಎರಡು ಸಂಘಗಳೊಂದಿಗೆ ಕಾರ್ಮಿಕ ವಿರೋಧಿ ಒಪ್ಪಂದ ಮಾಡಿಕೊಳ್ಳುತ್ತಿರುವುದನ್ನು ಪ್ರತಿಭಟಿಸಿ ಜನವರಿ 9ರಂದು ಶಾಖೆಯ ಎದುರು ಬ್ಯಾಂಕ್, ಎಲ್.ಐ.ಸಿ., ಅಂಚೆ ಇಲಾಖೆ, ಮತ್ತಿತರ ಕಾರ್ಮಿಕ ಸಂಘ ಸಂಸ್ಥೆಗಳ ನೌಕರರು ಪ್ರತಿಭಟನಾ ಪ್ರದರ್ಶನ ನಡೆಸಿದರು. ಈ ಪ್ರದರ್ಶನದಲ್ಲಿ ನೂರಾರು ನೌಕರರು ಭಾಗವಹಿಸಿದ್ದರು. ಈ ಒಪ್ಪಂದದಿಂದ ನೌಕರರಿಗಾಗುವ ಅನ್ಯಾಯವನ್ನು ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ॥ ಡಿ.ಎಲ್.ಆದಿಶೇಷರವರು ವಿವರಿಸಿದರು.

ಡಿ.ವೈ.ಎಫ್.ಐ. ಚಟುವಟಿಕೆಗಳು

ದ.ಕ.ಜಿಲ್ಲೆ

ದ.ಕ.ಜಿಲ್ಲೆಯ ಕುಪ್ಪೆಪದವು ವಲಯ ಸಮ್ಮೇಳನ ಮಂಗಳೂರು ಸಮುದಾಯದ ಕಾರ್ಯದರ್ಶಿ ವಾಸುದೇವ ಉಚ್ಚಿಲ್‌ರ ಉದ್ಘಾಟನೆ ಯೊಂದಿಗೆ ಆರಂಭವಾಯಿತು. ಮತೀಯ-ಕೋಮುವಾದಿ ಶಕ್ತಿಗಳನ್ನೆದುರಿಸಿ ಡಿ.ವೈ.ಎಫ್.ಐ. ಸಂಘಟನೆ ರಾಷ್ಟ್ರ ಮಟ್ಟದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಹೇಳಿದರು. ವಾಸುದೇವ ಆಚಾರಿಯವರು ಧ್ವಜಾರೋಹಣ ಮಾಡಿದರು. ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಬಾಲಕೃಷ್ಣಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ವಿವಿಧ ಸಂಘಟನೆಗಳಿಂದ ಶುಭ ಕೋರಿ ಮಾತನಾಡಿದರು. ಮುಂದಿನ ಸಾಲಿಗೆ ಅಹಮ್ಮದ್ (ಅಧ್ಯಕ್ಷ) ಸದಾಶಿವದಾಸ್ (ಉಪಾಧ್ಯಕ್ಷ) ಭಾಸ್ಕರ ಆಚಾರಿ (ಕಾರ್ಯದರ್ಶಿ) ಸುಧಾಕರ (ಜೊತೆ ಕಾರ್ಯದರ್ಶಿ)ಯನ್ನೊಳಗೊಂಡ 11ಜನರ ಕಾರ್ಯಕಾರಿ ಸಮಿತಿ ರಚಿಸಲಾಯಿತು. ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಕಾ॥ ಸುನೀಲ್ ನಟೇಕರ್, ಶಿವಾನಂದಕೋಡಿಯವರುಗಳು ಮಾತನಾಡಿದರು. ಸಂಜೆ ಮೆರವಣಿಗೆ ಬಹಿರಂಗ ಸಭೆಯನ್ನು ನಡೆಸಲಾಯಿತು.

ಬಂಗಾರ ಪೇಟೆ

ಸಮೀಪದ ಕೆರೆಕೋಡಿ ಗ್ರಾಮದಲ್ಲಿರುವ ಹರಿಜನ ಹಾಗೂ ಹಿಂದುಳಿದ ವರ್ಗಗಳ ಜನರ ಅಭಿವೃದ್ಧಿಗಾಗಿ ಹಾಗೂ ಮಕ್ಕಳ ಶೈಕ್ಷಣಿಕ ಸೌಲಭ್ಯಕ್ಕಾಗಿ ಕೆರೆಕೋಡಿ ಗ್ರಾಮದಲ್ಲಿ ಕೂಡಲೇ ಒಂದು ಅಂಗನವಾಡಿ ಕೇಂದ್ರವನ್ನು ಆರಂಭಿಸಬೇಕೆಂದು ಬಂಗಾರು ಪೇಟೆ ಘಟಕ ಬಾಲವಿಕಾಸ ಯೋಜನಾಧಿಕಾರಿಗಳನ್ನು ಒತ್ತಾಯಿಸಿದೆ.

ಜಪ್ಪಿನ ಮೊಗರು

ಡಿಸೆಂಬರ್ 25 ರಂದು ಘಟಕ ಸಮ್ಮೇಳನವನ್ನು ಮಂಗಳೂರು ತಾಲ್ಲೂಕು ಅಧ್ಯಕ್ಷ ಕಾ॥ ಸದಾಶಿವಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಡಿ.ವೈ.ಎಫ್.ಐ. ಜಿಲ್ಲಾ ಮುಖಂಡರಾದ ಕಾ॥ ಯು.ಬಿ.ನಾರಾಯಣ, ರಮೇಶ್ ಉಳ್ಳಾಲ್, ಶಿವಾನಂದಕೋಡಿ, ನವೀನ್ ಕೆ.ಯವರು ಮಾತನಾಡಿದರು. ಜಪ್ಪಿನ ಮೊಗರು ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ಉರುವಲು ಸಮಸ್ಯೆ, ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸಮ್ಮೇಳನ ಮಂಗಳೂರು ಮಹಾನಗರ ಪಾಲಿಕೆಯನ್ನು ಒತ್ತಾಯಿಸುವ ಠರಾವು ಅಂಗೀಕರಿಸಿತು. ನೂತನ ಸಮಿತಿಗೆ ನಾರಾಯಣ ಅಚನ್ (ಅಧ್ಯಕ್ಷ) ಸೀತಾರಾಮಶೆಟ್ಟಿ (ಕಾರ್ಯದರ್ಶಿ) ಶ್ರೀನಿವಾಸ್ ಕೆ. (ಜೊತೆ ಕಾರ್ಯದರ್ಶಿ) ಲೋಕೇಶ್ ಕೆ. ಕೋಶಾಧಿಕಾರಿಯಾಗಿರುವ 9ಮಂದಿ ಕಾರ್ಯಕಾರಿ ಸಮಿತಿ ರಚಿಸಲಾಯಿತು.

ಕೋಲಾರ

ಜಿಲ್ಲೆಯ ಗುಡಿಬಂಡೆ ತಾಲ್ಲೂಕು ಹಂಪಸಂದ್ರ ಗ್ರಾಮದಲ್ಲಿ ಸರ್ವ ಸದಸ್ಯರ ಸಭೆ ಜರುಗಿತು. ಜಿಲ್ಲಾ ಸಮಿತಿ ಸದಸ್ಯ ಕಾ॥ ಗಂಗಾಧರಪ್ಪ, ಬಾಗೇಪಲ್ಲಿಯ ಕಾ॥ ಮಂಜೂರ್ ಅಹಮ್ಮದ್‌ರವರು ಭಾಗವಹಿಸಿ ಸಂಘಟನೆ ಧ್ಯೇಯ ಧೋರಣೆ ಕುರಿತು ಮಾತನಾಡಿದರು. ಗ್ರಾಮ ಘಟಕಕ್ಕೆ ವೆಂಕಟರಾಜು (ಕಾರ್ಯದರ್ಶಿ) ರಂಗಪ್ಪ (ಸಹಕಾರ್ಯದರ್ಶಿ) ನಾರಾಯಣಸ್ವಾಮಿ (ಅಧ್ಯಕ್ಷ) ಮುದ್ದರಂಗಪ್ಪ (ಉಪಾಧ್ಯಕ್ಷ) ರಾಜಕುಮಾರ್ (ಖಜಾಂಚಿ)ಯವರನ್ನೊಳಗೊಂಡ 13 ಜನರ ಸಮಿತಿ ರಚಿಸಲಾಯಿತು.

ಭೂಮಿಗೆ ಪಟ್ಟಾ ಕೊಡಿ, ರಕ್ಷಣೆ ಕೊಡಿ

ಬಳ್ಳಾರಿ ಜಿಲ್ಲೆ ಸಿರುಗುಪ್ಪಾ ತಾಲ್ಲೂಕು ದೇಶನೂರು ಗ್ರಾಮದಲ್ಲಿ ಭೂರಹಿತ ಕೃಷಿ ಕೂಲಿಗಾರರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಐವತ್ತು ಎಕರೆ ರೆವಿನ್ಯೂ ಜಮೀನನ್ನು ಹಿಡಿದು ಸಾಗುವಳಿ ಮಾಡುತ್ತಿದ್ದಾರೆ. ಸ್ಥಳೀಯ ಜನತಾ ಪಕ್ಷದ ಮಂಡಲ ಉಪ ಪ್ರಧಾನ ಹುಲಗುಪ್ಪಾ ಹಾಗೂ ಅಧಿಕಾರಿಗಳು ಸೇರಿ ಈ ಬಡ ರೈತರನ್ನು ಒಕ್ಕಲೆಬ್ಬಿಸುವ ಕುತಂತ್ರ ನಡೆಸುತ್ತಿರುವುದನ್ನು ಪ್ರತಿಭಟಿಸಿ ಡಿಸೆಂಬರ್ 30ರಂದು ಇನ್ನೂರಕ್ಕೂ ಹೆಚ್ಚು ಕೃಷಿ ಕೂಲಿಕಾರರು ಸಿರುಗುಪ್ಪಾದ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ಪ್ರದರ್ಶನ ನಡೆಸಿದರು.

ತಹಸೀಲ್ದಾರ್‌ರವರಿಗೆ ಮನವಿಯೊಂದನ್ನು ಅರ್ಪಿಸಿ ತಮಗೆ ಆಗುತ್ತಿರುವ ಕಿರುಕುಳ ತಪ್ಪಿಸಿ ಇನಾಂ ಹಾಗೂ ಪರಂಭೋಕ್ ಭೂಮಿಗಳಿಗೆ ಪಟ್ಟಾ ನೀಡಬೇಕೆಂದು ಹಾಗೂ ಭೂಮಾಲೀಕರ ಒತ್ತಡಕ್ಕೆ ಮಣಿಯದೆ ತಮಗೆ ರಕ್ಷಣೆ ನೀಡಬೇಕೆಂದು ಒತ್ತಾಯಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್‌ರವರು ನಿಮ್ಮ ಬೇಡಿಕೆಗಳ ಬಗ್ಗೆ ತಮಗೆ ಸಹಾನುಭೂತಿ ಇರುವುದಾಗಿ ಹಾಗೂ ಪೊಲೀಸ್ ರಕ್ಷಣೆ ಒದಗಿಸುವುದಾಗಿ ಆಶ್ವಾಸನೆ ನೀಡಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ॥ ಪ್ರಸನ್ನ ಕುಮಾರ್‌ರವರು ಹಾಗೂ ಶುಗರ್ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿ ಕಾಂ॥ ಬಿ.ವೀರಣ್ಣ ಹಾಗೂ ಯುವ ನಾಯಕ ಎಲ್ಲಪ್ಪ ಮಾತನಾಡಿದರು.

ತಾಲ್ಲೂಕಿನ ವಿವಿಧ ಭಾಗಗಳಲ್ಲಿ ರೈತ ಸಂಘ ರೈತರನ್ನು ಸಂಘಟಿಸಿ ನಡೆಸಿದ ಹೋರಾಟದಲ್ಲಿ ಈಗಾಗಲೇ ಸುಮಾರು ೩೦೦ ಎಕರೆ ಜಮೀನನ್ನು ರೈತರು ವಶಪಡಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ. ತಾಲ್ಲೂಕಿನ ರಾರಾವಿ, ಸುಗೂರು, ಶಾರವಾಸಪುರ, ದರೂರು, ಹಾಗಲೂರು, ಕೆಂಚನಗುಡ್ಡ, ತಾಂಡ, ಉತ್ತನೂರು, ಗ್ರಾಮಗಳ ರೈತರು ಈ ಭೂಮಿ ಸಾಗುವಳಿ ಕೈಗೊಂಡು ಸಾಗುವಳಿ ಭೂಮಿಯ ಪಟ್ಟವನ್ನು ಪಡೆಯಲು ಹೋರಾಡುತ್ತಿದ್ದಾರೆ.

ರೈತ ಸೇವಾ ಸಹಕಾರ ಸಂಘದ ಅವ್ಯವಹಾರ

ಜೇವರ್ಗಿ ತಾಲ್ಲೂಕಿನ ಸೊನ್ನ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘ ಕ್ರಿಮಿಕೀಟನಾಶಕ ಔಷಧಿಯನ್ನು ದುಬಾರಿ ಬೆಲೆಗೆ ಮಾರಿ ರೈತರಿಗೆ ರಸೀದಿ ಸಹ ನೀಡದೆ ಅವ್ಯವಹಾರ ಮಾಡಿದ ಬಗ್ಗೆ ಡಿಸೆಂಬರ್ 26ರಂದು ಡಿ.ಸಿ.ಸಿ. ಬ್ಯಾಂಕ್ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆ ರೈತ ಸಂಘದ ಜೇವರ್ಗಿ ತಾಲ್ಲೂಕು ಸಮಿತಿ ಮನವಿ ಸಲ್ಲಿಸಿತು. ಈ ನಿಯೋಗದಲ್ಲಿ ರೈತ ಸಂಘದ ಜಿಲ್ಲಾ ನಾಯಕ ಕಾ॥ ಕಲ್ಪಪ್ಪಕಿರಣಗಿ, ಅರುಣ್‌ಕುಮಾರ್, ವೆಂಕೋಬರಾವ್‌ರವರು ನಾಯಕತ್ವ ವಹಿಸಿದ್ದರು. ವ್ಯವಸಾಯ ಸಹಕಾರ ಸಂಘದ ಸದಸ್ಯರಿಗೆ ಸಾಲ ನೀಡಿದರ ಸಹ ಬಗ್ಗೆಯೂ ಸರಿಯಾದ ಮಾಹಿತಿಗಳಿಲ್ಲದೆ ರಸೀತಿ ಇಲ್ಲದೆ ನಡೆಯುತ್ತಿರುವ ಅವ್ಯವಹಾರದ ಬಗ್ಗೆಯೂ ಕ್ರಮ ಕೈಗೊಳ್ಳಬೇಕೆಂದೂ ನಿಯೋಗ ಒತ್ತಾಯಿಸಿತು.

ರೈತ ಸಂಘದ ಚಟುವಟಿಕೆಗಳು

ಗ್ರಾಮಸಮಾವೇಶ

ಪುತ್ತೂರು ತಾಲ್ಲೂಕು ಬಜತ್ತೂರು ರೈತರ ಸಮಾವೇಶ ಡಿಸೆಂಬರ್ 17ರಂದು ನಡೆಯಿತು. ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಕಾಂ॥ ಅಬ್ರಹಾಂ ಕರ್ಕಡ, ಉಪಾಧ್ಯಕ್ಷ ಜನಾರ್ಧನನಾಯಕ್‌ರವರು ಕಿಸಾನ್ ಸಭಾದ ಚರಿತ್ರೆ, ನಡೆಸಿದ ಹೋರಾಟ, ಸಂಘಟನೆಯನ್ನು ಕುರಿತು ವಿವರಿಸಿದರು. ತಾಲ್ಲೂಕು ಕಾರ್ಯದರ್ಶಿ ಕಾಂ॥ ವಿಲ್ಫ್ರೆಡ್ ಡಿಸೋಜ ಮುಖ್ಯ ಅತಿಥಿಗಳಾಗಿದ್ದರು. ಕಾಂ॥ ಅಣ್ಣಯ್ಯ ಗೌಡ ಉದ್ಘಾಟಿಸಿದರು. ಗ್ರಾಮದ 100ಕ್ಕೂ ಹೆಚ್ಚು ರೈತರು ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ನೂತನ ಸಮಿತಿಗೆ ಕಾಂ॥ ಅಣ್ಣಯ್ಯಗೌಡ (ಅಧ್ಯಕ್ಷ) ಪಾಲ್ ಡಿಸೋಜ (ಕಾರ್ಯದರ್ಶಿ) ರಾಮಣ್ಣಗೌಡ (ಉಪಾಧ್ಯಕ್ಷ) ಬಾಬುಮೂಲ್ಯ (ಸಹಕಾರ್ಯದರ್ಶಿ) ಅಣ್ಣು ಗೌಡ (ಖಜಾಂಚಿ)ಯರನ್ನೊಳಗೊಂಡ 16 ಜನರ ಸಮಿತಿ ರಚಿಸಲಾಯಿತು.

ಕೊಕ್ಕೋ ತೋಟ ಕಾರ್ಮಿಕರ ಸಮಾವೇಶ

ಪುತ್ತೂರು, ಸುಳ್ಯ ತಾಲ್ಲೂಕಿನ ಕ್ಯಾಂಪ್ಕೋ ಸಂಸ್ಥೆಗೆ ಸೇರಿದ ತೋಟ ಕಾರ್ಮಿಕರ ಸಮಾವೇಶ ಜನವರಿ 8ರಂದು ಪುತ್ತೂರಿನ ಎನ್.ಜಿ.ಓ. ಸಭಾಂಗಣದಲ್ಲಿ ನಡೆಯಿತು. ಸಮಾವೇಶಕ್ಕೆ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದರು.

ಸಿ.ಪಿ.ಟಿ.ಯು. ರಾಜ್ಯ ಹಾಗೂ ಜಿಲ್ಲಾ ಮುಖಂಡರಾದ ಕಾಂ॥ ಮೂಸಬ್ಬ ಹಾಗೂ ಬಿ.ಮಾಧವರವರು ಕೋಕೋ ಕಾರ್ಮಿಕರನ್ನು ಕಾನೂನು ಕಾಯ್ದೆಗಳ ಕಣ್ಣು ತಪ್ಪಿಸಿ ವಂಚಿಸುತ್ತಿರುವ ಬಗ್ಗೆ ವಿವರಿಸಿದರು. ಮೊದಲಿಗೆ ಕಾಂ॥ ಸತೀಶನ್ ಸ್ವಾಗತಿಸಿದರು. ಕಾಂ॥ ಸೂರ್ಯನಾರಾಯಣ್ ಭಟ್ ಅಧ್ಯಕ್ಷತೆ ವಹಿಸಿದ್ದರು. ಬೇಡಿಕೆಗಳನ್ನು ಮುಂದಿಟ್ಟು ಜನವರಿ 21ರಂದು ಸಾಂಕೇತಿಕ ಮುಷ್ಕರ ನಡೆಸಲು ನಿರ್ಧರಿಸಲಾಯಿತು.

ಜನವರಿ 14ರಂದು ನಡೆದ ಪುತ್ತೂರು ತಾಲ್ಲೂಕು ರೈತ ಸಂಘದ ಸಭೆ ಕ್ಯಾಂಪ್ಕೋ ಸಂಸ್ಥೆಗೆ ಸೇರಿದ ಕೋಕೋ ತೋಟ ಕಾರ್ಮಿಕರ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು. ಫೆ. 16ರಂದು ಉಪ್ಪಿನಂಗಡಿಯಲ್ಲಿ ತಾಲ್ಲೂಕು ರೈತ ಸಂಘದ ಸಮ್ಮೇಳನ ನಡೆಸಲು ನಿರ್ಧರಿಸಿ ಇದಕ್ಕೆ ಪೂರ್ವಭಾವಿಯಾಗಿ ಗ್ರಾಮ ಸಮ್ಮೇಳನಗಳನ್ನು ನಡೆಸಲು ನಿರ್ಧರಿಸಿತು.

ಕೃಷಿ ಕೂಲಿಗಾರರ ನೆರವಿಗೆ ವಿಮಾ ನೌಕರರ ಒತ್ತಾಯ

ಆಗಸ್ಟ್ 15 1987ರಿಂದ ಜಾರಿಗೆ ಬಂದಿರುವ ಭೂರಹಿತ ಕೃಷಿ ಕೂಲಿ ಕಾರ್ಮಿಕರ ಸಾಮೂಹಿಕ ವಿಮಾ ಯೋಜನೆಯನ್ವಯ ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಮತ್ತು ಅವರಿಗೆ ಸಕಾಲಿಕ ನೆರವು ನೀಡುವಲ್ಲಿ ಕರ್ನಾಟಕ ಸರ್ಕಾರ ಹಾಗೂ ಅಧಿಕಾರಿಗಳು ನಿರ್ಲಕ್ಷ್ಯ ಮನೋಭಾವ ತಳೆದಿರುವುದನ್ನು ಪ್ರತಿಭಟಿಸಿ ವಿಮಾ ನೌಕರರ ಸಂಘದ ದ.ಕ.ಜಿಲ್ಲೆಯ ಬಂಟ್ವಾಳ ಘಟಕ ಮತ ಪ್ರದರ್ಶನ ನಡೆಸಿದೆ. ಕ್ಲೈಂ ಪತ್ರಗಳನ್ನು ಸಲ್ಲಿಸಿರುವ ಎಲ್ಲಾ ಅರ್ಹಫಲಾನುಭವಿಗಳಿಗೆ ಶೀಘ್ರದಲ್ಲೇ ಹಣ ದೊರಕಿಸಬೇಕೆಂದು ಒತ್ತಾಯಿಸಿದೆ. ಈ ಕುರಿತು ರಾಜ್ಯ ಮುಖ್ಯಮಂತ್ರಿಯವರಿಗೂ ಮನವಿ ಮಾಡಿಕೊಂಡಿರುವುದಾಗಿ ಸಂಘದ ಕಾರ್ಯದರ್ಶಿ ಶಂಕರಶೆಟ್ಟಿಯವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಪ್ರದರ್ಶನ ನಂತರ ನಡೆದ ಸಭೆಯನ್ನುದ್ದೇಶಿಸಿ ಸಂಘದ ಅಧ್ಯಕ್ಷ ರಾಮಯ್ಯಶೆಟ್ಟಿ, ಶಂಕರ್‌ಶೆಟ್ಟಿ, ಶೀಬಾಡಿ ನಾಯರ್‌ರವರುಗಳು ಮಾತನಾಡಿದರು

ಎಸ್.ಎಫ್.ಐ. ರಾಯಚೂರು ಜಿಲ್ಲಾ 6ನೇ ಸಮ್ಮೇಳನ

ಜಿಲ್ಲೆಯ ಕುಷ್ಟಗಿಯಲ್ಲಿ ಜನವರಿ 10ರಂದು 6ನೇ ರಾಯಚೂರು ಜಿಲ್ಲಾ ಸಮ್ಮೇಳನವನ್ನು ಕಾ॥ ಗಂಗಾಧರ ಕುಷ್ಟಗಿ ಉದ್ಘಾಟಿಸಿ ಭಗವತ್‌ಸಿಂಗ್, ಚಂದ್ರಶೇಖರ್ ಆಜಾದ್‌ರಂತೆ ಇಂದಿನ ವಿದ್ಯಾರ್ಥಿಗಳು ದೇಶಕ್ಕಾಗಿ ದೇಶದ ಐಕ್ಯತೆ ಸಮಗ್ರತೆ ಕಾಪಾಡಲು ಶ್ರಮಿಸಬೇಕೆಂದು ಕರೆ ನೀಡಿದರು. ಕಾ॥ ಶೇಕ್ಷಾಖಾದ್ರಿಯವರು ಧ್ವಜಾರೋಹಣ ಮಾಡಿದರು. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಕಾ॥ ಪುರುಷೋತ್ತಮರವರು ಮುಖ್ಯ ಅತಿಥಿಗಳಾಗಿದ್ದರು. ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಕಾ॥ ಬೈಯಾರೆಡ್ಡಿಯವರು ಮಾತನಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳಿಂದ ಇಂದಿನ ವಿದ್ಯಾರ್ಥಿ-ಯುವ ಜನತೆಯನ್ನು ವಂಚಿತರನ್ನಾಗಿ ಮಾಡುತ್ತಿರುವುದರ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ರಾಜ್ಯ ಸಹ ಕಾರ್ಯದರ್ಶಿ ಕಾ॥ ಎಲ್.ಮಂಜುನಾಥ್ ಮಾತನಾಡಿದರು.

ಜಿಲ್ಲೆಯ ವಿವಿಧ ಭಾಗಗಳಿಂದ ಬಂದ ಸಾವಿರಾರು ವಿದ್ಯಾರ್ಥಿಗಳು ಬೃಹತ್ ರ‍್ಯಾಲಿ ನಡೆಸಿ ಬಹಿರಂಗ ಸಭೆ ನಡೆಸಲಾಯಿತು. ಸಭೆಯಲ್ಲಿ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್, ಬೈಯಾರೆಡ್ಡಿ, ಪುರುಷೋತ್ತಮ ಮುಂತಾದವರು ಮಾತನಾಡಿದರು. ಪಿ.ಯು.ಸಿ. ಮಂಡಳಿ ರದ್ದತಿ, ಪರೀಕ್ಷಾ ಸುಗ್ರೀವಾಜ್ಞೆ, ನೂತನ ಶಿಕ್ಷಣ ನೀತಿ ವಾಪಸು, ಜಿಲ್ಲೆಯಲ್ಲಿ ಮುಚ್ಚಿರುವ ಕಾರ್ಖಾನೆ ತೆರೆಯಬೇಕು, ಮಹಿಳೆಯರ ಮೇಲೆ ನಡೆದ ಅತ್ಯಾಚಾರದ ಖಂಡನೆ ಕುರಿತು ನಿರ್ಣಯಗಳನ್ನು ಸಮ್ಮೇಳನ ಸ್ವೀಕರಿಸಿತು.

ನೂತನ ಜಿಲ್ಲಾ ಸಮಿತಿಗೆ ಕಾ॥ ಶೇಕ್ಷಾಖಾದ್ರಿ (ಅಧ್ಯಕ್ಷ) ಪ್ರಭುಗೌಡ ಪ್ರಭುರಾಜ ಹಿರೇಅರಳಿಹಳ್ಳಿ (ಉಪಾಧ್ಯಕ್ಷರು) ಎಸ್. ರಾಮನಗೌಡ (ಕಾರ್ಯದರ್ಶಿ) ಬಸವಂತರಾಯ್ ದೇವೇಂದ್ರಗೌಡ, ಅಕ್ಕಮಹಾದೇವಿ (ಸಹಕಾರ್ಯದರ್ಶಿಗಳು)ಯವರನ್ನೊಳಗೊಂಡ 17 ಜನರ ಕಾರ್ಯಕಾರಿ ಸಮಿತಿ ಆಯ್ಕೆ ಮಾಡಲಾಯಿತು.

ಬಿಜಾಪುರದಲ್ಲಿ ಬೃಹತ್ ರ‍್ಯಾಲಿ

ಜನವರಿ 11ರಂದು ಬಿಜಾಪುರದ ವಿವಿಧ ಶಾಲಾ-ಕಾಲೇಜುಗಳನ್ನು ಬಹಿಷ್ಕರಿಸಿ ಸಾವಿರಾರು ವಿದ್ಯಾರ್ಥಿಗಳು ಬೃಹತ್ ಮೆರವಣಿಗೆಯೊಂದನ್ನು ನಡೆಸಿ, ಪಿ.ಯು.ಸಿ. ಮಂಡಳಿ ರದ್ದತಿ ಹಾಗೂ ಪರೀಕ್ಷಾ ಸುಗ್ರೀವಾಜ್ಞೆ ಹಿಂತೆಗೆದುಕೊಳ್ಳಲು ಒತ್ತಾಯಿಸಿ ಉಪ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು. ನಂತರ ನಡೆದ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ. ನಾಯಕ್, ಎಲ್.ವೈ.ಹಂದ್ರಾಳ, ಯುವ ನಾಯಕ ಮನ್ನುಸಾಬ ಕಲಾದಗಿ ಎನ್.ಎಲ್.ನದಾಫ್ ಹಾಗೂ ವಿವಿಧ ಕಾಲೇಜುಗಳ ಮುಖಂಡರು ಮಾತನಾಡಿದರು.

ಸಾಮೂಹಿಕ ಚಳುವಳಿ ಸಂಘಟಿಸಬೇಕು

ಸಿ.ಪಿ.ಐ.(ಎಂ)ನ ಕರ್ನಾಟಕ ರಾಜ್ಯ ಸಮಿತಿಯ ಇದೇ ಜನವರಿ 23ರಿಂದ 25 ರವರೆಗೆ ನಡೆದ ಸಭೆ ದೇಶದ ಹಾಗೂ ರಾಜ್ಯದ ರಾಜಕೀಯದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಪರಿಶೀಲಿಸಿ, ಚರ್ಚಿಸಿ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಕೇಂದ್ರ-ರಾಜ್ಯ ಸಂಬಂಧಗಳು ಹದಗೆಡುತ್ತಿರುವುದರಿಂದ ಮತ್ತು ರಾಜ್ಯದ ಆಡಳಿತ ಯಂತ್ರ ಚಲನೆ ಕಳೆದುಕೊಂಡಿದ್ದರಿಂದ ರಾಜ್ಯದ ಆರ್ಥಿಕ ರಂಗದ ಮೇಲಾಗಿರುವ ಪರಿಣಾಮ, ಉನ್ನತ ಶಿಕ್ಷಣದ ಖಾಸಗೀಕರಣದ, ಅಲ್ಲಲ್ಲಿ ತಲೆಯೆತ್ತುತ್ತಿರುವ ಮತೀಯ-ಜಾತೀಯ ಸಂಕುಚಿತವಾದಿಗಳು, ಜಿಲ್ಲಾ, ಮಂಡಲ್ ಪಂಚಾಯತ್ ಫಲಿತಾಂಶಗಳು ರಾಜ್ಯದಲ್ಲಿನ ಈ ಸನ್ನಿವೇಶವನ್ನು ಈ ನಿರ್ಣಯ ತಿರುವನಂತಪುರ ಮಹಾಧಿವೇಶನ ಹಾಕಿಕೊಟ್ಟ ರಾಜಕೀಯ ನಿಲುಮೆಯ ಹಿನ್ನೆಲೆಯಲ್ಲಿ ವಿಮರ್ಶಿಸಿತು.

ಜನತಾದಳದ ಆಡಳಿತವನ್ನು ಶುದ್ಧಗೊಳಿಸಲು ಹಾಗೂ ಪರಿಣಾಮಕಾರಿಗೊಳಿಸಲು ಜನತೆ ತಮ್ಮ ಸಾಮೂಹಿಕ ಚಟುವಟಿಕೆಗಳ ಮೂಲಕ ಒತ್ತಡ ಹೇರಬೇಕಾದುದರ ಅಗತ್ಯವನ್ನು ಹೇಳಿರುವ ಈ ನಿರ್ಣಯ 14 ಅಂಶಗಳ ಕಾರ್ಯಕ್ರಮದ ಆಧಾರದ ಮೇಲೆ ರಾಜ್ಯಾದ್ಯಂತ ಚಳುವಳಿ ಸಂಘಟಿಸಲು ತೀರ್ಮಾನಿಸಿದೆ. ರಾಜ್ಯ ಸಮಿತಿಯ ನಿರ್ಣಯದ ಪೂರ್ಣ ಪಾಠ ಹೀಗಿದೆ :

ಜನರನ್ನೂ, ಜಾತಿವಾದಿ ಶಕ್ತಿಗಳನ್ನು ಛೂ ಬಿಟ್ಟಿದೆ. ಈ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ಜನತಾ ಸರ್ಕಾರಕ್ಕೆ ತೀವ್ರ ಅಪಾಯ ಉಂಟಾಗಿತ್ತು. ಜನತಾ ಪಕ್ಷ ಜನತಾ ದಳದಲ್ಲಿ ಸೇರ್ಪಡೆಯಾಗಿರುವುದರಿಂದ ಅಂಥ ಅಪಾಯ ಕೊನೆಗೊಂಡಂತೆ ಕಂಡುಬರುತ್ತದೆ. ಆದರೂ ಕೂಡ ಜನತಾ ಪಕ್ಷದ ಒಂದು ಗಂಪು ಹೊರಗುಳಿದು ಜನತಾ ಪಕ್ಷವಾಗಿಯೇ ಮುಂದುವರೆದಿದೆ.

ರಾಜೀವ್ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸಲು ರಾಷ್ಟ್ರೀಯ ರಂಗದ ಒಂದು ವಿಭಾಗವಾದ ಜನತಾ ದಳವನ್ನೊಳಗೊಂಡು ಬಂಡವಾಳಶಾಹಿ ವಿರೋಧ ಪಕ್ಷಗಳೊಡನೆ ಯೋಗ್ಯ ತಿಳುವಳಿಕೆಯ ಮಹತ್ವವನ್ನು ಪಕ್ಷದ 13ನೇ ಸಮ್ಮೇಳನದಲ್ಲಿ ಸ್ವೀಕೃತವಾದ ರಾಜಕೀಯ ನಿರ್ಣಯ ಎತ್ತಿ ತೋರಿಸುತ್ತದೆ. ಜಾತ್ಯಾತೀತ ವಿರೋಧ ಪಕ್ಷಗಳೊಡನೆ ಒಂದು ಅಂದಾಜಿಗೆ ಬರುವ ಹೋರಾಟ ಕೂಡ ರಾಜೀವ್ ಸರ್ಕಾರದ ವಿರುದ್ಧ ನಡೆದಿರುವ ಚಳುವಳಿಯ ಒಂದು ಅಂಗವಾಗಿದೆಯಾದರೂ, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಲು ಅದರ ಯಶಸ್ಸು ಅಗತ್ಯವೆಂಬುದನ್ನೂ ರಾಜಕೀಯ ನಿರ್ಣಯ ಎತ್ತಿ ತೋರಿಸಿದೆ. **ಜನತಾ ದಳದ ಸರ್ಕಾರದ ಕುರಿತು ನಮ್ಮ ನಿಲುಮೆಯ ಮಹತ್ವ ಇಲ್ಲಿದೆ.**

ದುಡಿಯುವ ಜನತೆಯ ಮೇಲೆ ಅಪಾರ ಸಂಕಷ್ಟಗಳನ್ನು ಹೇರಿರುವ ಆರ್ಥಿಕ ವ್ಯವಸ್ಥೆಯ ಅಸ್ಥಿರತೆಯನ್ನು ಕಂಡುಕೊಂಡು, ಆ ಕಾರಣದಿಂದಾಗಿ ದೇಶಾದ್ಯಂತ ಬೆಳೆದು ಬರುತ್ತಿರುವ ಜನರ ಅಸಮಾಧಾನವನ್ನು ಅರಿತು ಪಕ್ಷದ 13ನೇ ಸಮ್ಮೇಳನ ಈ ನಿರ್ಣಯಕ್ಕೆ ...ಬಂದಿದೆ.

ಪಕ್ಷದ 12ನೇ ಸಮ್ಮೇಳನ ನಡೆದಾಗ ರಾಜೀವ್‌ಗಾಂಧಿಯವರು ಅತ್ಯದ್ಭುತ ಬೆಂಬಲ ಪಡೆದಿದ್ದು ಈಗ ಬದಲಾದ ಪರಿಸ್ಥಿತಿಯ ಕುರಿತು ರಾಜಕೀಯ ನಿರ್ಣಯ ಬೊಟ್ಟು ಮಾಡಿ ತೋರಿಸಿದೆ. ಬೆಳೆದು ಬರುತ್ತಿರುವ ಬಿಕ್ಕಟ್ಟು ಮತ್ತು ಸ್ವಯಂ ಸ್ಫೂರ್ತಿಯಿಂದ ಬೆಳೆದು ಬರುತ್ತಿರುವ ಜನತೆಯ ಸಾಮೂಹಿಕ ಚಳುವಳಿ ಕಾಂಗ್ರೆ ಮತ್ತು ವಿರೋಧ ಪಕ್ಷಗಳೊಳಗಿನ ವೈರುಧ್ಯವನ್ನು ತೀವ್ರಗೊಳಿಸುತ್ತದೆ. ಎಡ ಪಕ್ಷಗಳ ಬಲ ಹೆಚ್ಚಿದೆ. ಮಾತ್ರವಲ್ಲ, ರಾಜಕೀಯ ಬೆಳವಣಿಗೆಗಳ ಮೇಲೆ ಪರಿಣಾಮ ಬೀರುವಷ್ಟು ಶಕ್ತಿ ಪಡೆದಿದೆ. ನೆರೆಯ ರಾಜ್ಯಗಳಲ್ಲಿ ಸಾಮ್ರಾಜ್ಯಶಾಹಿಗಳು ತಮ್ಮ ಪ್ರಭಾವಗಳನ್ನು ಹೆಚ್ಚಿಸಿಕೊಂಡಿವೆ ಎಂದೂ, ನಮ್ಮ ದೇಶದ ವಿರುದ್ಧ ವಿರೋಧ ಅಭಿಪ್ರಾಯ ಉಂಟುಮಾಡುವ ಅಭಿಪ್ರಾಯ ಉಂಟು ಮಾಡುವುದರಲ್ಲಿ ಯಶಸ್ವಿಯಾಗಿವೆ ಎಂದೂ, ಆದರಿಂದ ನಮ್ಮ ಚಳುವಳಿ ನಡೆಸುವಾಗ ಈ ಅಂಶವನ್ನು ಮರೆಯುವುದೆಂದರೆ ಅತ್ಯಂತ ಅಪಾಯಕಾರಿ ಎಂದೂ ರಾಜಕೀಯ ನಿರ್ಣಯ ಎಚ್ಚರಿಸಿದೆ. **ರಾಜಕೀಯ ಬೆಳವಣಿಗೆಗಳನ್ನು ವಿಶ್ಲೇಷಿಸುತ್ತಾ ಕೆಳಗಿನ ಅಂಶವನ್ನು ಒತ್ತಿ ಹೇಳುತ್ತದೆ.**

"2.96 ಕಳೆದ ಪಕ್ಷದ ಅಧಿವೇಶನದ ನಂತರ ಈ ಪಕ್ಷಗಳೊಂದಿಗೆ ಸೇರಿ ವಿಶಾಲವಾದ ತಿಳುವಳಿಕೆಯನ್ನು ಬೆಳೆಸಲು ಪ್ರಯತ್ನ ನಡೆಸುತ್ತಿರುವಾಗಲೇ, ಆ ಪಕ್ಷಗಳು ಮತೀಯ ಶಕ್ತಿಗಳೊಡನೆ ಸಂಧಾನ ಮಾಡಿಕೊಳ್ಳುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಮತ್ತು ಎಡ ಶಕ್ತಿಗಳ ಜೊತೆ ಎಲ್ಲಾ ಮತೀಯ ಮತ್ತು ವಿಭಜನಕಾರಿ ಶಕ್ತಿಗಳ ವಿರುದ್ಧ ದೃಢವಾಗಿ ನಿಲ್ಲುವಂತೆ ಮಾಡುವ ಪ್ರಯತ್ನಗಳನ್ನು ನಮ್ಮ ಪಕ್ಷವು ನಡೆಸುತ್ತಾ ಬಂದಿದೆ. ಆದರೆ ಹಲವಾರು ಪಕ್ಷಗಳ ನೇತೃತ್ವವು ಚುನಾವಣಾ ಫಲಿತಾಂಶಗಳನ್ನು ಪಡೆಯುವ ಸಲುವಾಗಿ ಬಿ.ಜೆ.ಪಿ. ಜೊತೆ ತಿಳುವಳಿಕೆಯಿಂದಿರುವ ಒಲವನ್ನು ತೋರಿಸುತ್ತಿವೆ. ಅದೇ ಸಮಯದಲ್ಲಿ ಅವುಗಳಲ್ಲಿ ಎಡ ಶಕ್ತಿಗಳ ಜೊತೆಗೂಡಿ

> ಪ್ರತಿಯೊಂದೆಡೆ ಮತೀಯ ಮತ್ತು ಜಾತೀಯ ಶಕ್ತಿಗಳು ಈ ಪರಿಸ್ಥಿತಿಯನ್ನು ದುರುಪಯೋಗಗೊಳಿಸಲು ಪ್ರಯತ್ನಿಸುತ್ತಿವೆ. ತಮ್ಮ ರಾಜಕೀಯ ಲೇಬಲುಗಳ ಪರಿವೆಯಿಲ್ಲದೆ ಮತೀಯ ಜಾತೀಯ ಶಕ್ತಿಗಳು ಒಟ್ಟಾಗುತ್ತಿರುವ ಅನಾರೋಗ್ಯಕರವಾದ ಪ್ರವೃತ್ತಿ ಕಾಣುತ್ತಿದೆ.

ನಿಲುಮೆ ತೆಗೆದುಕೊಳ್ಳಬೇಕೆಂಬ ಅಂಶಗಳೂ ಇದ್ದು ಅವು ಪ್ರತಿಗಾಮಿ ಪಕ್ಷಗಳೊಡನೆ ಎಲ್ಲಾ ಒಡಂಬಡಿಕೆಗಳನ್ನು ತ್ಯಜಿಸಬೇಕೆಂಬ ನಿಲುಮೆಯನ್ನು ತಾಳುತ್ತಿವೆ. ಇದು ಕಾಂಗ್ರೆಯನ್ನು ವಿರೋಧಿಸುವ ಶಕ್ತಿಗಳ ಐಕ್ಯತೆ ಸಾಧಿಸುವದಕ್ಕೆ ಎರಡು ರೇಖೆಗಳು ಉದ್ಭವಿಸುವುದಕ್ಕೆ ಕಾರಣಭೂತವಾಗಿವೆ- ಎಡ ಪಕ್ಷಗಳ ರೇಖೆ ಮತ್ತು ಬಂಡವಾಳಶಾಹಿ ಪಕ್ಷಗಳ ರೇಖೆ. ಈ ಎರಡು ದೃಷ್ಟಿ ಕೋನಗಳು ಪರಸ್ಪರ ತಿಕ್ಕಾಟಕ್ಕೊಳಗಾಗುತ್ತಿವೆ. ಆದರೆ ಅದರ ಕೊನೆಯ ಫಲಿತಾಂಶವು ಜನಸಮೂಹಗಳ ಜಾಗೃತಿಯ ಒತ್ತಡದಿಂದ ನಿರ್ಧರಿಸಲ್ಪಡುತ್ತದೆ"

ನಮ್ಮ ರಾಜ್ಯದಲ್ಲಿಯ ರಾಜಕೀಯ ಬೆಳವಣಿಗೆ ಅನುಸರಿಸಲು ಬೇಕಾದ ರಾಜಕೀಯ ನಿಲುವೆಯನ್ನು ಇದು ತೋರಿಸುಕೊಡುತ್ತದೆ.

ಈ ಮುಂಚೆ ಕೂಡ ಜನತಾ ಸರ್ಕಾರ ಸಮಸ್ಯೆಗಳನ್ನೆಗೊಂಡಿತು. ಅಂದಿನ ಜನತಾ ಪಕ್ಷದಲ್ಲಿ ಅಜಿತ್‌ಸಿಂಗ್ ಅವರ ಲೋಕದಳ ವಿಲೀನವಾದಾಗ, ಇಲ್ಲಿ ಗಂಭೀರ ಪರಿಸ್ಥಿತಿ ಉದ್ಭವಿಸಿತು. ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣಹೆಗ್ಡೆಯವರು ರಾಜ್ಯದ ಭಿನ್ನಮತೀಯರನ್ನು ಮಾತ್ರವಲ್ಲ, ಅಪ್ರತ್ಯಕ್ಷವಾಗಿ ಕೇಂದ್ರ ಮುಖಂಡರಾದ ಅಜಿತ್‌ಸಿಂಗ್ ಮತ್ತು ಚಂದ್ರಶೇಖರ ಅವರನ್ನು ಎದುರಿಸಬೇಕಾಗಿತ್ತು. ನಮ್ಮ ಪಕ್ಷದ ರಾಜ್ಯ ಸಮ್ಮೇಳನದ ನಿರ್ಣಯ ಈ ಅಂಶವನ್ನು ವಿಮರ್ಶಿಸಿ ಅಧಿಕಾರಕ್ಕಾಗಿ ಕಚ್ಚಾಡುತ್ತಿರುವ ಕೇಂದ್ರ ಹಾಗೂ ರಾಜ್ಯ ಮುಖಂಡರ ಮೇಲೆ ಆರೋಪ ಹೇರಿಸಿತ್ತು. ಈಗ ,ಹೆಗಡೆಯವರು ಜನತಾ ದಳದ ಅಖಿಲ ಭಾರತ ಉಪಾಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿ ಅಜಿತ್‌ಸಿಂಗ್ ಅವರು ರಾಜ್ಯದ ಜನತಾ ದಳದ ಸರ್ಕಾರವನ್ನು ಬೆಂಬಲಿಸುತ್ತಿರುವುದರಿಂದ ಪರಿಸ್ಥಿತಿ ಬದಲಾಗಿದೆ.

ರಾಜ್ಯದಲ್ಲಿ ಈ ರಾಜಕೀಯ ಬದಲಾವಣೆಗಳಾಗುತ್ತಿರುವಾಗ ರಾಜ್ಯ ಸರಕಾರದ ಯಂತ್ರಗಳು ಚಲನೆ ಕಳಕೊಂಡಿವೆ. ಮಂತ್ರಿಮಂಡಲ ರಚನೆಯ ಕೆಲಸ ಇನ್ನೂ ಪೂರ್ತಿಯಾಗಿಲ್ಲ. ಅತಿ ಮುಖ್ಯ ಖಾತೆಗಳಾದ ಗೃಹಖಾತೆ, ಕಾರ್ಮಿಕ ಖಾತೆ, ಇತ್ಯಾದಿ ಪೂರ್ಣ ಮಂತ್ರಿಗಳಿರುವುದಿಲ್ಲ. ಇತರ ಹಲವಾರು ಖಾತೆಗಳ ಜತೆಯಲ್ಲಿ ಈ ಖಾತೆಗಳನ್ನು ಹಿಡಿದುಕೊಂಡು, ಸಾರ್ವಜನಿಕ ಕೆಲಸದಲ್ಲಿ ತಾನು ಮುಳುಗಿಕೊಂಡು, ಮುಖ್ಯಮಂತ್ರಿ ತನ್ನ ಎಲ್ಲಾ ಸಮಯವನ್ನು ಕಳೆಯುತ್ತಿದ್ದಾರೆ. ಅವರಿಗೆ ಜನತೆಗೆ ನ್ಯಾಯ ಕೊಡಲು ಸಾಧ್ಯವಾಗುತ್ತಿಲ್ಲ. ವಿಕೃತ ಕೇಂದ್ರ-ರಾಜ್ಯ ಸಂಬಂಧಗಳ ದೆಸೆಯಿಂದ ಉಂಟಾಗಿರುವ ಹಣಕಾಸಿನ ಬಿಕ್ಕಟ್ಟು, ಆರ್ಥಿಕ ಬಿಕ್ಕಟ್ಟಿನಿಂದ ಇನ್ನಷ್ಟು ಹದಗೆಟ್ಟು, ಕಾಂಗ್ರೆಸ್ಸೇತರರು ಆಳುತ್ತಿರುವ ರಾಜ್ಯಗಳ ಕುರಿತಾದ ಕೇಂದ್ರ ಸರ್ಕಾರದ ರಾಜಕೀಯ ತಾರತಮ್ಯ, ತೀಕ್ಷ್ಣಗೊಂಡು, ಒಟ್ಟಿನಲ್ಲಿ ಜನತೆಯನ್ನು ಬಹಳಷ್ಟು ತೊಂದರೆಗೆ ಗುರಿಪಡಿಸಿದೆ. ಸರ್ಕಾರಿ ಚೆಕ್‌ಗಳು ವರ್ಗಾಯಿಸಲ್ಪಡುವುದಿಲ್ಲ. ನೌಕರರಿಗೆ ಸಂಬಳ ಪಾವತಿಯಾಗುತ್ತಿಲ್ಲ. ಬಿಲ್ಲುಗಳಿಗೆ ಹಣ ಪಾವತಿಸಿಗುತ್ತಿಲ್ಲ. ಕೇಂದ್ರ ಸರ್ಕಾರದ ತಪ್ಪು ಧೋರಣೆಗಳಿಂದುಂಟಾದ ದರ ಏರಿಕೆಯು ಜನತೆಯನ್ನು ಇನ್ನಷ್ಟು ನುಜ್ಜುಗುಜ್ಜು ಮಾಡುತ್ತಿದ್ದರೆ ಹಲವಾರು ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಪುನಃ ಇವು ಕೇಂದ್ರ ಸರ್ಕಾರದ ತಪ್ಪು ಧೋರಣೆಗಳ ಫಲವಾಗಿಯೂ, ಸ್ವಲ್ಪ ಜನತಾ ಸರ್ಕಾರದ ಅನಾದರದ ಧೋರಣೆಗಳ ಫಲವಾಗಿಯೂ ಮುಚ್ಚಿಕೊಂಡಿವೆ. ವಾರ್ಷಿಕ ಬಿಕ್ಕಟ್ಟು ದೊಡ್ಡದಾಗಿ ಕಾಣಲಾರಂಭಿಸಿದೆ. ಇನ್ನೊಂದು ಗಂಭೀರ ಬರಗಾಲ ಬೇಗದಲ್ಲೇ ಬರಲಿದೆ. ಬಡರೈತರು ಮತ್ತು ಭೂರಹಿತ ಕೃಷಿ ಕೂಲಿಗಾರರು ತಾವು ಸ್ವಾಧೀನ ಪಡಿಸಿಕೊಂಡ ಭೂಮಿಯ ಖಾಯಂಗಾಗಿ ಹತ್ತಾರು ವರ್ಷಕಾಲ ಕಾಯುತ್ತಾ ಬಂದಿದ್ದಾರೆ. ಬೀದರ್, - ಆದಿಚುಂಚನಗಿರಿ ಕುಶಾಲನಗರ, ಮೊದಲಾದೆಡೆಗಳಲ್ಲಿ ಕಂಡು ಬಂದಂತೆ ಉನ್ನತ ಶಿಕ್ಷಣದ ಖಾಸಗೀಕರಣದ ಧೋರಣೆಯು ತೀರಾ ಆಘಾತವನ್ನುಂಟು ಮಾಡಿದೆ. ನಿರುದ್ಯೋಗ ಹೆಚ್ಚುತ್ತಿದೆ: ಪ್ರತಿಯೊಂದೆಡೆ ಮತೀಯ ಮತ್ತು ಜಾತೀಯ ಶಕ್ತಿಗಳು ಈ ಪರಿಸ್ಥಿತಿಯನ್ನು ದುರುಪಯೋಗಗೊಳಿಸಲು ಪ್ರಯತ್ನಿಸುತ್ತಿವೆ. ಇತ್ತೀಚೆಗೆ ಕೋಲಾರಜಿಲ್ಲೆ, ಬೀದರ್, ಗುಲ್ಬರ್ಗಾದ ಚಿಂಚೋಳಿ, ಇತ್ಯಾದಿ ಕಡೆಗಳಲ್ಲಿ ಸಂಭವಿಸಿದ ಮತೀಯ ಗಲಭೆಗಳು ಇದನ್ನು ಸ್ಪಷ್ಟಪಡಿಸಿವೆ. ಹರಿಜನರು ಮುಸ್ಲೀಮರು ಮತ್ತಿತರ ಸಾಮಾಜಿಕವಾಗಿ ಶೋಷಿತ ಜನತೆಯನ್ನು ಮರ್ಧನ ಮಾಡುತ್ತಿದ್ದಾರೆ, ಆಕ್ರಮ ಮಾಡುತ್ತಿದ್ದಾರೆ, ಮತ್ತು ಈ ಎಲ್ಲಾ ಎಲ್ಲದರಲ್ಲೂ ಹಲವಾರು ಪ್ರಾದೇಶಿಕ ಜನತಾ ಮತ್ತು ಕಾಂಗ್ರೆ ಕಾರ್ಯಕರ್ತರುಗಳು ಆರ್.ಎಸ್.ಎಸ್. ಜತೆ ಕೈಗೂಡಿಸಿದ್ದಾರೆ. ಬಂಡವಾಳಶಾಹಿ ಪಕ್ಷಗಳ ಸಹಕಾರದಿಂದ ಹೆಡಗೆವಾರ್ ಜನ್ಮ ಶತಾಬ್ಧಿ, ಹೆಸರಿನಲ್ಲಿ ಆರ್.ಎಸ್.ಎಸ್. ಗ್ರಾಮಾಂತರ ಪ್ರದೇಶಗಳಿಗೆ ನುಸುಳುತ್ತಿದೆ.

ಇತ್ತೀಚೆಗೆ ಖಾಲಿ ಬಿದ್ದ ಮಂಡಳ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಸ್ಥಾನಗಳಿಗೆ ನಡೆದ ಚುನಾವಣೆಗಳ ಫಲಿತಾಂಶವು ಜನತಾ ಸರ್ಕಾರದ ಬಗ್ಗೆ ಜನತೆಯ ಭ್ರಮೆ ನಿರಸನ ಎದ್ದು ಕಾಣಿಸಿದೆ. ರಾಜ್ಯದಲ್ಲಿ ಕಾಂಗ್ರೆಸ್ಸ್(ಐ)ಯ ಸಂಘಟನಾ ಸ್ಥಿತಿ ಇದಕ್ಕಿಂತ ಏನೂ ಉತ್ತಮವಾಗಿಲ್ಲ. ಆಗಾಗ್ಗೆ ರಾಜ್ಯದ ಕಾಂಗ್ರೆ ಅಧ್ಯಕ್ಷರನ್ನು ಕಾಂಗ್ರೆಸ್(ಐ) ಹೈಕಮಾಂಡ್

> 1983-85 ರಲ್ಲಿ ಜನತಾ ಎಡಪಕ್ಷಗಳ ಜತೆ ಉತ್ತಮ ಸಂಬಂಧಗಳನ್ನಿಡುವ ಮನೋಭಾವದಿಂದಿತ್ತು. ಆದರೆ 1985 ರ ನಂತರದಲ್ಲಿ ಅವರಿಗೆ ನಿರ್ಣಾಯಕ ಬಹುಮತ ದೊರೆ ತಾಕ್ಷಣದಲ್ಲಿ ಅವರ ಕಿವಿಗಳು ಕಿವುಡಾದವು. ಈಗ ಪುನಃ ಅವರು ಎಡ ಪಕ್ಷ ಅಥವಾ ಮತೀಯ ವಾದಿಗಳಿಂದ ಪ್ರಭಾವಿತರಾಗುವ ಸ್ಥಿತಿಯಲ್ಲಿದ್ದಾರೆ. ಮುಂದಿನ ಬೆಳವಣಿಗೆಗಳನ್ನು ಸಾಮೂಹಿಕ ಚಳುವಳಿಯ ಸ್ವರೂಪವೇ ನಿರ್ಧರಿಸಬೇಕಾಗಿದೆ.

ನೇಮಕ ಮಾಡುತ್ತಿರುವುದರಿಂದ ಅಸ್ತವ್ಯಸ್ತ ಸ್ಥಿತಿ ಉಲ್ಬಣಗೊಂಡಿದೆ. ಬೊಮ್ಮಾಯಿಯನ್ನು ಜಾತಿಯ ಆಧಾರದಲ್ಲಿ ಪ್ರತಿರೋಧ ಮಾಡಲು ವೀರೇಂದ್ರಪಾಟೀಲರನ್ನು ಅಧ್ಯಕ್ಷ ಸ್ಥಾನಕ್ಕೆ ಹೇರಿರುವುದರಿಂದ ಕಾಂಗ್ರೆಸ್ಸಿನ ಒಳಗೆ ಮತೀಯ ವಿಭಜತೆಯು ಇನ್ನಷ್ಟು ಅಧಿಕಗೊಳ್ಳುವಂತಾಯಿತು. ತಮ್ಮ ಕುರ್ಚಿನ ರಾಜಕೀಯ ಲೇಬಲುಗಳ ಪುರಾವೆಯಿಲ್ಲದೆ ಮತೀಯ ಜಾತೀಯ ಶಕ್ತಿಗಳು ಒಟ್ಟಾಗುತ್ತಿರುವ ಅನಾರೋಗ್ಯಕರವಾದ ಪ್ರವೃತ್ತಿ ಕಾಣುತ್ತಿದೆ.

ಈ ಸಮಸ್ಯೆಗಳು ಉಲ್ಬಣಗೊಳ್ಳುವಿಕೆಯು ಸ್ವಾತಂತ್ರ್ಯಾನಂತರ ದೇಶದಲ್ಲಿ ಸ್ಥಾಪಿತವಾದ ಬಂಡವಾಳಶಾಹಿ ಭೂಮಾಲಕ ವರ್ಗಗಳ ಆಳ್ವಿಕೆಯ ಫಲವಾಗಿದೆ. ಈ ಪದ್ಧತಿಯನ್ನು ನಿರಂತರವಾಗಿ ಉಳಿಸುವುದರಲ್ಲಿ, ಮತ್ತು ಸಾಮಾಜಿಕ ಆರ್ಥಿಕ ಬಿಕ್ಕಟ್ಟನ್ನು ತೀವ್ರಗೊಳಿಸುವುದರಲ್ಲಿ ಕಾಂಗ್ರೆಸ್(ಐ)ಯ ಪಾತ್ರ ಪ್ರಮುಖವಾಗಿದೆ. ಅದೇಸಮಯದಲ್ಲಿ ಜನತಾದ ವರ್ಗ ಗುಣ ಏನೂ ಬೇರೆಯಾಗಿಲ್ಲ. ಅಲ್ಲದೇ, ಪಾಳೇಯಗಾರಿ ಅವಶೇಷಗಳ ಮುಂದುವರಿಯುವಿಕೆ, ಭೂಸುಧಾರಣೆಗಳ ಕೊರತೆ, ಜಾತಿ ಪದ್ಧತಿಯ ನಿರಂತರತೆ, ಅಸ್ಪೃಶ್ಯತೆಯ ವಿಷ ಮತ್ತು ಬಹುಸಂಖ್ಯಾತ ಮತೀಯತೆಯ ಪಿಡುಗು, ಮೇಲ್ಜಾತಿಯವರ ಅತಿಭಾವುಕತೆ ಮತ್ತು ಎಲ್ಲಾ ಬಣ್ಣಗಳ ಮೂಲಭೂತವಾದಿಗಳ ಬೆಳವಣಿಗೆ- ಇವೆಲ್ಲಾ ಸಾಮಾಜಿಕ- ಆರ್ಥಿಕ ಪದ್ಧತಿಯ ತೀವ್ರ ಪುನರ್ರಚನೆಗೆ ಅಡ್ಡಿ ಮಾಡುತ್ತಿರುವ ಕೈಕೋಲಗಳು.

ನಮ್ಮ ರಾಜ್ಯದಲ್ಲಿ ತುರ್ತು ಪರಿಸ್ಥಿತಿಯ ನಂತರದಲ್ಲಿ 1978ರಿಂದ 1982ರವರೆಗೆ ಹೆಚ್ಚಾಗಿ ಎಡಪಕ್ಷಗಳ ನೇತೃತ್ವದಲ್ಲಿ ನಡೆದ ತೀವ್ರ ವರ್ಗ ಮತ್ತು ಸಾಮೂಹಿಕ ಹೋರಾಟಗಳು ಮತ್ತು ಕಾಂಗ್ರೆಸ್(ಐ)ಯ ಮರ್ಧನ- ಇವುಗಳಿಂದಾಗಿ ಜನತಾ ಪಕ್ಷವು ಅಧಿಕಾರ ಕ್ಕೇರುವಂತಾಯಿತು. ಈ ಹೋರಾಟಗಳಲ್ಲಿ ಕಾಂಗ್ರೆಸ್(ಐ) ಆಡಳಿತೆಯ ಕೊನೆಗೊಂಡುದರಿಂದ ಸಂತೋಷವಾಯಿತು. 1983-85 ರಲ್ಲಿ ಜನತಾವು ಎಡಪಕ್ಷಗಳ ಜತೆ ಉತ್ತಮ ಸಂಬಂಧವನ್ನಿಡುವ ಮನೋಭಾವದಿಂದಿತ್ತು. ಆದರೆ, 85 ರ ನಂತರದಲ್ಲಿ, ಒಮ್ಮೆ ಅವರಿಗೆ ನಿರ್ಣಯಕ ಬಹುಮತ ವಿಧಾನಸಭೆಯಲ್ಲಿ ದೊರೆತಾಕ್ಷಣದಲ್ಲಿ, ಅವರ ಕಿವಿಗಳು ಕಿವುಡಾದವು. ಈಗ, ಪುನಃ ಅವರು ಎಡ ಅಥವಾ ಮತೀಯ ವಾದಿಗಳಿಂದ ಪ್ರಭಾವಿತರಾಗುವ ಸ್ಥಿತಿಯಲ್ಲಿದ್ದಾರೆ. ಮುಂದಿನ ಬೆಳವಣಿಗೆಗಳನ್ನು ಸಾಮೂಹಿಕ ಚಳುವಳಿಯ ಸ್ವರೂಪವೇ ನಿರ್ಧರಿಸಬೇಕಾಗಿದೆ.

ಜನತಾದಳದ ಸರ್ಕಾರವು ಸಾಮೂಹಿಕ ಜನತಾ ಚಟುವಟಿಕೆಗಳ ಒತ್ತಡದಿಂದ ಆಡಳಿತದಲ್ಲಿ ಶುದ್ಧವಾಗಬಹುದು ಮತ್ತು ಪರಿಣಾಕಾರಿಯಾಗಬಹುದೆಂದು ಸಿ.ಪಿ.ಐ.(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಅಭಿಪ್ರಾಯ ಪಡುತ್ತಿದೆ, ರಾಜೀವ್ ಸರ್ಕಾರದ ವಿರುದ್ಧ ನಿಲುಮೆ ತೆಗೆದುಕೊಂಡು ಕೇಂದ್ರ-ರಾಜ್ಯ ಸಂಬಂಧಗಳ ಬದಲಾವಣೆಗೆ ಚಳುವಳಿ ಮಾಡಬಹುದು ಎಂದು ಅಭಿಪ್ರಾಯಪಡುತ್ತವೆ. ಕಾಂಗ್ರೆಸ್(ಐ) ಧೋರಣೆಗಳಿಗೆ ವಿರುದ್ಧವಾದ ಜನತಾ ಪರವಾದ ಆರ್ಥಿಕ ಧೋರಣೆಗಳನ್ನು ಅಂಗೀಕರಿಸಬಹುದೆಂದು ಅಭಿಪ್ರಾಯಪಡುತ್ತದೆ; 1983 ಮತ್ತು 1985 ರ ಚುನಾಣೆಗಳಲ್ಲಿ ಜನತೆಗೆ ಕೊಟ್ಟ ಆಶ್ವಾಸನೆಗಳನ್ನು ಪೂರೈಸವುದರಲ್ಲಿ ಆಸಕ್ತಿ ವಹಿಸಬಹುದೆಂದೂ, ವಿಶೇಷವಾಗಿ ಮತೀಯ ಮತ್ತು ವಿಭಜನಾ ಶಕ್ತಿಗಳ ಕುರಿತಾದ ತಮ್ಮ ಧೋರಣೆಯನ್ನು ಬದಲು ಮಾಡಬಹುದೆಂದು ಆಶಿಸುತ್ತದೆ. ಈ ಉದ್ದೇಶಗಳನ್ನು ಪೂರೈಸುವುದಕ್ಕಾಗಿ ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿಯು ರಾಜ್ಯದ ಜನತಾ ದಳದೊಡನೆ ಸಂಭಾಷಣೆ ನಡೆಸಲು ಮುತುವರ್ಜಿ ತೆಗೆದುಕೊಳ್ಳಲು ತೀರ್ಮಾನಿಸುತ್ತದೆ. ಅದೇ ವೇಳೆ, ಅವರ ತಪ್ಪು ಧೋರಣೆಗಳನ್ನು ಬದಲಾಯಿಸುವುದಕ್ಕೆ

ಪುಟ ೬ ಕ್ಕೆ

> ರಾಜಕೀಯ ಬದಲಾವಣೆಗಳಾಗುತ್ತಿರುವಾಗ ರಾಜ್ಯ ಸರ್ಕಾರದ ಆಡಳಿತ ಯಂತ್ರ ಚಲನೆ ಕಳಕೊಂಡಿದೆ....ವಿಕೃತ ಕೇಂದ್ರ-ರಾಜ್ಯ ಸಂಬಂಧಗಳ ದೆಸೆಯಿಂದ ಉಂಟಾಗಿರುವ ಹಣಕಾಸಿನ ಬಿಕ್ಕಟ್ಟಿನಿಂದ ಇನ್ನಷ್ಟು ಹದಗೆಟ್ಟು, ಕಾಂಗ್ರೆಸ್ಸೇತರ ಸರ್ಕಾರಗಳ ಬಗ್ಗೆ ತಾರತಮ್ಯ ತೀವ್ರಗೊಂಡು ಒಟ್ಟಿನಲ್ಲಿ ಜನತೆಯನ್ನು ಬಹಳಷ್ಟು ತೊಂದರೆಗೆ ಗುರಿಪಡಿಸಿದೆ.

ಇತಿಹಾಸ ಚಕ್ರದ ಒಂದು ಸುತ್ತು

ಸಿ.ಪಿ.ಐ.(ಎಂ)ನ ಸೋದರ ಸಂಬಂಧಗಳು ಬಲಗೊಳ್ಳುತ್ತವೆ

13ನೇ ಮಹಾಧಿವೇಶನ ಕುರಿತ ನಮ್ಮ ವಿಶೇಷ ಸಂಚಿಕೆಯಲ್ಲಿ (ಸಂಚಿಕೆ 2-3) ವಿಶ್ವದ ವಿವಿಧ ಕಮ್ಯೂನಿಸ್ಟ್ ಪತ್ರಿಕೆಗಳಲ್ಲಿ ತಿರುವನಂತಪುರ ಮಹಾಧಿವೇಶನಕ್ಕೆ ದೊರೆತ ಪ್ರಾಮುಖ್ಯತೆ ಬಗ್ಗೆ ಓದಿದ್ದೀರಿ. ಅದೇ ಲೇಖಕರು ಪ್ರಸ್ತುತ ಲೇಖನದಲ್ಲಿ ವಿಶ್ವ ಕಮ್ಯೂನಿಸ್ಟ್ ಆಂದೋಲನದಲ್ಲಿ ಪರಸ್ಪರ ಸಂಬಂಧಗಳಲ್ಲಿ ಕಳೆದ ಕಾಲು ಶತಮಾನದಲ್ಲಿ ಕಂಡುಬಂದಿರುವ ಬದಲಾವಣೆಗಳ ಬಗ್ಗೆ ನೋಟ ಹರಿಸಿದ್ದಾರೆ.

ವರ್ಗ ಹೋರಾಟ ಸೋವಿಯತ್ ಯೂನಿಯನ್ ಮತ್ತಿತರ. ಸಮಾಜವಾದೀ ದೇಶಗಳಲ್ಲಿ ನಡೆಯುವುದಿಲ್ಲ-ನಡೆಯಬೇಕಾಗಿಯೂ ಇಲ್ಲ.ವರ್ಗಗಳು ಇಲ್ಲದಿದ್ದಾಗ ವರ್ಗ ಹೋರಾಟಗಳೂ ಇರುವುದಿಲ್ಲ. ಆದರೆ ಧೋರಣೆಗೆ ಸಂಬಂಧಿಸಿದಂತೆ ತುಳಿಯುವ ವರ್ಗದ ಧೋರಣೆಗೆದುರಾಗಿ ನಿರಂತರ ಹೋರಾಟ ನಡೆಯುತ್ತಿರುತ್ತದೆ- ಅದು ಸಮಾಜವಾದೀ ದೇಶಗಳಲ್ಲಿ ಒಂದನೇ ತರಗತಿಯಿಂದ ಯೂನಿವರ್ಸಿಟಿ ಶಿಕ್ಷಣದವರೆಗಿನ ಪಠ್ಯ ವಿಷಯಗಳಲ್ಲಿ ಚೆನ್ನಾಗಿ ಪ್ರತಿಫಲಿಸುತ್ತದೆ.

ಸೋವಿಯತ್ ಯೂನಿಯನ್‌ನ ವಿದೇಶಾಂಗ ಸಚಿವರು ಕಳೆದ ಅಕ್ಟೋಬರ್‌ನಲ್ಲಿ ವಿಶ್ವ ಸಂಸ್ಥೆಯಲ್ಲಿ ಮಾಡಿದ ಭಾಷಣದಲ್ಲಿ "ವರ್ಗ ಹೋರಾಟದ ತತ್ವವನ್ನು ವಿದೇಶಾಂಗ ನೀತಿಯಲ್ಲಿ ಅಳವಡಿಸಲಾಗುವುದಿಲ್ಲ" ಎಂದು ಒತ್ತಿ ಹೇಳಿದರು. ಹೀಗೆ ಹೇಳಿ ಅಮೆರಿಕಾಕ್ಕೆ ಒಂದು ರೀತಿಯ ಭರವಸೆ ನೀಡಿದಾಗ ಪೂರ್ವ ಜರ್ಮನಿಯ ವಿದೇಶಾಂಗ ಸಚಿವರು ತಮ್ಮ ಭಾಷಣದಲ್ಲಿ ಸಮಾಜ ವಾದೀ ದೇಶಗಳ ವಿದೇಶಾಂಗ ಪ್ರತಿನಿಧಿ ಗಳು ಪ್ರತಿಯೊಂದು ದೇಶಕ್ಕೆ ಭೇಟಿ ನೀಡುವಾಗಲೂ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ಧೋರಣೆಯ ಪ್ರತಿಪಾದಕರಾಗಿ ಕೆಲಸ ನಿರ್ವಹಿಸುತ್ತಾರೆ ಎಂದು ಹೇಳಿದರು. ಒಂದು ಬೃಹತ್ ಶಕ್ತಿ ರಾಷ್ಟ್ರವಾದ ಸೋವಿಯತ್ ಯೂನಿಯನ್ ಕೆಲವು ಸಮಯದಲ್ಲಿ ಸ್ವಲ್ಪ ಮಟ್ಟಿಗೆ ತತ್ವರಹಿತವಾಗಿ ಮಾತನಾಡಬೇಕಾಗಿ ಬಂದಿದ್ದರೆ, ಅದು ಕೇವಲ ವಿದೇಶಾಂಗ ತಂತ್ರ ಮಾತ್ರವಾಗಿರುತ್ತದೆ.

ವರ್ಗ ಹೋರಾಟದ ಬಗ್ಗೆ ಕಳೆದ 24 ವರ್ಷಗಳಿಂದ ಸಿ.ಪಿ.ಐ.(ಎಂ) ಪ್ರತಿಪಾದಿಸುತ್ತಾ ಬಂದಿರುವ ಧೋರಣೆಯನ್ನು ಇತರ ದೇಶಗಳ ಸೋದರ ಪಕ್ಷಗಳು ಯಾವುದೂ ತಳ್ಳಿಹಾಕಿಲ್ಲ; ಮಾತ್ರವಲ್ಲ, ಪೂರ್ವ ಜರ್ಮನಿಯ ಮತ್ತು ಇತರ ದೇಶಗಳ ಸೋದರ ಪಕ್ಷಗಳು ಬಹಿರಂಗವಾಗಿ ಸಿ.ಪಿ.ಐ.(ಎಂ)ನ ನಿಲುವನ್ನು ಬೆಂಬಲಿಸಿವೆ. ವರ್ಗ ಹೋರಾಟವನ್ನು ಕಮ್ಯೂನಿಸ್ಟರು ಅವರವರ ದೇಶಗಳಲ್ಲೇ ನಡೆಸಬೇಕಾಗುತ್ತದೆ. ಆ ಹೋರಾಟಗಳಿಗೆ ಬೆಂಬಲಿಸುವುದೇ ಮಾರ್ಕ್ಸ್‌ವಾದ-ಲೆನಿನ್‌ವಾದದ ಅಂತರ್ರಾಷ್ಟ್ರೀಯ ಧೋರಣೆಯ ಪ್ರಮುಖ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ನೆರವೇರಿಸುವಲ್ಲಿ, ಸೋವಿಯತ್ ಯೂನಿಯನ್ನಿನ ಪತ್ರಿಕೆಗಳು, ಮಾಧ್ಯಮಗಳು ಬಹುಕಾಲದಿಂದ ವಿಫಲಗೊಂಡಿವೆ. ಉದಾಹರಣೆಗೆ ಭಾರತದಲ್ಲಿ ನಡೆಯುತ್ತಿರುವ ದಬ್ಬಾಳಿಕೆಗಳು, ಅವುಗಳಿಗೆದುರಾಗಿ ನಡೆಯುತ್ತಿರುವ ಜನತೆಯ ಹೋರಾಟಗಳನ್ನು ಸಿ.ಪಿ.ಐ.(ಎಂ)ನ ಬೆಳವಣಿಗೆಯನ್ನು ಸೋವಿಯತ್ ಮಾಧ್ಯಮಗಳು ಗಮನಿಸಿಲ್ಲ. ಸಿ.ಪಿ.ಐ.(ಎಂ)ನ ನೇತೃತ್ವದಲ್ಲಿ ಡಿಸೆಂಬರ್7, 1987ರಂದು ದೆಹಲಿಯಲ್ಲಿ ನಡೆದ ಹತ್ತು ಲಕ್ಷ ಜನರ ಬೃಹತ್ ಪ್ರದರ್ಶನವು ರಾಜೀವ್‌ಗಾಂಧಿಯನ್ನು ಅಧಿಕಾರದಿಂದ ಇಳಿಸಬೇಕೆಂದು ಒತ್ತಾಯಿಸಿದ್ದು ವಿಶ್ವಶಾಂತಿ ಚಳುವಳಿಯ ಪ್ರದರ್ಶನವೆಂದು ಸೋವಿಯತ್ ಯೂನಿಯನ್ ಮತ್ತು ಪೂರ್ವ ಯೂರೋಪಿನ

-ಕುಂಜನಂದನ್ ನಾಯರ್

ಮಾಧ್ಯಮಗಳು ವರ್ಣಿಸಿದ್ದವು! ರಾಜೀವ್ ಗಾಂಧಿ ಸರ್ಕಾರವನ್ನು ಟೀಕಿಸುವುದನ್ನೇ ಪ್ರಕಟಿಸಲು ಸೋವಿಯತ್ ಪತ್ರಿಕೆಗಳು ಹಿಂಜರಿಯುತ್ತವೆ. ಈ ಪರಿಸ್ಥಿತಿ ಬದಲಾಗುವ ಸೂಚನೆಗಳನ್ನು ತಿರುವನಂತಪುರ ಅಧಿವೇಶನ ನೀಡುತ್ತದೆ.

ಕಾರ್ಮಿಕ ವರ್ಗದ ಸೌಹಾರ್ದತೆ

1964ರಲ್ಲಿ ಕಮ್ಯೂನಿಸ್ಟ್ ಪಕ್ಷ ಇಬ್ಭಾಗವಾದ ನಂತರ ಸಿ.ಪಿ.ಐ.(ಎಂ) ಅನ್ನು 1983ರವರೆಗೆ ಸಿ.ಪಿ.ಎಸ್.ಯು. ಒಳಗೊಂಡಂತೆ ಇತರ ದೇಶಗಳ ಕಮ್ಯೂನಿಸ್ಟ್ ಪಕ್ಷಗಳು ಅಂಗೀಕರಿಸಿರಲಿಲ್ಲ. ಆ ಕಾಲಘಟ್ಟದಲ್ಲಿ ಕಾರ್ಮಿಕ ವರ್ಗದ ಸೌಹಾರ್ದ ಸಂಬಂಧದ ತತ್ವಗಳಿಗೆ ವಿರುದ್ಧವಾಗಿ ಸಿ.ಪಿ.ಎಸ್.ಯು. ಮತ್ತು ಅದರ ಮಿತ್ರ ಪಕ್ಷಗಳು ವರ್ತಿಸಿದವು. ಇದೇ ಪಕ್ಷಗಳು ನಂತರ ತಮ್ಮ ನಡವಳಿಕೆಗಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿವೆ.

ಉದಾಹರಣೆಗೆ 1965 ರಲ್ಲಿ ಜೈಲಿನಲ್ಲಿದ್ದ ಕಾ॥ ಸುಂದರಯ್ಯನವರಿಗೆ ಹೊಟ್ಟೆಯಲ್ಲಿ ಅಲ್ಸರ್‌ಗೆಡ್ಡೆ ಬೆಳೆದು ರಕ್ತಸ್ರಾವ ಉಂಟಾದಾಗ ತುರ್ತಾಗಿ ಅವರಿಗೆ ಶಸ್ತ್ರಕ್ರಿಯೆ ಮಾಡಿಸಬೇಕಾಗಿತ್ತು. ಇದಕ್ಕಾಗಿ ಅವರನ್ನು ಸೋವಿಯತ್ ಯೂನಿಯನ್‌ಗೆ ಕಳಿಸಿಕೊಡಬೇಕೆಂದು ಅಭಿಪ್ರಾಯಪಡಲಾಯ್ತು. ಆಗ ಲಾಲ್‌ಬಹದ್ದೂರ್ ಶಾಸ್ತ್ರಿ ಸರ್ಕಾರ ಕಾ॥ ಸುಂದರಯ್ಯ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲು ಒಪ್ಪಿಕೊಂಡಿತು. ಕಾ॥ ಇ.ಎಂ.ಎಸ್. ಸೋವಿಯತ್ ರಾಯಭಾರಿಯನ್ನು ಭೇಟಿ ಮಾಡಿ ಅವರ ಸಹಕಾರ ಕೋರಿದರು.

"ಕಾಂಗ್ರೆಸ್ ಸರ್ಕಾರಕ್ಕೆ ಸ್ತುತಿ ಹಾಕುವವರಿಗೆ ಮಾತ್ರ ನೀವು ಸಹಾಯ ಮಾಡುವುದಾದರೆ, ನಾವು ಸಾಯುವುದಕ್ಕೆ ತಯಾರಾಗಿದ್ದೇವೆ" ಎಂಬುದಾಗಿ ಕಾ. ಇ.ಎಂ.ಎಸ್. ಖಂಡ ತುಂಡವಾಗಿ ಹೇಳಿದರು. ಈ ವಿಷಯವನ್ನು ಸೋವಿಯತ್ ರಾಯಭಾರಿ ಮಾಸ್ಕೋಗೆ ತಿಳಿಸಿದರು. ಅಲ್ಲಿನವರಿಗೆ ಇಕ್ಕಟ್ಟಿನ ಪರಿಸ್ಥಿತಿ ಎದುರಾಯಿತು. ಕಾ॥ ಸುಂದರಯ್ಯ ಅವರನ್ನು ಆಹ್ವಾನಿಸಿದರೆ ಸಿ.ಪಿ.ಐ.ಗೆ ಸಿಟ್ಟು ಬರಬಹುದು ಎಂಬ ಭಯ. ಕೊನೆಗೆ ಸುಂದರಯ್ಯ ಅವರನ್ನು ಸೋವಿಯತ್ ರೆಡ್‌ಕ್ರಾಸ್‌ನವರು ಕರೆದೊಯ್ದು ಶಸ್ತ್ರಚಿಕಿತ್ಸೆ ನಡೆಸಿದರು.

ಅದೇ ರೀತಿ ಸಿ.ಪಿ.ಐ.(ಎಂ)ಗೆ ವಿರುದ್ಧವಾಗಿ ಸೋವಿಯತ್ ಯೂನಿಯನ್‌ನ ಪತ್ರಿಕೆ 'ನ್ಯೂಟೈಮ್ಸ್' ಲೇಖನವೊಂದನ್ನು ಪ್ರಕಟಿಸಿತು. ಕಾ॥ ಇ.ಎಂ.ಎಸ್. ಅದಕ್ಕೆ ಪ್ರತಿಕ್ರಿಯೆ ಬರೆದು ಅದೇ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಕಳಿಸಿದಾಗ ಅಲ್ಲಿನ ಅಧಿಕಾರಿಗಳು ಇ.ಎಂ.ಎಸ್.ರವರ ಪತ್ರವನ್ನು ಪ್ರಕಟಿಸಲು ನಿರಾಕರಿಸಿದರು. ಇದಕ್ಕೂ ಮೊದಲು ಆವಡಿಯಲ್ಲಿ ಕಾಂಗ್ರೆಸ್ ಪಕ್ಷದ ಸಮ್ಮೇಳನ 'ಸಮಾಜವಾದ'ವನ್ನು ಅಂಗೀಕರಿಸಿದ್ದನ್ನು 'ನ್ಯೂಟೈಮ್ಸ್'ನಲ್ಲಿ ಪ್ರೊ॥ ರೂಬಿನ್ ಸ್ಟೆಲ್ ಅವರು ಅಪಾರವಾಗಿ ಪ್ರಶಂಸಿಸಿ 1955ರಲ್ಲಿ ಬರೆದ ಲೇಖನಕ್ಕೆ ಕಮ್ಯೂನಿಸ್ಟ್ ಪಕ್ಷದ ಕಾ॥ ಅಜಯ್‌ಘೋಷ್ ಬರೆದ ವಿಮರ್ಶಾ ಲೇಖನವನ್ನು 'ನ್ಯೂ ಟೈಮ್ಸ್' ಸಂಪೂರ್ಣವಾಗಿ ಪ್ರಕಟಿಸಿತ್ತು.

ಆದರೆ ಇದಾದ ಹತ್ತು ವರ್ಷಗಳ ನಂತರ ಇ.ಎಂ.ಎಸ್.ರವರ ಒಂದು ದೊಡ್ಡ ತಾತ್ವಿಕ ಲೇಖನವನ್ನು 1987ರಲ್ಲಿ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ತಾತ್ವಿಕ ಪತ್ರಿಕೆಯಾದ 'ಕಮ್ಯೂನಿಸ್ಟ್' ಸಂಪೂರ್ಣವಾಗಿ ಪ್ರಕಟಿಸಿತು.

1983ರಲ್ಲಿ ಬರ್ಲಿನ್‌ನಲ್ಲಿ ನಡೆದ ಕಾರ್ಲ್‌ಮಾರ್ಕ್ಸ್ ಮರಣ ಶತಾಬ್ಧಿ ಸಮಾರಂಭದಲ್ಲಿ ಕಾ॥ ಇ.ಎಂ.ಎಸ್.ರವರು ಮಾಡಿದ ಭಾಷಣವನ್ನು ಕೊಂಚ ತಾತ್ವಿಕ 'ಭಿನ್ನಾಭಿಪ್ರಾಯವಿದ್ದರೂ ಸಹ ಜರ್ಮನಿಯ ಪಾರ್ಟಿ ಪತ್ರಿಕೆ ಪ್ರಕಟಿಸಿತು. ಅದೇ ರೀತಿ 1987ರ ಅಕ್ಟೋಬರ್‌ನಲ್ಲಿ ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವ ಸಮಾರಂಭ ಮಾಸ್ಕೋದಲ್ಲಿ ನಡೆದಾಗ ಕಾ॥ ಇ.ಎಂ.ಎಸ್. ಮಾಡಿದ ಭಾಷಣವನ್ನು ಪೂರ್ಣ ಪ್ರಮಾಣದಲ್ಲಿ, ಭಾವಚಿತ್ರದೊಂದಿಗೆ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಮುಖಪತ್ರಿಕೆ 'ಪ್ರಾವ್ಡಾ' ಪ್ರಕಟಿಸಿತು. ಕಳೆದ ಐದು ವರ್ಷಗಳಿಂದ ಸಿ.ಪಿ.ಐ.(ಎಂ)ನ ಮುಖಂಡರು ಸೋವಿಯತ್ ಯೂನಿಯನ್, ಚೀನಾ, ಪೂರ್ವ ಜರ್ಮನಿ, ಜೆಕೊಸ್ಲಾವಾಕಿಯಾ ಮುಂತಾದ ದೇಶಗಳ ಪಾರ್ಟಿ ಸಮ್ಮೇಳನಗಳಲ್ಲೂ ಮತ್ತು ಇತರ ಸಮಾರಂಭಗಳಲ್ಲೂ ಭಾಗವಹಿಸುತ್ತಿದ್ದಾರೆ. ಕಾ॥ವಿ.ಎಸ್.ಅಚ್ಯುತಾನಂದನ್ ಸಿ.ಪಿ.ಐ.(ಎಂ)ನ ಪೊಲಿಟ್ ಬ್ಯೂರೋ ಸದಸ್ಯರು ಮಂಗೋಲಿಯಾದಲ್ಲಿ ನಡೆದ ಏಶ್ಯನ್ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕಾ॥ ಎಸ್.ರಾಮಚಂದ್ರನ್‌ಪಿಳ್ಳೆ ಪಾರ್ಟಿಯ ಕೇಂದ್ರ ಸಮಿತಿ ಸದಸ್ಯರು ಮಾಸ್ಕೋದಲ್ಲಿ ನಡೆದ ಕಮ್ಯೂನಿಸ್ಟ್ ಪತ್ರಿಕೆಗಳ ಸಂಪಾದಕರುಗಳ ಉನ್ನತ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು.

ಕಾ॥ ಇ.ಎಂ.ಎಸ್.ರವರ ನೇತೃತ್ವದಲ್ಲಿ ಸಿ.ಪಿ.ಐ.(ಎಂ)ನ ನಿಯೋಗವೊಂದು 1983ರಲ್ಲಿ ಬೀಜಿಂಗ್‌ಗೆ ತೆರಳಿ ಚೀನಾದ ಕಮ್ಯೂನಿಸ್ಟ್ ಪಕ್ಷದೊಡನೆ ಸಮಾಲೋಚನೆ ನಡೆಸಿತು. ಎರಡೂ ದೇಶಗಳ ಕಮ್ಯೂನಿಸ್ಟ್ ಪಕ್ಷಗಳ ನಡುವೆ ಸೌಹಾರ್ದ ಸಂಬಂಧ ಸ್ಥಾಪನೆಯಾಯಿತು. 1967ರಲ್ಲಿ ಚೀನಾದ ಕಮ್ಯೂನಿಸ್ಟ್ ಪಕ್ಷ ನಕ್ಸಲೈಟರನ್ನು ಅಂಗೀಕರಿಸಿ ಸಿ.ಪಿ.ಐ.(ಎಂ) ಅನ್ನು ಪರಿಷ್ಕರಣವಾದಿಗಳೆಂದು ಮುದ್ರೆಯೊತ್ತಿತ್ತು. ಇದರಿಂದ ಎರಡೂ ಪಕ್ಷಗಳ ನಡುವಿನ ಸಂಬಂಧ ಮುರಿದಿತ್ತು. ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಚೀನಾದ ನಿಯೋಗದ ಮುಖಂಡರಾದ ಕಾ॥ ಲಿನ್ ಚಾನ್ಸೆಲ್ ಅವರು "ನಕ್ಸಲೈಟರ ಜೊತೆಯಲ್ಲಿ ಚೀನಾ ಕಮ್ಯೂನಿಸ್ಟ್ ಪಕ್ಷಕ್ಕೆ ಯಾವುದೇ ಸಂಬಂಧವಿಲ್ಲ" ಎಂದು ಹೇಳಿದ್ದು ಇಲ್ಲಿ ಉಲ್ಲೇಖನೀಯ.

ಇವತ್ತಿನ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲಿ ಸಿ.ಪಿ.ಐ.(ಎಂ) ತನಗೆ ಸಲ್ಲಬೇಕಾಗಿರುವ ಸ್ಥಾನಮಾನಗಳನ್ನು ಪಡೆದುಕೊಂಡಿದೆ. ತಮ್ಮ ಪಕ್ಷಗಳು ಸಿ.ಪಿ.ಐ.(ಎಂ)ನೊಡನೆ ದೃಢವಾದ ಸಂಬಂಧವನ್ನು ಹೊಂದಿದೆಯೆಂಬುದಾಗಿ ಸೋವಿಯತ್ ಮತ್ತು ಚೀನಾದ ಪ್ರತಿನಿಧಿಗಳು ತಿರುವನಂತನಪುರದಲ್ಲಿ ನಡೆದ ಸಿ.ಪಿ.ಐ.(ಎಂ)ನ 13ನೇ ಅಧಿವೇಶನದಲ್ಲಿ ಘೋಷಿಸಿದರು. ಕಾ॥ ಇ.ಎಂ.ಎಸ್.ರವರ ಪುಸ್ತಕಗಳು, ಲೇಖನಗಳು ಸಮಾಜವಾದೀ ದೇಶಗಳ ವಿಶ್ವವಿದ್ಯಾನಿಲಯಗಳ ಗ್ರಂಥ ಭಂಡಾರಗಳಲ್ಲಿ ಇರಿಸಲಾಗಿದೆಯಷ್ಟೇ ಅಲ್ಲದೆ ಭಾರತದ ಕುರಿತಾದ ವಿಷಯಗಳಿಗೆ ಸಂಬಂಧಿಸಿದ ಹಾಗೆ ಪರಾಮರ್ಶನ ಕೃತಿಗಳಾಗಿವೆ.

ಭಾರತದ ಕಮ್ಯೂನಿಸ್ಟ್ ಚಳುವಳಿ ಹಾಗೂ ವಿಶ್ವ ಕಮ್ಯೂನಿಸ್ಟ್ ಚಳುವಳಿಗಳ ನಡುವಿನ ಸಂಬಂಧಕ್ಕೆ 60ವರ್ಷಗಳ ಇತಿಹಾಸವಿದೆ. ಇದಕ್ಕೆ ಮುಂಚೆ (1920 ಮತ್ತು 1935 ರ ಮಧ್ಯದಲ್ಲಿ) ಸ್ವಲ್ಪಕಾಲ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್ ಭಾರತದ ಕಮ್ಯೂನಿಸ್ಟ್ ಪಕ್ಷವನ್ನು ಗುಂಪುಗಾರಿಕೆ ಆರೋಪಕ್ಕಾಗಿ ಅಮಾನತ್ತುಗೊಳಿಸಿತ್ತು. ಈ ಪ್ರಕರಣ ಅಂತ್ಯಗೊಂಡದ್ದು ಇತಿಹಾಸ ಪ್ರಸಿದ್ಧವಾದ ಮೂರು ದೇಶಗಳ ಕಮ್ಯೂನಿಸ್ಟ್ ಪಕ್ಷಗಳ (ಜರ್ಮನಿ, ಬ್ರಿಟನ್ ಮತ್ತು ಚೀನಾ ಪಕ್ಷಗಳು) ಬಹಿರಂಗ ಸಂಯುಕ್ತ ಪತ್ರವು 'ಇನ್ಪ್ರೆಕೊರಾ' ಎಂಬ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಮುಖ ಪತ್ರಿಕೆಯಲ್ಲಿ ಪ್ರಕಟಗೊಂಡ ಅನಂತರ. ಆದರೆ ಈಗ ಸೋವಿಯತ್ ಜರ್ಮನ್ ಮತ್ತು ಚೀನಾದ ಕಮ್ಯೂನಿಸ್ಟ್ ಪಕ್ಷಗಳು ಸಿ.ಪಿ.ಐ.(ಎಂ)ನ ಧೋರಣೆಯನ್ನು ಸರಿಯೆಂಬುದಾಗಿ ಒಪ್ಪಿಕೊಂಡು ಸಂಬಂಧಗಳನ್ನು ಪುನರ್‌ಸ್ಥಾಪಿಸಿವೆ.

ಆಗ ಉಪದೇಶಗಳು ಹೊರಗಿನಿಂದ ಬಂದವು ಇಂದು ಉಪದೇಶಿಸಿದವರು ಸ್ವತಃ ತಮ್ಮ ತಪ್ಪನ್ನು ತಿದ್ದಿಕೊಂಡಿದ್ದಾರೆ. ಇದಕ್ಕೆ ಸಿ.ಪಿ.ಐ.(ಎಂ)ನ 13ನೇ ಮಹಾಧಿವೇಶನ ಒಂದು ಕಣ್ಣೆದುರಿನ ಸಾಕ್ಷಿಯಾಗಿ ನಿಂತಿದೆ.

ಇನ್ನು ಮುಂದೆ ಸಿ.ಪಿ.ಐ.(ಎಂ) ಮತ್ತು ಜಗತ್ತಿನ ಕಮ್ಯೂನಿಸ್ಟ್ ಪಕ್ಷಗಳು ತಮ್ಮೆಲ್ಲಿನ ಸೋದರ ಸಂಬಂಧಗಳನ್ನು ಎಲ್ಲಾ ಪಕ್ಷಗಳನ್ನೂ ಸಮಾನವಾಗಿ ಕಾಣುವುದು, ಪ್ರತಿಯೊಂದು ಪಕ್ಷಗಳ ಸ್ವಂತಿಕೆಯನ್ನು ಅಂಗೀಕರಿಸುವುದು, ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸದಿರುವುದು, ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆ, ಈ ನಾಲ್ಕು ತತ್ವಗಳ ಆಧಾರದಲ್ಲಿ ಕಮ್ಯೂನಿಸ್ಟ್ ಚಳುವಳಿ ಮತ್ತಷ್ಟು ಬಲಿಷ್ಠಗೊಳ್ಳುವುದೆಂಬುದರಲ್ಲಿ ಸಂಶಯವಿಲ್ಲ.

4ನೇ ಪುಟದಿಂದ

ಮತ್ತು ರಾಜ್ಯದ ಆಡಳಿತೆಯನ್ನು ಪರಿಣಾಮಕಾರಿಗೊಳಿಸುವುದಕ್ಕೆ ಚಳುವಳಿ ಹೂಡಲು ನಿರ್ಧರಿಸುತ್ತದೆ. ಅಲ್ಲದೆ, ಸಿ.ಪಿ.ಐ. ಮತ್ತಿತರ ಎಡ ಶಕ್ತಿಗಳ ಜತೆ ಮಾತುಕತೆ ಆರಂಭಿಸಲು ಈ ಕೆಳಗಿನ ಕಾರ್‍ಯಕ್ರಮದ ಆಧಾರದಲ್ಲಿ ಏಕಕಾಲದಲ್ಲಿ ಚಳುವಳಿ ಮಾಡಲು ತೀರ್ಮಾನಿಸುತ್ತದೆ:-

1) ಬಡರೈತರು ಸ್ವಾಧೀನ ಮಾಡಿಕೊಂಡಿರುವ ದರ್ಖಾಸ್ತನ್ನು ಭೂಮಿಯನ್ನು ತ್ವರಿತ ಗತಿಯಲ್ಲಿ ಸಕ್ರಮಗೊಳಿಸಬೇಕು.

2) ಈಗಿರುವ ಭೂ ಸಂಬಂಧಗಳನ್ನು ತೀವ್ರ ಬದಲಾವಣೆಯನ್ನುಂಟು ಮಾಡುವ ಸಮಗ್ರ ಭೂ ಸುಧಾರಣೆಗಳನ್ನು ಜಾರಿಗೆ ತರಬೇಕು.

3) ಈಗಾಗಲೇ ಯೋಜಿಸಿರುವ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಬೇಕು; ರಾಜ್ಯದ ಹಿಂದುಳಿಯುವಿಕೆಯನ್ನು ಹೋಗಲಾಡಿಸಲು ಇನ್ನೂ ಅಧಿಕ ನೀರಾವರಿ ಕೆಲಸಗಳನ್ನು ಕೈಗೊಳ್ಳಬೇಕು.

4) ಕೃಷಿ ಕೂಲಿಕಾರರನ್ನೊಳಗೊಂಡು ಎಲ್ಲಾ ವಿಭಾಗಗಳ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಮೇಲ್ಮುಖವಾಗಿ ಕೂಡಲೇ ಹೆಚ್ಚಿಸಬೇಕು ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

5) ಮುಚ್ಚಿದ ಕಾರ್ಖಾನೆಗಳನ್ನು ತೆರೆಯಬೇಕು; ಅದರಿಂದ ಬಾಧಿತರಾದ ಕಾರ್ಮಿಕರಿಗೂ, ಅವರ ಕುಟುಂಬದವರಿಗೂ ತುರ್ತಿನ ಪರಿಹಾರವನ್ನೊದಗಿಸುವ ಧೋರಣೆಯನ್ನು ರೂಪಿಸಬೇಕು.

6) ರಾಜೀವ್‌ಗಾಂಧಿಯವರ ಖಾಸಗೀಕರಣದ ಆರ್ಥಿಕ ಮತ್ತು ಔದ್ಯೋಗಿಕ ಧೋರಣೆಯನ್ನು ಕೊನೆಗೊಳಿಸಬೇಕು.

7) ಎನ್.ಜಿ.ಓ.ಗಳ, ಅಧ್ಯಾಪಕರ, ಆಸ್ಪತ್ರೆ, ಇತ್ಯಾದಿ ನೌಕರರ ಬೇಡಿಕೆಗಳಿಗಾಗಿ ಹೋರಾಡಬೇಕು.

8) ಉನ್ನತ ವೃತ್ತಿ ಕಾಲೇಜುಗಳ ಜನತಾ ಸರ್ಕಾರದ ಡೊನೇಷನ್- ಹೆಚ್ಚಳವಾದ ಫೀಸ್ ವಸೂಲಿ ಪದ್ಧತಿಯನ್ನು ಕೊನೆಗಾಣಿಸಬೇಕು.

9) ನಿರುದ್ಯೋಗದಲ್ಲಿರುವ ವಿಶಾಲ ಯುವಕ ಸಮುದಾಯಕ್ಕೆ ನಿರುದ್ಯೋಗ ಪರಿಹಾರ ಕೊಡಬೇಕು.

10) ಎಲ್ಲಾ ಮತೀಯವಾದಿಗಳನ್ನು ದೃಢವಾಗಿ ಎದುರಿಸಬೇಕು; ಮತ್ತು ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರ ರಕ್ಷಣೆಗಾಗಿ ಸಕ್ರಿಯ ಹೋರಾಟ ಮಾಡಬೇಕು.

11) ಸಾಮಾಜಿಕವಾಗಿ ಮರ್ದನಕ್ಕೊಳಗಾದ ಜನತೆಯ ಸಂಘಟನೆಗಳ ಜತೆ ಮಾತುಕತೆ ಆರಂಭಿಸಬೇಕು ಮತ್ತು ಜನತೆಯ ರಕ್ಷಣೆಗಾಗಿ ಸಕ್ರಿಯವಾಗಿ ಕೆಲಸ ಮಾಡಬೇಕು ಮತ್ತು ಅವರೆಲ್ಲರೂ ದುಡಿಯುವ ಜನ ಸಮುದಾಯಗಳ ಸರ್ವ ಸಾಮಾನ್ಯ ಹೋರಾಟದಲ್ಲಿ ಭಾಗಿಗಳಾಗುವಂತೆ ಮಾಡಬೇಕು.

12) ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ತೀವ್ರ ಬದಲಾವಣೆಗಾಗಿ ಹೋರಾಡಬೇಕು.

13) ರಾಜ್ಯದ ಬೆಳವಣಿಗೆಗಾಗಿ ಕೆಲಸ ಮಾಡಬೇಕು. ಈ ಉದ್ದೇಶದಿಂದ ಕೈಗಾದಂತಹ ಯೋಜನೆಗಳ ಪೂರ್ತಿಗೊಳ್ಳುವುದಕ್ಕಾಗಿ ಹೋರಾಟ ನಡೆಸಬೇಕು. ಅದೇ ವೇಳೆಯಲ್ಲಿ, ನೈಸರ್ಗಿಕ ಐಶ್ವರ್ಯವು ಕೆಡದಂತೆ ಮತ್ತು ಪ್ರಕೃತಿಯ ರಕ್ಷಣೆಗೆ ಭಂಗ ಬಾರದಂತೆ ನೋಡಿಕೊಳ್ಳಬೇಕು.

14) ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಪಡಿಸುವುದಕ್ಕಾಗಿ, ಮೂಲಭೂತವಾದಿಗಳ ವಿರುದ್ಧ, ಭಾಷಾ ಅಂಧಾಭಿಮಾನಿಗಳ ವಿರುದ್ಧ ಹೋರಾಟವನ್ನು ನಡೆಸಲು ಒಂದು ಪುರೋಗಾಮಿ ಬುದ್ಧಿಜೀವಿಗಳ ಚಳುವಳಿಯ ಸೃಷ್ಟಿಗಾಗಿ ಹೋರಾಡಬೇಕು.

ಪಕ್ಷದ ಎಲ್ಲಾ ಘಟಕಗಳು ಜನ ಸಮೂಹಗಳು ತಮ್ಮ ಹಿತಗಳ ರಕ್ಷಣೆಗಾಗಿ ತ್ವರಿತಗತಿಯಲ್ಲಿ ಜಾಗೃತಗೊಂಡು ಸಂಘಟಿತರಾಗುವಂತೆ ಮಾಡುವುದರಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದು ಸಿ.ಪಿ.ಐ.(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಕರೆ ಕೊಡುತ್ತದೆ. ಕಾಂಗ್ರೆಸ್(ಐ) ಮತ್ತಿತರ ಮತೀಯ ಶಕ್ತಿಗಳನ್ನು ಸೋಲಿಸಲು ಮುಂದಾಗಬೇಕೆಂದು ಪಕ್ಷವು ಕರೆ ಕೊಡುತ್ತದೆ. ಈ ಉದ್ದೇಶ ಸಾಧನೆಗಾಗಿ ಎಡ ಮತ್ತು ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಕಟ್ಟಿ, ಸತತವಾಗಿ ದೃಢವಾಗಿ ಮತೀಯ ಮತ್ತು ವಿಭಜನಾ ಶಕ್ತಿಗಳನ್ನು ಎದುರಿಸುವ ಚಳುವಳಿ ನಡೆಸಬೇಕೆಂದು ಪಕ್ಷದ ರಾಜ್ಯ ಘಟಕವು ಕರೆ ಕೊಡುತ್ತದೆ.

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರಿಂದ

ಅಖಿಲ ಭಾರತ ಬೇಡಿಕೆ ಸಪ್ತಾಹ

ಕೇಂದ್ರೀಯ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ದೇಶದಾದ್ಯಂತ ಜನವರಿ 17ರಿಂದ 22ರವರೆಗೆ 'ಅಖಿಲ ಭಾರತ ಬೇಡಿಕೆ ಸಪ್ತಾಹ' ಆಚರಿಸಿದರು. ಈ ಸಪ್ತಾಹವನ್ನು ಮೂರು ಮುಖ್ಯ ಬೇಡಿಕೆಗಳಿಗಾಗಿ ಒತ್ತಾಯಿಸಲು ಸಾರ್ವಜನಿಕ ಕ್ಷೇತ್ರದ ಟ್ರೇಡ್‌ಯೂನಿಯನ್‌ಗಳ ಸಮಿತಿಯ ಕರೆಯ ಮೇರೆಗೆ ಆಚರಿಸಲಾಯಿತು. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮೂರು ಪ್ರಮುಖ ಬೇಡಿಕೆಗಳು- ಬಳಕೆದಾರರ ಬೆಲೆ ಸೂಚ್ಯಂಕದ ಮೂಲ ವರ್ಷವನ್ನು 1960 ರಿಂದ 1982ಕ್ಕೆ ಬದಲಾಯಿಸುವುದಕ್ಕೆ ವಿರೋಧ. ಬೆಲೆಏರಿಕೆಯನ್ನು ಪೂರ್ಣವಾಗಿ ಭರ್ತಿ ಮಾಡುವ ದರದಲ್ಲಿ ತುಟ್ಟಿಭತ್ಯ ಏರಿಕೆ ಮತ್ತು ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳನ್ನು ಖಾಸಗೀಕರಿಸುವುದಕ್ಕೆ ವಿರೋಧ.

ಕೇಂದ್ರೀಯ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳ ಕೇಂದ್ರವಾದ ಬೆಂಗಳೂರಿನಲ್ಲಿ 'ಬೇಡಿಕೆ ಸಪ್ತಾಹ'ವನ್ನು ಜಂಟಿ ಕ್ರಿಯಾರಂಗ (ಜೆ.ಎ.ಎಫ್.) ನಾಯಕತ್ವದಲ್ಲಿ ಆಚರಿಸಲಾಯಿತು. ಎಲ್ಲಾ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳಲ್ಲಿ- ಹೆಚ್.ಎ.ಎಲ್., ಐಟಿಐ, ಬೀಇಎಲ್, ಬೀಇಎಂಎಲ್‌ಗಳಲ್ಲಿ ಸರದಿ ಉಪವಾಸ ಸತ್ಯಾಗ್ರಹ, ಪ್ರದರ್ಶನ, ಗೇಟ್ ಮೀಟಿಂಗ್‌ಗಳ ಮೂಲಕ ಸಪ್ತಾಹವನ್ನು ಆಚರಿಸಲಾಯಿತು. ಜನವರಿ 21ರಂದು ಈ ಎಲ್ಲಾ ಕಾರ್ಖಾನೆಗಳ ಕಾರ್ಮಿಕರು ಊಟವನ್ನು ಬಹಿಷ್ಕರಿಸಿದರು. ಆ ದಿವಸವನ್ನು 'ಹುತಾತ್ಮರ ದಿನ'ವಾಗಿ ಆಚರಿಸಲಾಯಿತು. 8 ವರ್ಷಗಳ ಹಿಂದೆ ನಡೆದ 77ದಿನಗಳ ಸಾರ್ವಜನಿಕ ಕ್ಷೇತ್ರದ ಸ್ಮರಣೀಯ ಹೋರಾಟದಲ್ಲಿ ಇದೇ ದಿನ ಹೆಚ್‌ಎಎಲ್‌ನ ಮೂವರು ಕಾರ್ಮಿಕರು ಪೊಲೀಸರ ಗುಂಡಿಗೆ ಬಲಿಯಾಗಿದ್ದನ್ನು ಸ್ಮರಿಸಲಾಯಿತು.

ಈ ಸಂದರ್ಭದಲ್ಲಿ ಸಿ.ಐ.ಟಿ.ಯು. ರಾಜ್ಯ ಘಟಕ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಿತು. ದುರ್ಗಾಪುರ ಉಕ್ಕಿನ ಕಾರ್ಖಾನೆ ಕಾರ್ಮಿಕ ನಾಯಕ ಮತ್ತು ಸಿ.ಐ.ಟಿ.ಯು. ನಾಯಕ ಜೀಬನ್‌ರಾಯ್ ಸಮಾವೇಶವನ್ನು ಉದ್ಘಾಟಿಸಿದರು. ಅವರು ಅಧಿಕೃತ ಮಾನ್ಯತೆ ಪಡೆದ, ಪಡೆಯದ ಟ್ರೇಡ್ ಯೂನಿಯನ್‌ಗಳ ಮಧ್ಯೆ ಬಿಕ್ಕಟ್ಟು ತರುವ ಸರ್ಕಾರಿ ನೀತಿಯನ್ನು ವಿರೋಧಿಸಲು, ಐಕ್ಯತೆಯಿಂದಿರಲು ಕಾರ್ಮಿಕರು ಪ್ರಜಾಸತ್ತಾತ್ಮಕ ಜನಸಮೂಹವನ್ನು ಈ ಹೋರಾಟದಲ್ಲಿ ಒಳಗೊಳ್ಳಲು ಕಾರ್ಮಿಕರಿಗೆ ಕರೆ ಇತ್ತರು. ಗುತ್ತಿಗೆದಾರರಿಗೆ ಮತ್ತು ಗುತ್ತಿಗೇದಾರಿ ಕೈಗಾರಿಕೆಗಳಿಗೆ ಸಾರ್ವಜನಿಕ ಕ್ಷೇತ್ರದ ಕೆಲಸ ಉಪಗುತ್ತಿಗೆಯಾಗಿ ಹೋಗುತ್ತಿರುವುದು ಕಾರ್ಮಿಕರನ್ನು ಮನೆಗೆ ಕಳಿಸುವ ಹವಣಿಕೆಯ ಮೊದಲ ಹಂತವೆಂದರು. ಆದ್ದರಿಂದ ನಿರ್ಲಕ್ಷ್ಯ ನೀತಿ ಬಿಟ್ಟು ಬರಿಯ ವೇತನಕ್ಕೆ ಬದಲು, ಸರಿ ಧೋರಣೆಗಳಿಗೆ ಹೋರಾಡಬೇಕೆಂದರು.

ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾ॥ ಸೂರ್ಯನಾರಾಯಣರಾವ್ ಮಾತನಾಡಿ ನಗರದ ಎರಡು ಪ್ರಮುಖ ಸಾರ್ವಜನಿಕ ಕಾರ್ಖಾನೆಗಳಾದ- ಬೀಇಎಲ್ ಮತ್ತು ಬಿಎಚ್‌ಇಎಲ್‌ನ್ನು ಖಾಸಗೀಕರಿಸುವ ಪ್ರಯತ್ನವನ್ನು ಖಂಡಿಸಿ ಇದರ ವಿರುದ್ಧ ಹೋರಾಟಕ್ಕೆ ಕರೆ ಇತ್ತರು. ಇತರ ಸಿ.ಐ.ಟಿ.ಯು. ನಾಯಕರಾದ ಅಶ್ವತ್ಥ ನಾರಾಯಣ (ಬೀಇಎಂಎಲ್), ಮುನಿರೆಡ್ಡಿ (ಬೀಇಎಲ್) ಚಂದ್ರನ್ (ಬಿಎಚ್‌ಇಎಲ್), ನಾರಾಯಣಸ್ವಾಮಿ (ಎಚ್‌ಎಎಲ್) ಮತ್ತು ಕಂದಸ್ವಾಮಿ (ಐಟಿಐ) ಇವರುಗಳು ಮಾತನಾಡಿದರು.

ಸಮಾವೇಶ ಮೂರು ಪ್ರಮುಖ ಬೇಡಿಕೆಗಳನ್ನು ಮತ್ತು ವಿಐಎಸ್‌ಎಲ್‌ನ್ನು ಎಸ್‌ಎಐಎಲ್ ವಹಿಸಿಕೊಳ್ಳುವ ಬೇಡಿಕೆಯನ್ನು ಒತ್ತಾಯಿಸಿದ ನಿರ್ಣಯಗಳನ್ನು ಅನುಮೋದಿಸಿತು.

ಬಳ್ಳಾರಿ: ಬೆಳವಣಿಗೆಯತ್ತ ದೃಢ ಹೆಜ್ಜೆ

ಸ್ವಾರ್ಥ ರಾಜಕಾರಣಿಗಳಿಂದ ಸಮಾಜಕ್ಕಾಗುತ್ತಿರುವ ಅನ್ಯಾಯ ಭ್ರಷ್ಟಾಚಾರ ಅನಾಚಾರಗಳ ವಿರುದ್ಧ ಹೋರಾಡಲು ಇಂದಿನ ವಿದ್ಯಾರ್ಥಿ ಯುವ ಜನರು ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳಬೇಕೆಂದು ಬಳ್ಳಾರಿಯ ಮಹಿಳಾ ಕಾಲೇಜಿನ ಪ್ರೊ॥ ಶೇಷಾದ್ರಿಯವರು ಕರೆ ನೀಡಿದರು. ಅವರು ಬಳ್ಳಾರಿ ಜಿಲ್ಲಾ ಐದನೇ ಸಮ್ಮೇಳನದಲ್ಲಿ ವಿಶ್ವಶಾಂತಿಯ ಸಂಕೇತ ಪಾರಿವಾಳಗಳನ್ನು ನೀಲಗಗನಕ್ಕೆ ಹಾರಿಬಿಡುವುದರ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು. ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಷಣ್ಮುಖಪ್ಪ ಧ್ವಜಾರೋಹಣ ಮಾಡಿದರು. ಮುಖ್ಯ ಅತಿಥಿ ಉಪಾನ್ಯಾಸಕ ಶ್ರೀ ಪರಮೇಶ್ವರಪ್ಪನವರು ಮಾತನಾಡಿ ವಿದ್ಯಾರ್ಥಿಗಳು ಪಠ್ಯ ಪುಸ್ತಕದ ಅಭ್ಯಾಸದೊಂದಿಗೆ ಸಮಾಜದಲ್ಲಿನ ಅನ್ಯಾಯಗಳ ವಿರುದ್ಧ ಸ್ಪಂದಿಸಬೇಕೆಂದು ಕರೆ ನೀಡಿದರು. ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಅಧ್ಯಕ್ಷ ಕಾ॥ ಜಿ.ಸಿ.ಬೈಯಾರೆಡ್ಡಿಯವರು ವಹಿಸಿದ್ದರು. ನೂತನ ಶಿಕ್ಷಣ ನೀತಿಯ ಜಾರಿಯ ವಿರುದ್ಧ ಪ್ರಬಲವಾದ ಹೋರಾಟವನ್ನು ಬೆಳೆಸಬೇಕೆಂದು ಅವರು ಕರೆ ನೀಡಿದರು. ಪ್ರಜಾಸತ್ತಾತ್ಮಕ ಚಳುವಳಿಯಲ್ಲಿ ತಮ್ಮ ಪ್ರಾಣಾರ್ಪಣೆ ಮಾಡಿದ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಜಿಲ್ಲೆಯ 6000 ಸದಸ್ಯತ್ವ 30 ಶಾಖೆಗಳನ್ನು ಪ್ರತಿನಿಧಿಸಿ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯದರ್ಶಿ ಕಾ॥ ಎಲ್. ಮಂಜುನಾಥ್ ಮಂಡಿಸಿದ ವರದಿಯ ಮೇಲೆ ಚರ್ಚೆ ನಡೆದು ಅಂಗೀಕರಿಸಲಾಯಿತು. ಪ್ರತಿ ತಾಲ್ಲೂಕಿಗೆ ಪ್ರಥಮದರ್ಜೆ ಕಾಲೇಜು ಆರಂಭ, ಪದವಿಹಾಸ್ಟಲ್ ಸೌಲಭ್ಯ, ಕಟ್ಟಡ, ವಾಚನಾಲಯ, ಪ್ರಯೋಗಾಲಯ, ಆಟದ ಮೈದಾನ, ಕ್ರೀಡಾ ಸಾಮಗ್ರಿ ಮುಂತಾದ ಬೇಡಿಕೆಗಳನ್ನು ಒತ್ತಾಯಿಸುವ ಮುಂದಿನ ಶೈಕ್ಷಣಿಕ ವರ್ಷದಲ್ಲಿ 60 ಶಾಖೆಗಳನ್ನು 10 ಸಾವಿರ ಸದಸ್ಯತ್ವವನ್ನು ನೊಂದಾಯಿಸುವ ಕುರಿತು ನಿರ್ಣಯ ಅಂಗೀಕರಿಸಿ ಜಿಲ್ಲೆಯಾದ್ಯಂತ ಈ ಬೇಡಿಕೆಗಳಿಗಾಗಿ ಪ್ರಬಲವಾದ ವಿದ್ಯಾರ್ಥಿ ಚಳುವಳಿ ಸಂಘಟಿಸಲು ನಿರ್ಧರಿಸಲಾಗಿದೆ. ನೂತನ ಜಿಲ್ಲಾ ಸಮಿತಿಗೆ ಕಾ॥ ಷಣ್ಮುಖಪ್ಪ (ಅಧ್ಯಕ್ಷ) ಎಲ್.ಮಂಜುನಾಥ (ಕಾರ್ಯದರ್ಶಿ) ಎಸ್. ಬಾಲಪ್ಪ, ಶ್ರೀಕಾಂತ್ ಹವಾಲ್ದಾರ್ (ಉಪಾಧ್ಯಕ್ಷರು) ಕಾಶಿಂ ಅಲಿ, ಹೆಚ್.ಪ್ರಕಾಶ್ ಕೃಷ್ಣಾಜಿಕಲ್ಲಾಲ್ (ಸಹಕಾರ್ಯದರ್ಶಿಗಳು) ಮತ್ತು ಬಿ.ಈರಣ್ಣನವರನ್ನು ಆಯ್ಕೆ ಮಾಡಲಾಯಿತು. ನಂತರ ನಡೆದ ಮೆರವಣಿಗೆ ಬಹಿರಂಗ ಸಭೆಯಲ್ಲಿ ಕಾ॥ ಗುರುಶಾಂತ್, ಬೈಯಾರೆಡ್ಡಿಯವರು ಮಾತನಾಡಿದರು.

ಎಸ್.ಎಫ್.ಐ. ಹೊಸಪೇಟೆ ನಗರ ಸಮ್ಮೇಳನ

ಅಭ್ಯಾಸ ಮತ್ತು ಹೋರಾಟದೊಂದಿಗೆ ಮುನ್ನಡೆಯಿರಿ

ಹೊಸಪೇಟೆ ನಗರದಲ್ಲಿ ವಿದ್ಯಾರ್ಥಿ ಸಮುದಾಯಕ್ಕೆ ಬಾಧಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಸ್ಪಂದಿಸುತ್ತಾ ಅಭ್ಯಾಸ ಹೋರಾಟ ಘೋಷಣೆಯೊಂದಿಗೆ ಶಿಸ್ತುಬದ್ಧ ಬಲಿಷ್ಠ ಸಂಘಟನೆಯಾಗಿ ಮುನ್ನಡೆಸಬೇಕೆಂದು ಶ್ರೀಯುತ ಎವರೇಕರರವರು ಕರೆನೀಡಿದರು. ಅವರು ಡಿಸೆಂಬರ್ 28ರಂದು ಯಶಸ್ವಿಯಾಗಿ ಜರುಗಿದ ಎಸ್.ಎಫ್.ಐ. ಹೊಸಪೇಟೆ ನಗರ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಾರ್ಯದರ್ಶಿ ಕಾ॥ ನೀಲಕಂಠ ವರದಿ ಮಂಡಿಸಿದರು. ನೂತನ ನಗರ ಸಮಿತಿಗೆ ಕಾ॥ ಕಾಶೀಂಅಲಿ (ಅಧ್ಯಕ್ಷ) ಜಯಸಿಂಹ, ಪಾಟೀಲ, ಸಾಯಿಕುಮಾರ್, ಸಾವಿತ್ರಿ, ಬಸವರಾಜ್, ಬಿ.ಬಸವರಾಜ್ (ಉಪಾಧ್ಯಕ್ಷರುಗಳು) ಕೆ.ಅಮೀರ್ (ಕಾರ್ಯದರ್ಶಿ) ಯು.ನೀಲಕಂಠ, ಎಸ್.ಅಶೋಕ, ಕುಮಾರಗೌಡ, ಜಂಬುನಾಥ, ಭೀಮನಗೌಡ, (ಸಹಕಾರ್ಯದರ್ಶಿಗಳು)ರವರುಗಳು ಸೇರಿ 34 ಜನರ ನಗರ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಸಮ್ಮೇಳನಕ್ಕೆ ಜಿಲ್ಲಾಕಾರ್ಯದರ್ಶಿ ಕಾ॥ ಎಲ್.ಮಂಜುನಾಥ. ಎಸ್.ಎಫ್.ಐ ಧ್ಯೇಯಧೋರಣೆ ಕುರಿತು ಮಾತನಾಡಿದರು. ಡಿ.ವೈ.ಎಫ್.ಐ. ಅಧ್ಯಕ್ಷ ಪಾಂಡುರಂಗ, ರೈಸ್ ಮಿಲ್ ಯೂನಿಯನ್ ಅಧ್ಯಕ್ಷ ರಾಮನಾಥ ಸಮ್ಮೇಳನಕ್ಕೆ ಶುಭ ಕೋರಿದರು. ಹೊಸಪೇಟೆ ನಗರಕ್ಕೆ ಪದವೀ ಕಾಲೇಜು ಮಂಜೂರಿ, ವಿದ್ಯಾರ್ಥಿನಿಯರ ಪದವಿ ಹಾಸ್ಟೆಲ್, ಗ್ರಾಮಾಂತರ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾದ ಹೆಚ್ಚು ಬಸ್ ಸೌಕರ್ಯ, ವಾಚನಾಲಯ, ಸೈಕಲ್ ಸ್ಟ್ಯಾಂಡ್ ಮುಂತಾದ ಬೇಡಿಕೆಗಳ ಕುರಿತು ಸಮ್ಮೇಳನ ನಿರ್ಣಯ ಸ್ವೀಕರಿಸಿತು.

ವಿರಾಜಪೇಟೆ ತಾ॥ ಸಮಾವೇಶ

ಪದವಿಪೂರ್ವ ಶಿಕ್ಷಣ ಮಂಡಳಿ ರದ್ಧತಿ ತೀರ್ಮಾನ ಹಿಂತೆಗೆದುಕೊಳ್ಳಬೇಕು ಕೊಡಗಿನಲ್ಲಿ ಉನ್ನತ ಶಿಕ್ಷಣಕ್ಕಿರುವ ಕೇಂದ್ರವನ್ನು ತೆರೆಯಬೇಕು, ಖಾಲಿ ಇರುವ ಶಿಕ್ಷಕ ಹುದ್ದೆಗೆ ಕೂಡಲೇ ನೇಮಕ, ಪರೀಕ್ಷಾ ಸುಗ್ರೀವಾಜ್ಞೆ ಹಿಂತೆಗೆದುಕೊಳ್ಳಬೇಕು ಮುಂತಾದ ಹಲವಾರು ಠರಾವುಗಳನ್ನು ವಿರಾಜಪೇಟೆ 2ನೇ ತಾಲ್ಲೂಕು ಎಸ್.ಎಫ್.ಐ. ಸಮಾವೇಶವು ಕೈಗೊಂಡಿತು.

ಜನವರಿ 8ರಂದು ರಾಜ್ಯ ಸಮಿತಿ ಸದಸ್ಯ ಕಾ॥ ತೇಜಸ್ವಿನಿಯವರು ಉದ್ಘಾಟಿಸಿ ಕಾ॥ ಲತೀಫ್‌ರವರು ಧ್ವಜಾರೋಹಣ ಮಾಡಿದ ಸಮ್ಮೇಳನದಲ್ಲಿ ಕಾ॥ ಪ್ರಮೋದ್, ಬಿ.ಸಿ.ರಾಜುರವರುಗಳು ಶುಭಕೋರಿ ಮಾತನಾಡಿದರು. ಕಾ॥ ವಾರಿಜ ಮಂಡಿಸಿದ ವರದಿ ಚರ್ಚೆ ನಡೆದ ನಂತರ ಅಂಗೀಕರಿಸಲಾಯಿತು. ಪ್ರಸಕ್ತ ಸಾಲಿಗೆ ಕಾ॥ ಮಂಜುನಾಥ್ (ಅಧ್ಯಕ್ಷ) ವಾರಿಜ (ಕಾರ್ಯದರ್ಶಿ) ಯಮುನಾ (ಉಪಾಧ್ಯಕ್ಷ) ಪ್ರಕಾಶ್ (ಸಹಕಾರ್ಯದರ್ಶಿ)

ಧಾರವಾಡ

ಜಿಲ್ಲೆಯ ತಡಕೋಡ ಘಟಕದ ಸಮ್ಮೇಳನ ಡಿಸೆಂಬರ್ 25 ರಂದು ಜಿಲ್ಲಾಪರಿಷತ್ ಸದಸ್ಯ ಶ್ರೀಯು. ರಾಯಪ್ಪ ಹೊಸಮನಿಯವರ ಧ್ವಜಾರೋಹಣದೊಂದಿಗೆ ಆರಂಭವಾಯಿತು. ಜಿಲ್ಲಾ ಅಧ್ಯಕ್ಷ ಮೋಹನ ಪಿ. ರಾಯರೆಡ್ಡಿ ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ನ್ಯಾಯವಾದಿ ಶ್ರೀ ಪ್ರಕಾಶಉಡಕೇರಿಯವರು ಮಾತನಾಡಿದರು. ನೂತನ ಶಿಕ್ಷಣ ನೀತಿಯನ್ನು ಹಾಗೂ ರಾಜ್ಯ ಸರ್ಕಾರ ಪಿ.ಯು.ಸಿ. ಮಂಡಳಿ ರದ್ದುಗೊಳಿಸುವ ಹಾಗೂ ಪರೀಕ್ಷೆ ಸುಗ್ರೀವಾಜ್ಞೆಯನ್ನು ಮೋಹನ್‌ರಾಯರೆಡ್ಡಿ ಮಾತನಾಡುತ್ತಾ ಖಂಡಿಸಿದರು. ಮಂಡಲ ಪ್ರಧಾನ ಚಂದ್ರಪ್ಪ, ಹುಲ್ಲೂರ ಹಾಗೂ ಎಸ್.ಎಫ್.ಐ. ಜಿಲ್ಲಾ ಸಹಕಾರ್ಯದರ್ಶಿ ಕಾ॥ ರವಿ ಬಿಡನೂರ ಮಾತನಾಡಿದರು. ನೂತನ ಸಮಿತಿಗೆ ಎಂ.ಎಚ್.ಮುತಾಲಿಕದೇಸಾಯಿ (ಅಧ್ಯಕ್ಷ) ವಿ.ಎನ್.ಸುಂಕದ (ಕಾರ್ಯದರ್ಶಿ) ಪಾಟೀಲ, ಫರೂಖ (ಉಪಾಧ್ಯಕ್ಷರು) ಬಂಗ್ಲೇದ, ಉಧೋಜಿ (ಸಹಕಾರ್ಯದರ್ಶಿ) ದೇಶಪಾಂಡೆ (ಖಜಾಂಚಿ)ಯಾಗಿ ಆರಿಸಲಾಯಿತು.

ಸಾರ್ವಜನಿಕ ವಲಯದ ಕಾರ್ಮಿಕರ ಸಮಾವೇಶ

ಕಳೆದ ಸಂಚಿಕೆಯಲ್ಲಿ ಬೆಂಗಳೂರಿನಲ್ಲಿ ಜನವರಿ 20ರಂದು ನಡೆದ ಕರ್ನಾಟಕದಲ್ಲಿನ ಕೇಂದ್ರೀಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಮಿಕರು ವೇತನ ಪರಿಷ್ಕರಣ ಪ್ರಶ್ನೆಯ ಮೇಲೆ ನಡೆಸಿದ ಸಮಾವೇಶದ ವರದಿ ಪ್ರಕಟವಾಗಿತ್ತು. ಆ ಸಮಾವೇಶ ಕೈಗೊಂಡ ಇನ್ನೂ ಕೆಲವು ನಿರ್ಣಯಗಳನ್ನು ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ. ಇಲ್ಲಿ ಅದನ್ನು ಕೊಡುತ್ತಿದ್ದೇವೆ.

ಹಿಂದಿನ ದಿನಾಂಕದಿಂದಲೇ ಅನ್ವಯವಾಗುವಂತಿದ್ದರೆ 12.5 % ಇಲ್ಲವಾದರೆ ಮಾತ್ರವೇ 15 % ವೇತನ ಏರಿಕೆ ಸಾಧ್ಯವೆಂಬ ಬಿ.ಪಿ.ಇ. ನಿರ್ದೇಶನವನ್ನು ಕಾರ್ಮಿಕರು ಒಪ್ಪಿಕೊಳ್ಳುವುದಿಲ್ಲವೆಂದು ಸ್ಪಷ್ಟಪಡಿಸಿರುವ ಈ ನಿರ್ಣಯ ಕಾರ್ಮಿಕ ಆಂದೋಲನದ ಒಂದು ವಿಭಾಗ ಇದನ್ನು ಒಪ್ಪಿಕೊಂಡಿರುವುದು ಅಂದರೆ 1-1-89ರ ನಂತರವೇ ಪರಿಷ್ಕರಣದ ಅನ್ವಯವನ್ನು ಒಪ್ಪಿಕೊಂಡಿರುವುದು ದುರ್ದೈವದ ಸಂಗತಿ ಎಂದಿದೆ. ಬಿ.ಪಿ.ಇ. ನಿರ್ದೇಶನ ಒಪ್ಪುವ ಈ ನಿಲುವನ್ನು ಬಿಟ್ಟು ಸಿ.ಪಿ.ಎಸ್.ಸಿ.ಯು. ವಿನೊಂದಿಗೆ ಪೂರ್ವಾನ್ವಯವಾಗುವ ಒಪ್ಪಂದಗಳಿಗಾಗಿ ಹೋರಾಡಬೇಕೆಂದು ಕರೆ ನೀಡಿದೆ.

ಸೂಚ್ಯಂಕ ಬದಲಿಕೆಯಿಂದ ಸವೆತ

ಬಳಕೆದಾರರ ಮೇಲೆ ಸೂಚ್ಯಂಕದ ಆಧಾರ ವರ್ಷವನ್ನು 1960ರಿಂದ 1982ಕ್ಕೆ ಬದಲಿಸುವುದರ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಇನ್ನೊಂದು ನಿರ್ಣಯ ಕೇಂದ್ರ ಸರ್ಕಾರದ ಈ ಕ್ರಮದಿಂದಾಗಿ ಪ್ರತಿಯೊಬ್ಬ ಕಾರ್ಮಿಕ ಪ್ರತಿ ತಿಂಗಳು 40ರೂ.ನಷ್ಟು ತುಟ್ಟಿಭತ್ಯೆಯಲ್ಲಿ ಕಡಿತ ಎದುರಿಸಬೇಕಾಗುತ್ತದೆ ಎಂದಿದೆ. 1960ರ ಸೂಚ್ಯಂಕವೇ ಹಲವಾರು ನ್ಯೂನ್ಯತೆಗಳನ್ನು ಹೊಂದಿದ್ದು ಅದನ್ನು ಸರಿಯಾದ ಮಾರುಕಟ್ಟೆ ಬೆಲೆಗಳನ್ನು ಪ್ರತಿಬಿಂಬಿಸುವುದಿಲ್ಲ ಎಂದು ರಾಥ್ ಸಮಿತಿ ಹೇಳಿತು. ಅದರ ಸಲಹೆಯ ಪ್ರಕಾರ ಈ ನ್ಯೂನತೆಗಳನ್ನು ಸರಿಪಡಿಸುವ ಬದಲು, ಕೇಂದ್ರೀಯ ಕಾರ್ಮಿಕ ಸಂಘಗಳೊಡನೆ ಸಮಾಲೋಚನೆ ಕೂಡ ನಡೆಸದೆ. ಏಕಪಕ್ಷೀಯವಾಗಿ ಹೊಸ ಸರಣಿಯನ್ನು ಹೇರಲಾಗಿದೆ. ಈ ನಿಲುಮೆಯ ವಿರುದ್ಧ ಹೋರಾಡಲು ಸಮಾವೇಶ ಕರೆ ನೀಡಿದೆ.

ಖಾಸಗೀಕರಣ ವಿರುದ್ಧ

ಬಿ.ಎಚ್.ಇ.ಎಲ್.ನಲ್ಲಿ ಇತ್ತೀಚೆಗೆ ವೇತನ ಪರಿಷ್ಕರಣದ ಸಮಯದಲ್ಲಿ ಕಾರ್ಮಿಕ ಮುಖಂಡರಿಗೆ ಒಂದು ಆತಂಕಕಾರಿ ಸಂಗತಿ ತಿಳಿದುಬಂತು. 8ನೇ ಯೋಜನೆಯ 36ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಯಲ್ಲಿ 12ಸಾವಿರ ಮೆಗಾವಾಟ್ ಆರ್ಡರ್ ಮಾತ್ರವೇ ಬಿ.ಎಚ್.ಇ.ಎಲ್.ಗೆ ನೀಡಿದ್ದು ಉಳಿದದ್ದನ್ನು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ನೀಡಲಾಗಿದೆ ಎಂದು. ಇದು ಭಾರತ ಸರ್ಕಾರದ 195 6ರ ಕೈಗಾರಿಕಾ ಧೋರಣೆಯ ನಿರ್ಣಯಕ್ಕೆ ವಿರುದ್ಧವಾಗಿದೆ ಎಂದಿರುವ ಸಮಾವೇಶ ಇದನ್ನು ಐಕ್ಯತೆಯಿಂದ ವಿರೋಧಿಸಬೇಕೆಂದು ಕರೆನೀಡಿದೆ.

ಇದೇ ರೀತಿ ಬಿ.ಇ.ಎಲ್.ನ ತಲೋಜಾ ಘಟಕವನ್ನು ಖಾಸಗೀಕರಿಸಲು ಪ್ರಯತ್ನಿಸಲಾಯಿತು. ಆದರೆ ಕಾರ್ಮಿಕರ ಮತ್ತು ಅಧಿಕಾರಿಗಳ ಜಂಟೀ ಪ್ರತಿಭಟನೆಗಳಿಂದಾಗಿ ಇದು ಸಾಧ್ಯವಾಗಲಿಲ್ಲ. ಆದರೆ ಈಗ ಮತ್ತೆ ಬೆಂಗಳೂರು ಸಂಕೀರ್ಣವನ್ನು ವಾಣಿಜ್ಯ ಮತ್ತು ವಾಣಿಜ್ಯೇತರ ಎಂದು ವಿಭಜಿಸಿ ವಾಣಿಜ್ಯ ವಿಭಾಗವನ್ನು ಕ್ರಮೇಣ ಖಾಸಗಿಯವರಿಗೆ ಅರ್ಪಿಸುವ ಸನ್ನಾಹ ನಡೆದಿದೆ. ಈ ವಿಭಾಗದ 3ಸಾವಿರ ಕಾರ್ಮಿಕರಲ್ಲಿ ಆತಂಕ ಮೂಡಿಸಿರುವ ಈ ಯೋಜನೆಯನ್ನು ವೇತನ ಪರಿಷ್ಕರಣ ಮಾತುಕತೆಯ ಸಮಯದಲ್ಲಿ ಕಾರ್ಮಿಕ ಸಂಘಗಳೆದುರು ಖಂಡಿಸಲಾಯಿತು. ಈ ಪ್ರತಿಗಾಮೀ ಧೋರಣೆಯನ್ನು ವಿರೋಧಿಸಿ ಬಿ.ಇ.ಎಲ್. ವಿಭಜನೆಯಾಗದಂತೆ ಐಕ್ಯ ಹೋರಾಟ ನಡೆಸಬೇಕೆಂದು ಸಮಾವೇಶ ಇನ್ನೊಂದು ಠರಾವಿನ ಮೂಲಕ ಕರೆ ನೀಡಿದೆ.

ವಿಶೇಷ ಸೂಚನೆ

ಪ್ರಿಯ ಸಂಗಾತಿಗಳೇ,

ಎಸ್.ಎಫ್.ಐ. ರಾಜ್ಯ ಸಮಾವೇಶ ಅನಿವಾರ್ಯ ಕಾರಣದಿಂದಾಗಿ ಮುಂದೂಡಲಾಗಿದ್ದು ದಿನಾಂಕ 1989 ಫೆಬ್ರವರಿ 12-13ರಂದು ತುಮಕೂರಿನಲ್ಲಿ ಜರುಗಲಿದ್ದು ಪ್ರತಿನಿಧಿಗಳು ಗಮನಿಸಬೇಕಾಗಿ ವಿನಂತಿ.

ಎಸ್.ವೈ.ಗುರುಶಾಂತ್
ರಾಜ್ಯ ಕಾರ್ಯದರ್ಶಿ

ಅಮೆರಿಕನ್ ಪಿತೂರಿ ಮುಚ್ಚಿಡಲು
ಗ್ರೆನಡಾ ನಾಯಕರಿಗೆ ಗಲ್ಲು ಶಿಕ್ಷೆ

ಗ್ರೆನಾಡಾವನ್ನು ಅಮೆರಿಕನ್ ಸೈನ್ಯ ಆಕ್ರಮಿಸಿ ಐದು ವರ್ಷಗಳ ನಂತರ ಗ್ರೆನಾಡಾದ ಎಡ ಪಂಥೀಯ ನ್ಯೂಜು ವೆಲ್‌ಮೂವ್‌ಮೆಂಟಿನ (ಎನ್‌ಜೆಎಂ) 114ನಾಯಕಗೆ ಗಲ್ಲಿಗೇರಿಸುವುದರ 'ಕೋರ್ಟು' ನಿರ್ಣಯದ ಬಗ್ಗೆ ಹುಯಿಲೆದ್ದಿದೆ. ಅವರ ಮೇಲಿನ 'ಆಪಾದನೆ' ಅವರದೇ ಪಕ್ಷದ ಮಾಜಿ ಪ್ರಧಾನಿ ಮಾರಿಸ್ ಬಿಷಪ್ (ಅಮೆರಿಕನ್ ಆಕ್ರಮಣದ ಮೂಲಕ ಪದಚ್ಯುತರಾದ ಪ್ರಧಾನಿ) ಸೇರಿದಂತೆ ಅವರದೇ ಪಕ್ಷದ ನಾಯಕರುಗಳ ಕೊಲೆ! ಕೊಲೆಯಾದವರು ಮತ್ತು ಕೊಲೆ ಆಪಾದಿತರಿಬ್ಬರೂ ಗ್ರೆನಾಡಾದ 1979 ಕ್ರಾಂತಿಯ ನಾಯಕರು ಮತ್ತು ಕಾರ್ಯಕರ್ತರು 114 ಜನ ಆಪಾದಿತರಿಗೆ 1986 ಡಿಸೆಂಬರ್ 4ರಂದು ಗಲ್ಲುಶಿಕ್ಷೆ ವಿಧಿಸಲಾಗಿತ್ತು. ಈ ನಿರ್ಣಯ ನೀಡಿದ ಕೋರ್ಟುಗಳ ಕಾನೂನು ಬದ್ಧತೆ ಸೇರಿದಂತೆ ನಿರ್ಣಯದ ವಿರುದ್ಧ ಆಪಾದಿತರು ಉಚ್ಚ ನ್ಯಾಯಾಲಯಗಳಿಗೆ ಮನವಿ ಮೂಲಕ ಹೋರಾಟ ನಡೆಸುತ್ತಿದ್ದರು.

ಈ ವಿಚಾರಣೆ ಆಪಾದಿತರು ಮತ್ತು ಅವರ ವಕೀಲರುಗಳಿಲ್ಲದೆ ನಡೆದು, ಆಪಾದಿತರನ್ನು ಪಿರ್ದೋಟಿಗಳೆಂದು ಘೋಷಿಸಲಾಯಿತು. ಈ ವಿಚಾರಣೆ ಬಗ್ಗೆ ಮಾಜಿ ಅಮೆರಿಕನ್ ಅಟಾರ್ನಿ ಜನರಲ್ ರ್‍ಯಾಮಸೇ ಕ್ಲಾರ್ಕ್ ಕಾನೂನನ್ನು ಮನ್ನಿಸುವ ಯಾವನೂ ಈ ವಿಚಾರಣೆಯನ್ನು ಒಪ್ಪಿಕೊಳ್ಳಲಾರ'' ಎಂದು ಉದ್ಗಾರ ತೆಗೆದಿದ್ದಾರೆ. ಆಪಾದಿತರ ಪರವಾದ ಸಾಕ್ಷಿಗಳಿಗೆ ಅನುಮತಿ ನೀಡಲಿಲ್ಲ ಆದ್ದರಿಂದ ಯಾವ ಪಾಟೀ ಸವಾಲೂ ನಡೆಯಲಿಲ್ಲ. ಸರ್ಕಾರದ ಕಡೆಯಿಂದ ಒಬ್ಬನ ಸಾಕ್ಷಿ ಆಧಾರದ ಮೇಲೂ ಇಡೀ ವಿಚಾರಣೆ ನಡೆಯಿತು. ವಿಚಾರಣೆ ನಡೆದದ್ದು ಅದಕ್ಕಾಗಿ ಕಟ್ಟಿದ ದೂರ ಪರ್ವತವೊಂದರಲ್ಲಿರುವ ಸೆರೆಮನೆಯೊಳಗೆ ಇರುವ ಕೋರ್ಟು ಒಂದರಲ್ಲಿ. ವಿಚಾರಣೆ ಮುಂಚೆ ಮತ್ತು ಆ ಅವಧಿಯಲ್ಲಿ 'ಆಪಾದಿತ'ರಿಗೆ ಅಮಾನವೀಯ ಚಿತ್ರಹಿಂಸೆ ಕೊಡಲಾಯಿತು. ಎಷ್ಟೋ ಆಪಾದಿತರು ಅರ್ಧ ಮೂರ್ಛಾವಸ್ಥೆಯಲ್ಲಿ ಕೋರ್ಟಿಗೆ ಹಾಜರಾಗುತ್ತಿದ್ದರು. ಚಿತ್ರಹಿಂಸೆಯಿಂದ ಜರ್ಝರಿತ ದೇಹಗಳನ್ನು ಹೊತ್ತು ಕೋರ್ಟಿನಲ್ಲಿರುತ್ತಿದ್ದರು. ಅವರನ್ನು ಬಂಧಿಸಿದಾಗ ಅವರಿಂದ ಕಸಿದುಕೊಂಡ (ಅವರ ರಕ್ಷಣೆಗೆ ಬರಬಹುದಾದ) ದಸ್ತಾವೇಜುಗಳು ಅವರಿಗೆ ಲಭ್ಯವಿರಲಿಲ್ಲ.

ವಿಚಾರಣೆ ಆರಂಭವಾಗುವ ಮೊದಲೇ ರೇಗನ್ ಆಡಳಿತ 'ಆಪಾದಿತರು' ದೋಷಿಗಳು ಎಂದು ಭಾರೀ ಪ್ರಚಾರ ಕೈಗೊಂಡಿತ್ತು. ಸಿಐಎಯ ಗುಪ್ತ ಯುದ್ಧಗಳು 1981-87 ಎಂಬ ಪುಸ್ತಕದ ಪ್ರಕಾರ ಈ ಪ್ರಚಾರಕ್ಕೆ 7 ಮಿಲಿಯ ಡಾಲರುಗಳನ್ನು ಖರ್ಚು ಮಾಡಲಾಯಿತು.

ತಮ್ಮ ಪಕ್ಷದ ನಾಯಕರ ಆರೋಪ ಹೊತ್ತ 'ಆಪಾದಿತ'ರನ್ನು ದೋಷಿ ಎಂದು ಸಾಧಿಸಲು ಈ ಆತುರವೇಕೆ? ಎಂಬುದು ಸ್ವಾಭಾವಿಕ ಪ್ರಶ್ನೆ. ಯಾಕೆಂದರೆ ಈ ವಿಚಾರಣೆಗೂ ಗ್ರೆನಾಡಾದ ಮೇಲೆ ಅಮೆರಿಕನ್ ಆಕ್ರಮಣ ಮತ್ತು ಕಬಳಿಸುವಿಕೆಯ ಚರಿತ್ರೆಗೂ ಬಹಳಷ್ಟು ಸಂಬಂಧ ಎದೆ. ಆಗಿನ ಆಳುವ ಪಕ್ಷದ ನಾಯಕರನ್ನು ಕೊಲ್ಲಿಸಿದ ತನ್ನ ಕುಕೃತ್ಯ ಪಿತೂರಿಗಳನ್ನು ಮುಚ್ಚಿಡಲು ಇನ್ನು ಮುಂದೆ ಬರಬಹುದಾದ ರಾಜಕೀಯ ವಿರೋಧದ ನಾಯಕರನ್ನು ಒಂದೇ ಕಲ್ಲಿನಿಂದ ಹೊಡೆಯುವ ಹವಣಿಕೆ. ಮಾಜಿ ಅಮೆರಿಕನ್ ಅಟಾರ್ನಿ ಜನರಲ್ ಮಾತುಗಳಲ್ಲಿ ಹೇಳಬೇಕಾದರೆ- "ರೇಗನ್ ಆಡಳಿತ ಗ್ರೆನಾಡಾದ ಅಳಿದುಳಿದ ರಾಜಕೀಯ ವಿರೋಧಿಗಳನ್ನು ಗಲ್ಲಿಗೇರಿಸಿ ಬಾಯಿ ಮುಚ್ಚಿಸಲು ಆದೇಶಿಸಿದೆ. ಇದರಿಂದ ಇದ್ದಬದ್ದ ರಾಜಕೀಯ ವಿರೋಧ ಅಡಗಿ ತನ್ನ ಗ್ರೆನಾಡಾ ಆಕ್ರಮಣವನ್ನು ಕಾನೂನು ಬದ್ಧಗೊಳಿಸಬೇಕೆಂದು ಅವರ ಉದ್ದೇಶ.

ಹೀಗಿದೆ ಗ್ರೆನಾಡಾದಲ್ಲಿ "ಶಾಂತಿ ಮತ್ತು ಪ್ರಜಾಪ್ರಭುತ್ವವನ್ನು....ಮರಳಿ ಸ್ಥಾಪಿಸುವುದಕ್ಕಾಗಿ'' ಆಕ್ರಮಣ ಮಾಡಿದ ಅಮೆರಿಕನ್ ಸಾಮ್ರಾಜ್ಯಶಾಹಿಯ ವೈಖರಿ.

ಪ. ಬಂಗಾಳ ವಿದ್ಯುತ್ ಘಟಕ ನಿಧಿಗೆ ಮನವಿ
ಬಿತ್ತರಿಸಲು ಬಾಯಿ ಬಂದಾದ ದೂರದರ್ಶನ

ರಾಜ್ಯ ಸರ್ಕಾರಗಳು ಕಪ್ಪ ಕಾಣಿಕೆ ಸಲ್ಲಿಸುವ ತುಂಡರಸರಿಗಿಂತ ಹೆಚ್ಚೇನೂ ಅಲ್ಲವೆಂದು ಒತ್ತಿ ಹೇಳುವ ಯಾವ ಸಂದರ್ಭವನ್ನೂ ದಿಲ್ಲಿಯ ಸುಲ್ತಾನರು ಬಿಟ್ಟುಕೊಡುವುದಿಲ್ಲ. ರಾಜ್ಯ ಸರ್ಕಾರ ಕಾಂಗ್ರೆಸ್ಸೇತರ- ಅದರಲ್ಲೂ ಎಡರಂಗದ್ದಾದರೆ-ಖಂಡಿತಾ ಇಲ್ಲ. ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ಅಂತಹ ಒಂದು ಸಂದರ್ಭ ಒದಗಿಬಂತು.

ಪಶ್ಚಿಮಬಂಗಾಳ ಸರ್ಕಾರ ರಾಜ್ಯದ ಟೆಲಿವಿಷನ್ ಕೇಂದ್ರಗಳ ಮೂಲಕ ರಾಜ್ಯದ ಜನತೆಗೆ ಒಂದು ಮನವಿ ಬಿತ್ತರಿಸಲು ಕೇಳಿಕೊಂಡಿತ್ತು. ಅದೂ ದುಡ್ಡು ಕೊಟ್ಟು ಜಾಹೀರಾತಿನ ರೂಪದಲ್ಲಿ. ದೂರದರ್ಶನ ಅದನ್ನು ನಿರಾಕರಿಸಿತು. ಮನವಿ ಜನತೆಗೆ ಹೇಳಬಯಸಿದ್ದು ರಾಜ್ಯ ಸರ್ಕಾರ ಕಟ್ಟಿಸಲು ಯೋಜಿಸಿರುವ ಥರ್ಮಲ್ ವಿದ್ಯುತ್ ಘಟಕಕ್ಕೆ ನಿಧಿ ಸಂಗ್ರಹಿಸಲು ಉಳಿತಾಯ ಯೋಜನೆಗಳ ಮೂಲಕ ಹಣ ಉಳಿಸಲು. ಇದು ದೂರದರ್ಶನ ಡಿಜನು ಗಟ್ಟಲೆ ಬಿತ್ತರಿಸುವ ಜಾಹೀರಾತುಗಳಂತೆ ಅಶ್ಲೀಲವಾಗಿರಲಿಲ್ಲ. ಈ ಸರಕು ಅಥವಾ ಆ ಸರಕು ಕೊಳ್ಳಲು ಹೇಳಲಿಲ್ಲ. ಅಥವಾ ಕೇಂದ್ರ ಸರ್ಕಾರವನ್ನು ಹಳಿಯುವ ಯಾವ ಸಂದೇಶವನ್ನೊಳಗೊಂಡಿರಲಿಲ್ಲ. ಹೀಗಾದರೆ ಈ ಮನವಿಯನ್ನು ದೂರದರ್ಶನ ನಿರಾಕರಿಸಿದ್ದು ಯಾಕೆ?

ದೂರದರ್ಶನ ಕೊಟ್ಟ ಕಾರಣ, ಪ್ರಧಾನ ಮಂತ್ರಿಗಳ ಪರಿಹಾರ ನಿಧಿ ಬಿಟ್ಟರೆ ಬೇರೆ ಯಾವ ನಿಧಿ ಸಂಗ್ರಹದ ಮನವಿಗೆ ಅವಕಾಶ ಮಾಡಿಕೊಡುವುದಿಲ್ಲ ಎಂಬ ತಾಂತ್ರಿಕ ಕಾರಣ. ಇದು ಒಂದು ಅರ್ಧಸತ್ಯ. ಏಕೆಂದರೆ ಈ ನಿಯಮ ಅನ್ವಯವಾಗುವುದು ಧರ್ಮಾರ್ಥ ಪ್ರಸಾರ ಮಾಡುವ ಮನವಿಗಳಿಗೆ, ಜಾಹೀರಾತುಗಳಿಗಲ್ಲ. ನಿಜವಾದ ಕಾರಣ ಬೇರೆ. ಕೇಂದ್ರ ಸರ್ಕಾರ ಈ ಥರ್ಮಲ್ ವಿದ್ಯುತ್ ಘಟಕ ನಿರ್ಮಾಣಕ್ಕೆ ಹಣ ಒದಗಿಸದೆ ತಡೆಯಾಜ್ಞೆಯೊಡ್ಡಲು ಮೊದಲಿಂದ ಪ್ರಯತ್ನಿಸಿತ್ತು. ಅದು ಪೂರ್ಣ ಕೇಂದ್ರದ ನಿಯಂತ್ರಣದಲ್ಲಿರಬೇಕೆಂದು ಷರತ್ತು ಒಡ್ಡಿತ್ತು. ಸೋವಿಯತ್ ಸಹಾಯವನ್ನು ತಡೆಹಿಡಿದಿತ್ತು. ಕೇಂದ್ರ ಸರ್ಕಾರದ ಈ ನೀತಿ ನೋಡಿ, ರಾಜ್ಯ ಸರ್ಕಾರ ತಾನಾಗಿ ಈ ವಿದ್ಯುತ್ ಘಟಕ ನಿರ್ಮಿಸಲು ನಿರ್ಧರಿಸಿತು. 1989-90 ರಾಜ್ಯ ಯೋಜನೆಯಲ್ಲಿ 92 ಕೋಟಿ ರೂ. ಒದಗಿಸಿತ್ತು. ಇನ್ನೂ ಹೆಚ್ಚಿನ ಹಣ ಒದಗಿಸಲು ವಿಶೇಷ ನಿಧಿ ಸಂಗ್ರಹಿಸಲು ರಾಜ್ಯ ಸರ್ಕಾರ ನಿರ್ಧರಿಸಿತು. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಜನ ರಕ್ತದಾನ ಮಾಡಿ ಈ ನಿಧಿ ಹಣ ಸಂಗ್ರಹಿಸಲು ಮುಂದೆ ಬಂದಿದ್ದಾರೆ. ರಾಜ್ಯ ಸರ್ಕಾರ ಒಂದು ವಿದ್ಯುತ್ ಘಟಕ ಕಟ್ಟಿಸಲು ಸಂಪೂರ್ಣ ತನ್ನದೇ ಸಂಪನ್ಮೂಲಗಳನ್ನು ಒದಗಿಸುವ ಸವಾಲು ಸ್ವೀಕರಿಸಿದ್ದು ಇದೇ ಮೊದಲು. ದಿಲ್ಲಿ ಸುಲ್ತಾನರು ಈ 'ಉದ್ಧಟತನ' ಸಹಿಸಿಯಾರೇ ? ಆದ್ದರಿಂದ ಈ ಮನವಿ ಬಿತ್ತರಿಸಲು ನಿರಾಕರಣೆ.

ಕೇರಳದಲ್ಲಿ ಚಳುವಳಿ
ಗವರ್ನರ್ ವಾಪಸು ಕರೆಸಿ

ಸಿ.ಪಿ.ಐ.(ಎಂ) ಕೇರಳ ರಾಜ್ಯ ಸಮಿತಿ ಕಾಂಗ್ರೆಸ್(ಐ) ಏಜೆಂಟರಂತೆ ವರ್ತಿಸುತ್ತಿರುವ ರಾಜ್ಯಪಾಲೆ ಶ್ರೀಮತಿ ರಾಮದುಲಾರಿ ಸಿನ್ಹಾರನ್ನು ವಾಪಸು ಕರೆಸಲು ಕೊಟ್ಟ ಕರೆಗೆ ರಾಜ್ಯದಲ್ಲಿ ಭಾರಿ ಬೆಂಬಲ ವ್ಯಕ್ತಪಟ್ಟಿದೆ.

ಸಿ.ಪಿ.ಐ.ನ ಕೇರಳ ರಾಜ್ಯ ಸಮಿತಿ ಸಹ ಸಭೆ ಸೇರಿ ಸಿ.ಪಿ.ಐ.(ಎಂ) ಕರೆಗೆ ಬೆಂಬಲ ನೀಡಿದೆ. ರಾಜ್ಯ ಸರ್ಕಾರದ ಸ್ವತಂತ್ರ ಚಟುವಟಿಕೆಗಳಲ್ಲಿ ಬಾಧೆಯೊಡ್ಡಿ ಕೇಂದ್ರ-ರಾಜ್ಯ ಸಂಬಂಧಗಳು ಸುಗಮವಾಗಿರುವುದಕ್ಕೆ ದೊಡ್ಡ ಅಡ್ಡಿಯಾಗಿರುವ ಈಗಿನ ರಾಜ್ಯಪಾಲರ ವಾಪಸ್ಸಿಗೆ ರಾಜ್ಯ ಸಮಿತಿ ಕರೆ ನೀಡಿದೆ.

ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಜಂಟಿ ಕೌನ್ಸಿಲ್ ರಾಜಭವನದ ಎದುರು ಅನಿರ್ದಿಷ್ಟ ಕಾಲದ ಧರಣಿ ಸತ್ಯಾಗ್ರಹ ಆರಂಭಿಸಿದೆ. ಗವರ್ನರ್‌ರ ಎಲ್ಲಾ ಸಾರ್ವಜನಿಕ ಸಭೆಗಳನ್ನು ಬಹಿಷ್ಕರಿಸಲು ಕರೆ ನೀಡಿದೆ. ಕೌನ್ಸಿಲ್‌ನ ಸಂಚಾಲಕರು ಗವರ್ನರ್ ನಿರ್ಧಾರದ ವಿರುದ್ಧ ಕೋರ್ಟಿಗೆ ಹೋಗುವುದಾಗಿ ತಿಳಿಸಿದ್ದಾರೆ.

ಎಸ್.ಎಫ್.ಐ. ಕೇರಳ ರಾಜ್ಯ ಸಮಿತಿ ತನ್ನ ಚಳುವಳಿಯನ್ನು ಜಿಲ್ಲಾಕೇಂದ್ರ ಗಳಿಗೆ ವಿಸ್ತರಿಸಿದೆ. ಜನವರಿ ... ಸಾಮೂಹಿಕ ಉಪವಾಸ ಸತ್ಯಾಗ್ರಹ ಆರಂಭಿಸಿದೆ.

ಎಡ ಪ್ರಜಾರಂಗದ ಎಲ್ಲಾ ನಾಯಕರು ಮತ್ತು ಮಂತ್ರಿಗಳು ಗಣರಾಜ್ಯೋತ್ಸವ ದಿನದ ಹಿಂದಿನ ದಿನ ನೀಡುವ ವಿಶೇಷ ಔತಣವನ್ನು ಬಹಿಷ್ಕರಿಸಿದರು.

ಎಡ ಪ್ರಜಾರಂಗ ಸಮನ್ವಯ ಸಮಿತಿ ಫೆಬ್ರವರಿ 1ರಿಂದ ಅನಿರ್ದಿಷ್ಟ ಚಳುವಳಿ ನಡೆಸಲು ನಿರ್ಧರಿಸಿದೆ. ಗವರ್ನರ್‌ನ್ನು ವಾಪಸು ಕರೆಸಿಕೊಳ್ಳಲು ಕೇಂದ್ರದ ಮೇಲೆ ಒತ್ತಡ ಹೇರಲಾಗುವುದು.

ಪುನಃ ಗೊರ್ಬಾಚೇವ್ ಶಾಂತಿ ಆಕ್ರಮಣ

ರೇಗನ್‌ರ ಕಟ್ಟಕಡೆಯ ದ್ವಿಮಾನ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ನಿರ್ಮಿಸಲು ಅವಕಾಶ ಮಾಡುವ 315 ಬಿಲಿಯನ್ ಡಾಲರುಗಳ ರಕ್ಷಣಾ ಬಜೆಟ್‌ಗೆ ಉತ್ತರವಾಗಿ ಸೋವಿಯತ್ ಅಧ್ಯಕ್ಷ ಗೊರ್ಬಚೇವ್ ತಮ್ಮ ಶಾಂತಿ ಆಕ್ರಮಣದಲ್ಲಿ ಇನ್ನೊಂದು ಹೆಜ್ಜೆ ಇಟ್ಟಿದ್ದಾರೆ.

ಸೋವಿಯತ್ ರಕ್ಷಣಾ ಬಜೆಟ್‌ನಲ್ಲಿ 14.2 ಶೇಕಡಾ ಕಡಿತ ಘೋಷಿಸಿದ್ದಾರೆ. ಮಿಲಿಟರಿ ಯಂತ್ರೋಪಕರಣ ಮತ್ತು ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ಶೇಕಡಾ 19.5 ಕಡಿತ ಘೋಷಿಸಿದ್ದಾರೆ. ಅಲ್ಲದೆ ಮುಂದಿನ ಎರಡುವರ್ಷಗಳಲ್ಲಿ ಕಡಿಮೆ ವ್ಯಾಪ್ತಿಯ ಸಮರಾಂಗಣದ ಅಸ್ತ್ರಗಳನ್ನು ವಾಪಸು ತೆಗೆದುಕೊಳ್ಳುವುದಾಗಿ ಸೋವಿಯತ್ ವಿದೇಶ ಮಂತ್ರಿ ಘೋಷಿಸಿದ್ದಾರೆ.

ಪೂರ್ವ ಜರ್ಮನಿ ರಕ್ಷಣಾ ಕಡಿತ

ಪೂರ್ವ ಜರ್ಮನಿ ನಾಯಕ ಎರಿಚ್ ಹೊನೇಕರ್ ತಮ್ಮದೇಶ ಏಕಪಕ್ಷೀಯವಾಗಿ ಸೈನ್ಯ ಸಿಬ್ಬಂದಿಯಲ್ಲಿ 10,000 ಕಡಿತ ಮತ್ತು ರಕ್ಷಣಾ ವೆಚ್ಚದಲ್ಲಿ ಶೇಕಡಾ 10 ಕಡಿತವನ್ನು 1990ರ ಒಳಗೆ ಜಾರಿಗೆ ತರುವುದಾಗಿ ಘೋಷಿಸಿದ್ದಾರೆ. ಈ ಕಡಿತದಲ್ಲಿ ಆರು ಟ್ಯಾಂಕ್ ತುಕಡಿಗಳಲ್ಲಿರುವ 600 ಟ್ಯಾಂಕ್‌ಗಳು, 5 0 ಫೈಟರ್ ವಿಮಾನಗಳಿರುವ ಒಂದು ವಾಯುಸೇನಾ ಸ್ಕ್ವಾಡ್ರನ್ ಸೇರಿವೆ.

ಇದರಿಂದ ಪೂ.ಜರ್ಮನಿ ಸೈನ್ಯ ಇನ್ನಷ್ಟು ಹೆಚ್ಚು "ರಕ್ಷಣಾ ಸ್ವಭಾವ" ಹೊಂದಿದಂತಾಗಿದೆ ಎಂದು ಅವರು ಹೇಳಿದರು.

ಅಮೆರಿಕನ್ ನೌಕಾಸೈನಿಕರ ವಿರುದ್ಧ
ಏಐಡಿಎಸ್- ವಿರೋಧಿ ಪ್ರದರ್ಶನ

ಥ್ಯಾಲೆಂಡ್‌ನ ಪಟ್ಟಾಯ ಎಂಬ ಕರಾವಳಿ ಪಟ್ಟಣಕ್ಕೆ 8000 ಅಮೆರಿಕನ್ ನೌಕಾಸೈನಿಕರು 3 ದಿನದ ಭೇಟಿಗೆ ಬರುವುದರ ವಿರುದ್ಧ ಬ್ಯಾಂಗ್‌ಕಾಕ್‌ನಲ್ಲಿ ಏಐಡಿಎಸ್- ವಿರೋಧಿ ಪ್ರದರ್ಶನಕಾರರು ಪ್ರದರ್ಶನ ನಡೆಸಿದರು. ಅಮೆರಿಕನ್ ದೂತಾವಾಸದ ಎದುರು ಈ ಪ್ರದರ್ಶನ ನಡೆಯಿತು. "ಅಧ್ಯಕ್ಷ ಬುಶ್- ದಯವಿಟ್ಟು ಸೆಕ್ಸ್ ಟೂರ್ ಬೇಡ" "ನಿಮ್ಮ ಟೋರ್ಪೆಡೋಗಳನ್ನು ಬೇರೆ ಕಡೆ ಹೊಡೆಯಿರಿ" ಮುಂತಾದ ಭಿತ್ತಿ ಪತ್ರಗಳನ್ನು ಪ್ರದರ್ಶನಕಾರರು ಹಿಡಿದಿದ್ದರು. ನೌಕಾಸೈನಿಕರು ಇಂತಹ "ಟೂರ್"ಗಳಿಂದ ಥೈಲ್ಯಾಂಡ್‌ನಲ್ಲಿ ಏಐಡಿಎಸ್ ಮಹಾಮಾರಿಯಾಗಿದೆ ಎಂದು ಅವರ ವಾದ. ಜನವರಿ 1ರಿಂದ ಥೈಲ್ಯಾಂಡ್‌ನಲ್ಲಿ ಪ್ರತಿದಿನ 17 ಜನ ಏಐಡಿಎಸ್ ತಗಲಿದವರು ಪತ್ತೆಯಾಗುತ್ತಿದ್ದು ಈ 'ಕಾಡ್ಗಿಚ್ಚು' ಹರಡದಿರಲಿ ಎಂದು ಅವರ ಮನವಿ.

ಹೋದ ಪುಟ್ಟ ಬಂದ ಪುಟ್ಟ

ಮಧ್ಯಪ್ರದೇಶದಲ್ಲಿ ಶ್ರೀ ಮೋತಿಲಾಲ ವೋರಾ ಪುನಃ ಮಧ್ಯಪ್ರದೇಶದ ಮುಖ್ಯ ಮಂತ್ರಿಯಾಗಿದ್ದಾರೆ. 'ಅಧಕ್ಷತೆ'ಗೆ ಶಿಕ್ಷೆಗೆ ಕೇಂದ್ರ ಮಂತ್ರಿಮಂಡಲಕ್ಕೆ 'ಒದ್ದು' ಹಾಕಲ್ಪಟ್ಟಿದ್ದ ವೋರಾ ತಮ್ಮ ಪೀಠಕ್ಕೆ ವಾಪಸ್ಸಾಗಿದ್ದಾರೆ. ಮಗನ 'ಮಕ್ಕಳ ಲಾಟರಿ ಹಗರಣ'ದ ಬಗ್ಗೆ ಕೋರ್ಟು ತೀರ್ಪೊಂದರಿಂದ ಕೇಂದ್ರ ಹೈಕಮಾಂಡ್ ಆದೇಶದ ಮೇರೆಗೆ ಹಾಲಿ ಮುಖ್ಯಮಂತ್ರಿ ಅರ್ಜುನ್‌ಸಿಂಗ್ ರಾಜೀನಾಮೆ ಇತ್ತಿದ್ದಾರೆ. ಮಧ್ಯಪ್ರದೇಶದಲ್ಲಿ ಇದು ಕಥೆಯಾದರೆ ಈಗ ತಾನೇ 'ಬಂದ ಪುಟ್ಟ'ನನ್ನು ಕಳಿಸಲು ಬಿಹಾರದಲ್ಲಿ ನಡೆದಿದೆ ಕಾಂಗ್ರೆಸ್ ಒಳಗೆ ಕಾಳಗ. ಹಾಲಿ ಮುಖ್ಯಮಂತ್ರಿ ಭಗವತ್‌ಝಾಆಜಾದ್‌ರನ್ನು ಗದ್ದೆಯಿಂದ ಇಳಿಸಲು ರಾಜ್ಯಪಾಲ, ಇಬ್ಬರು ವಿರೋಧವಾಗಿದ್ದಾರೆ. ಹೀಗಿದೆ ಅಳಿದುಳಿದ ರಾಜ್ಯಗಳಲ್ಲಿ ರಾಜೀವ್ ಕಾಂಗ್ರೆಸ್ ಸುಭದ್ರ ಸರ್ಕಾರಗಳ ವೈಖರಿ.

ಪಾಲಿಟ್ ಬ್ಯೂರೋ ಆತಂಕ
ಸ್ವರ್ಣಮಂದಿರಕ್ಕೆ ಅಮೆರಿಕನ್ ಸಂಸತ್ ಸದಸ್ಯ ಭೇಟಿ

ಭಾರತೀಯ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್‌ಬ್ಯೂರೋ ಈ ಕೆಳಗಿನ ಹೇಳಿಕೆ ನೀಡಿದೆ.

ಸಿ.ಪಿ.ಐ.(ಎಂ)ನ ಪೊಲಿಟ್‌ಬ್ಯೂರೋ ಅಮೆರಿಕದ ಕಾಂಗ್ರೆಸ್‌ನ ಏಷಿಯನ್ ಮತ್ತು ಪೆಸಿಫಿಕ್ ವಿಷಯಗಳ ಬಗ್ಗೆ ಉಪಸಮಿತಿಯ ಅಧ್ಯಕ್ಷ ಸ್ಟೀಫನ್ ಜೆ. ಸೋಲಾರ್‌ಝು ಭೇಟಿಯನ್ನು ಭಾರತ ಸರ್ಕಾರ ಉಪಯೋಗಿಸಿಕೊಂಡ ರೀತಿ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುತ್ತದೆ. ಅಕಾಲಿ ದಳದ ನಾಯಕರನ್ನು ಭೇಟಿ ಮಾಡಲು ಶ್ರೀ ಸೋಲಾರ್‌ಝು ಅವರನ್ನು ಸ್ವರ್ಣಮಂದಿರಕ್ಕೆ ಕಳಿಸುವ ಮೂಲಕ, ಭಾರತ ಸರ್ಕಾರ ದೇಶದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ವಿದೇಶಿ ಅದರಲ್ಲೂ ಅಮೆರಿಕನ್ ಸಂಘಟನೆಗಳಿಗೆ ಅವಕಾಶ ನೀಡಿದೆ. ಸರ್ಕಾರದ ಈ ನಿರ್ಧಾರ ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಗಂಭೀರವಾದ ಸವಾಲು.

ಸಿ.ಪಿ.ಐ.(ಎಂ) ಈಗಾಗಲೇ ಪದೇಪದೇ ಹೇಳಿರುವಂತೆ ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರವನ್ನು ವಿರೋಧ ಪಕ್ಷಗಳ ಜತೆ ಚರ್ಚೆಯ ಮೂಲಕವೇ ಪಡೆಯಲು ಸಾಧ್ಯ. ಪಂಜಾಬ್ ಒಪ್ಪಂದ ಜಾರಿಗೆ ತರದೆ ಮತ್ತು ಸಮಸ್ಯೆಯನ್ನು ಬರಿಯ ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಯಾಗಿ ಕಾಣುವ ಮೂಲಕ, ರಾಜೀವ್ ಸರ್ಕಾರ ಪರಿಸ್ಥಿತಿ ಬಿಗಡಾಯಿಸಲಿಕ್ಕೆ ಎಡೆ ಮಾಡಿಕೊಟ್ಟಿದೆ. ಪಂಜಾಬ್ ಸಮಸ್ಯೆಗೆ ವಿರೋಧೀ ಪಕ್ಷದ ಜತೆ ಚರ್ಚೆಯ ಆಧಾರದ ಮೇಲೆ ರಾಜಕೀಯ ಪರಿಹಾರ ಹುಡುಕಬೇಕು ಎಂಬ ತನ್ನ ಬೇಡಿಕೆಯನ್ನು ಸಿ.ಪಿ.ಐ.(ಎಂ) ಪುನಃ ಒತ್ತಿ ಹೇಳುತ್ತದೆ.

—ಮುಖ್ಯಮಂತ್ರಿಗಳ ಕಲ್ಕತ್ತಾ ಸಮ್ಮೇಳನ—

ಪುಟ 1ರಿಂದ

ನಿರ್ಣಯ ಕೈಗೊಳ್ಳುವ ಮೊದಲು ಈ ಬಗ್ಗೆ ಅಮೂಲಾಗ್ರ ಚರ್ಚೆ ನಡೆಸಲು ಮುಖ್ಯ ಮಂತ್ರಿಗಳ ಸಭೆ ಕರೆಯ ಬೇಕೆಂದು ಸಮ್ಮೇಳನ ಒತ್ತಾಯಿಸಿತು.

ಕೇಂದ್ರ ಮತ್ತು ರಾಜ್ಯಗಳ ಮೌಲ್ಯ ಮಾಪನದಲ್ಲಿ 9ನೇ ಹಣಕಾಸು ಆಯೋಗ ಪಕ್ಷಪಾತ ನೀತಿ ಅನುಸರಿಸಿದೆ ಎಂದು ಖಂಡಿಸಿದ ಈ ಸಮ್ಮೇಳನ ಆಯೋಗದ ಮೊದಲ ವರದಿಯಲ್ಲಿನ ವಿಕೃತಿಗಳನ್ನು ಸರಿಪಡಿಸಿ ರಾಜ್ಯಗಳ ವಿಶೇಷ ಸಮಸ್ಯೆಗಳನ್ನು ನಿರ್ಲಕ್ಷಿಸದೆ ರಾಜ್ಯಗಳಿಗೆ ನ್ಯಾಯ ಒದಗಿಸಬೇಕೆಂದು ಸಮ್ಮೇಳನ ಆಗ್ರಹಪಡಿಸಿತು.

ಕೇಂದ್ರದ ಆರ್ಥಿಕ ನೀತಿಗಳು ಹಣದುಬ್ಬರಿಕೆ ತುಪ್ಪ ಸುರಿಯುವುದರಿಂದ ಅಗತ್ಯವಾಗುವ ವೇತನ ಪರಿಷ್ಕರಣ ಹಾಗೂ ತುಟ್ಟಿಭತ್ಯೆ ಹೆಚ್ಚಳದಿಂದ ರಾಜ್ಯ ಸರ್ಕಾರಗಳ ಮೇಲೆ ಬೀಳುವ ಹೊರೆಯ ಸ್ವಲ್ಪ ಭಾಗ ಕೇಂದ್ರವೇ ವಹಿಸಬೇಕೆಂದು ಹೇಳಿರುವ ಸಮ್ಮೇಳನ ರಾಷ್ಟ್ರೀಯ ವೇತನ ನೀತಿ ಈಗಿನ ತುರ್ತು ಅಗತ್ಯ ಎಂದಿದೆ

ಸಾರ್ವಜನಿಕ ಉಳಿತಾಯ ಸಂಗ್ರಹಿಸುವ ಅವಕಾಶಗಳ ಮೇಲೆ ಗುತ್ತೇದಾರಿಕೆ ಹೊಂದಿರುವ ಬ್ಯಾಂಕಿಂಗ್ ವ್ಯವಸ್ಥೆ ಕೇಂದ್ರದ ಮರ್ಜಿಗೆ ಒಳಪಟ್ಟಿರುವುದರಿಂದ ಬ್ಯಾಂಕ್ ಸಾಲದ ಬಗ್ಗೆ ನೀತಿ-ನಿರ್ದೇಶನ ನೀಡಲು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮಾದರಿಯಲ್ಲಿ ರಾಷ್ಟ್ರೀಯ ಸಾಲಮಂಡಳಿ ರಚಿಸಬೇಕೆಂದು ಸಮ್ಮೇಳನ ಕರೆ ನೀಡಿದೆ

"ಮಾರಾಟ ತೆರಿಗೆ ಬದಲು - ಅಧಿಕ ಎಕ್ಸೈಜ್ ಸುಂಕ" ಹೇರಬಹುದಾದ ಸಾಮಗ್ರಿಗಳ ಪಟ್ಟಿಯನ್ನು ವಿಸ್ತರಿಸಿ ರಾಜ್ಯಗಳ ಸಂಪನ್ಮೂಲಗಳ ಅತಿಕ್ರಮಣ ಮಾಡುವ ಕೇಂದ್ರದ ಪ್ರಯತ್ನಗಳ ವಿರುದ್ಧ ಸಮ್ಮೇಳನ ಎಚ್ಚರಿಕೆ ನೀಡಿದೆ.

ರಾಜ್ಯ ಸರ್ಕಾರಗಳನ್ನು ಬದಿಗೊತ್ತಿ ಜಿಲ್ಲಾ ಪರಿಷತ್ ಹಾಗೂ ಪಂಚಾಯತ್ ಸದಸ್ಯರೊಡನೆ ಪ್ರಧಾನಮಂತ್ರಿಗಳು ಸಭೆ ನಡೆಸುವುದನ್ನು ಸಮ್ಮೇಳನ ಏಕ ಕಂಠದಿಂದ ವಿರೋಧಿಸಿತು. ಯೋಜನಾ ನಿಧಿಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಗೆ ಮಂಜೂರು ಮಾಡುವ ಸಲಹೆ ವಿಕೇಂದ್ರೀಕರಣದ ಪರಿಕಲ್ಪನೆಗೆ ವಿರುದ್ಧವಾದದ್ದು ಎಂದು ಹೇಳಿರುವ ಸಮ್ಮೇಳನ ರಾಜ್ಯ ಸರ್ಕಾರದ ಜವಾಬ್ದಾರಿಗಳನ್ನು ಮತ್ತು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಚುನಾಯಿತ ಪಂಚಾಯತ್‌ಗಳ ಕೊಡಗಿಸುವಿಕೆಯನ್ನು ನಿರ್ಲಕ್ಷಿಸಿ ಕೇಂದ್ರದ ಕೈಯಲ್ಲಿ ಮತ್ತಷ್ಟು ಆರ್ಥಿಕ ಅಧಿಕಾರಗಳ ಕೇಂದ್ರೀಕರಣಕ್ಕೆ ಪ್ರೋತ್ಸಾಹ ನೀಡುವ ಪ್ರಯತ್ನವಿದೆಂದು ಖಂಡಿಸಿದೆ.ವಿರೋಧ ಪಕ್ಷಗಳ ಆಳ್ವಿಕೆಯ ರಾಜ್ಯಗಳ ಪ್ರಮುಖ ಪ್ರಾಜೆಕ್ಟ್‌ಗಳಿಗೆ ಮಂಜೂರಾತಿ ನೀಡುವಲ್ಲಿ ಕೇಂದ್ರ ವಿಳಂಬ ಮಾಡುತ್ತಿರುವ ಪ್ರವೃತ್ತಿಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು ಈ ಪಕ್ಷಪಾತ ಎಂತಹ ಮಟ್ಟ ತಲುಪಿದೆಯೆಂದರೆ ಈ ರಾಜ್ಯಗಳ ಮಂತ್ರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ನವದೆಹಲಿಯಲ್ಲಿ ಧರಣಿ ಮಾಡಬೇಕಾಗಿ ಬಂದುದರತ್ತ ಗಮನ ಸೆಳೆದರು.

ಸಂಸದೀಯ ಪ್ರಜಾಸತ್ತೆಯ ನಡಾವಳಿಗಳನ್ನು ಉಲ್ಲಂಘಿಸಿ ಚುನಾವಣಾ ಸಮಯದಲ್ಲಿ ಪ್ರಾಜೆಕ್ಟ್‌ಗಳಿಗೆ ಕೇಂದ್ರದ ಅಗಾಧ ನೆರವಿನ ಧಾರಾಳತನ ತೋರುವುದನ್ನು, ರಾಜ್ಯಪಾಲರ ಹುದ್ದೆಯ ದುರುಪಯೋಗದ ಬಗ್ಗೆಯೂ ಸಮ್ಮೇಳನ ಆತಂಕ ವ್ಯಕ್ತಪಡಿಸಿತು. ದೂರದರ್ಶನದ ಎರಡನೇ ಚಾನೆಲನ್ನು ರಾಜ್ಯಗಳಿಗೆ ವಹಿಸುವ ತಮ್ಮ ಬೇಡಿಕೆಯ ಬಗ್ಗೆಯೂ ಸಮ್ಮೇಳನ ಚರ್ಚಿಸಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಜ್ಯೋತಿಬಸುರವರು ದೇಶವನ್ನು ರಾಜ್ಯಗಳ ಮತ್ತು ಕೇಂದ್ರದ ನಡುವೆ ಅಧಿಕಾರಗಳ ಸಮತೋಲದ ಮರುವಿತರಣೆ ನಡೆಸಬೇಕೆಂದು ಕರೆ ನೀಡಿದರು. ರಾಜ್ಯಪಾಲರ ಪಾತ್ರದ ಬಗ್ಗೆ ಮಾತನಾಡುತ್ತಾ ಇತ್ತೀಚೆಗೆ ರಾಜ್ಯಪಾಲ ಪಾತ್ರ ಹೆಚ್ಚೆಚ್ಚು ಕೇಂದ್ರ ಸರ್ಕಾರದ ಮರ್ಜಿಯನ್ನು ಅವಲಂಬಿಸುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು 5 9ನೇ ತಿದ್ದುಪಡಿ ಮತ್ತು ಸೇನೆಯನ್ನು.

ಚುನಾಯಿತ ರಾಜ್ಯ ಸರ್ಕಾರದ ಮಂಜೂರಾತಿಯಿಲ್ಲದೆ ರಾಜ್ಯಗಳಿಗೆ ಕಳುಹಿಸುತ್ತಿರುವ ಪ್ರಯತ್ನ ಹೆಚ್ಚುತ್ತಿರುವುದನ್ನು ಜತೆಗಿಟ್ಟು ನೋಡಬೇಕಾಗಿದೆ ಎಂದರು.

ಆರ್ಥಿಕ ಅಧಿಕಾರಗಳ ಕೇಂದ್ರೀಕರಣದ ಬಗ್ಗೆ ವಿವರಿಸುತ್ತಾ ಅದು ಈಗ ಯಾವ ಮಟ್ಟ ತಲುಪಿದೆಯೆಂದರೆ ದೇಶದಲ್ಲೀಗ ಎತ್ತುವ ಸಂಪನ್ಮೂಲಗಳಲ್ಲಿ 70% ಕೇಂದ್ರದ ಕೈ ಸೇರುತ್ತದೆ. ಉಳಿದ 30% ಎಲ್ಲಾ ರಾಜ್ಯಗಳು ಒಟ್ಟಾಗಿ ಹಂಚಿಕೊಳ್ಳಬೇಕು ಎಂದು ಜ್ಯೋತಿಬಸುವ ನುಡಿದರು. ಕೇಂದ್ರ-ರಾಜ್ಯಗಳ ಸಂಬಂಧಗಳನ್ನು ರಾಜ್ಯಗಳ ಪರವಾಗಿ ಪುನರ್ರಚಿಸ ಬೇಕೆಂಬ ಮೂಲಭೂತ ಬೇಡಿಕೆಯ ಅರ್ಥ ಕೇವಲ ಕೇಂದ್ರದಿಂದ ರಾಜ್ಯಗಳಿಗೆ ಅಧಿಕಾರದ ವಿಕೇಂದ್ರೀಕರಣ ಮಾತ್ರವಲ್ಲ. ರಾಜ್ಯದೊಳಗೂ ಇದೇ ರೀತಿ ಜಿಲ್ಲೆಗಳಿಗೆ, ಇನ್ನೂ ಕೆಳಗಿನ ಸ್ತರಗಳಿಗೂ ವಿಕೇಂದ್ರೀಕರಣ ನಡೆಯಬೇಕೆಂದೂ ಕೂಡಾ ಎಂದು ಅವರು ವಿವರಿಸಿದರು.

ಪಂಚಾಯತೀ ರಾಜ್ಯದ ಬಗ್ಗೆ ಪ್ರಧಾನ ಮಂತ್ರಿಗಳ ಯೋಜನೆ ಕೇವಲ ಹುಸಿ ವಿಕೇಂದ್ರೀಕರಣ ಎಂದ ಜ್ಯೋತಿ ಬಸುರವರು ಇದು ಪಶ್ಚಿಮಬಂಗಾಳದಂತಹ ರಾಜ್ಯಗಳಲ್ಲಿ ಈಗಾಗಲೇ ಜಾರಿಗಾರಿಟ್ಟು ಮುಂದುವರಿಯುತ್ತಿರುವ ಪಂಚಾಯತೀ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದಷ್ಟೆ ಎಂದರು.

ವಿದ್ಯುತ್ ಮುಂತಾದ ಕೈಗಾರಿಕೆಗಳ ಬೆಳವಣಿಗೆಯ ಮೂಲಭೂತ ಅಗತ್ಯಗಳ ಮೇಲೆ, ಮೂಲಭೂತ ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಮೇಲೆ ಕೇಂದ್ರದ ಹತೋಟಿಯನ್ನು ಮತ್ತಷ್ಟು ಕೇಂದ್ರೀಕರಿಸುವ ಪ್ರವೃತ್ತಿಯ ವಿರುದ್ಧ ದನಿಯೆತ್ತಬೇಕೆಂದು ಕಾ.ಜ್ಯೋತಿಬಸು ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳಿಗೆ ತಮ್ಮ ಉದ್ಘಾಟನಾ ಭಾಷಣದಲ್ಲಿ ಮನವಿ ಮಾಡಿಕೊಂಡರು.

ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್ ಮಾತನಾಡುತ್ತಾ ರಾಜ್ಯಪಾಲರ ಹುದ್ದೆ ಅನಗತ್ಯವಷ್ಟೇ ಅಲ್ಲ, ಪ್ರಜಾಸತ್ತಾತ್ಮಕ ಕೇಂದ್ರ-ರಾಜ್ಯ ಸಂಬಂಧಗಳಿಗೆ ಕೇಡು ತರುವ ಹುದ್ದೆ ಕೂಡಾ ಎಂದು ಹೇಳಿ ಅದನ್ನು ರದ್ದುಪಡಿಸಬೇಕೆಂದು ಕರೆ ನೀಡಿದರು. ರಾಜ್ಯಪಾಲರುಗಳ ನೇಮಕ ಸಂಕುಚಿತ ರಾಜಕೀಯ ಉದ್ದೇಶಗಳಿಂದ ನಡೆಯುತ್ತಿದೆ. ಹೀಗೆ ನೇಮಿಸಲ್ಪಟ್ಟ ರಾಜ್ಯಪಾಲರುಗಳಲ್ಲಿ ಪ್ರೌಢತೆಯಾಗಲೀ, ಉನ್ನತ ವ್ಯಕ್ತಿತ್ವವಾಗಲೀ ಇರುವುದಿಲ್ಲ. ಕೆಲವರಿಗೆ ಅದು ಇನ್ನೂ ಸಕ್ರಿಯ ರಾಜಕೀಯ ಬಡ್ತಿಯ ಮೆಟ್ಟಿಲು ಎಂದು ನಾಯನಾರ್ ಟೀಕಿಸಿದರು.

ಮಹತ್ವಪೂರ್ಣ ಹೊಸ ಹೆಜ್ಜೆ

ಪುಟ 1ರಿಂದ

ಬಿಕ್ಕಟ್ಟಿನ ಹೊರೆಯನ್ನು ಜನತೆಯ ಹೆಗಲ ಮೇಲೆ ದಾಟಿಸುವ ರಾಜೀವ್ ಸರ್ಕಾರದ ಜನ-ವಿರೋಧಿ ಧೋರಣೆಗಳು, ಕೋಮುವಾದಿ- ವಿಚ್ಛಿದ್ರಕಾರಿಗಳ ಸವಾಲನ್ನು ಸ್ವೀಕರಿಸುವಲ್ಲಿ ಅದರ ವಿಫಲತೆ, ಬದಲಿಗೆ ಪ್ರಜಾಪ್ರಭುತ್ವ ಹಕ್ಕುಗಳ ದಮನ- ರಾಜೀವ್‌ಗಾಂಧಿ ಸರ್ಕಾರ ಅಧಿಕಾರಕ್ಕೆ ಕಚ್ಚಿಕೊಂಡಿರಲು ಹೆಚ್ಚೆಚ್ಚು ಸರ್ವಾಧಿಕಾರೀ ಕ್ರಮಗಳತ್ತ ಸಾಗುತ್ತಿದೆ. ಕಳೆದ 17 ವರ್ಷಗಳಲ್ಲಿ ಆಳುವ ಪಕ್ಷದಲ್ಲಿ ಯಾವುದೇ ಸಂಘಟನಾ ಚುನಾವಣೆಗಳು ನಡೆದಿಲ್ಲವೆಂಬುದು ಕೇವಲ ಆಕಸ್ಮಿಕವೇನಲ್ಲ.

ಈ ಕಾರಣಗಳಿಂದ ದೇಶವನ್ನು ಇನ್ನಷ್ಟು ಅನಾಹುತಗಳಿಂದ ರಕ್ಷಿಸಲು ಜನತೆ ರಾಜೀವ್‌ಗಾಂಧಿಯನ್ನು ಅಧಿಕಾರದಿಂದ ಇಳಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಇತ್ತೀಚಿನ ಚುನಾವಣೆಗಳು ಜನತೆಯ ತುರ್ತು ಆಶೋತ್ತರಗಳನ್ನು ಸ್ಪಷ್ಟವಾಗಿ ಪ್ರತಿಬಿಂಬಿಸಿವೆ. ಈ ಸಂದರ್ಭದಲ್ಲೇ ನಮ್ಮ ಪಕ್ಷ, ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯ ಆಧಾರದ ಮೇಲೆ ಒಂದು ಚುನಾವಣಾ ಪರ್ಯಾಯ ಬೆಳೆಸುವ ಘೋಷಣೆ ನೀಡಿತು. ಅಂದರೆ ಒಂದೆಡೆ ರಾಜೀವ್ ಗಾಂಧಿಯನ್ನು ಸೋಲಿಸಬಲ್ಲ, ಅದೇ ಸಮಯದಲ್ಲಿ ಕೋಮುವಾದಿ ಹಾಗೂ ವಿಚ್ಛಿದ್ರಕಾರೀ ಶಕ್ತಿಗಳನ್ನು ದೂರ ತಳ್ಳಬಲ್ಲ ಒಂದು ಪರ್ಯಾಯದ ಬೆಳವಣಿಗೆ.

ಈ ದೃಷ್ಟಿಯಿಂದಲೇ ಹಿಂದೀ-ಭಾಷಿಕ ಪ್ರದೇಶಗಳ ಹಲವು ಪಕ್ಷಗಳನ್ನು ಒಟ್ಟುಗೂಡಿಸಿದ ಜನತಾದಳ ಹಾಗೂ ರಾಷ್ಟ್ರೀಯ ರಂಗದ ರಚನೆಯನ್ನು ನಾವು ಸ್ವಾಗತಿಸಿದೆವು. ಆದರೆ ಜನತಾದಳದ ವಿಭಿನ್ನ ಮುಖಂಡರ ನಡುವೆ ಜಗಳಗಳು ಮುಂದುವರೆದು ಜನಗಳಲ್ಲಿ ಹತಾಶೆ ತರುತ್ತಿರುವುದು ಖೇದಕರ. ಇದರ ಬದಲು ಅವರು ಜನರನ್ನು ತಟ್ಟುವ ಪ್ರಶ್ನೆಗಳ ಮೇಲೆ ಕಳೆದ ಕೆಲವು ತಿಂಗಳು ಸಾಮೂಹಿಕ ಪ್ರಕ್ಷೋಭೆಯಲ್ಲಿ ತೊಡಗಿದ್ದರೆ ಜನತೆಯ ಮೇಲೆ ಅಗಾಧ ಪರಿಣಾಮ ಬೀರಬಹುದಿತ್ತು.

ಈ ಮುಖಂಡರು ತಮ್ಮ ಕಚ್ಚಾಟ ಬಿಟ್ಟುಕೊಟ್ಟು ತಕ್ಷಣ ಮುಂದಿನ ಚುನಾವಣೆಗಳಿಗೆ ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸುವತ್ತ ಗಮನ ಹರಿಸುವಂತೆ ಮಾಡಲು ನಾವು ಪ್ರಯತ್ನಿಸುತ್ತಾ ಬಂದಿದ್ದೇವೆ.

ಎಡಪಕ್ಷಗಳ ನೆರವು ಕೇಳುತ್ತಲೇ ಬಿ.ಜೆ.ಪಿ. ಆರ್.ಎಸ್.ಎಸ್.ನ ಸ್ನೇಹ ಸಂಪಾದಿಸುವ ಈ ಸಂಘಟನೆಗಳ ಕೆಲವು ಮುಖಂಡರ ಎಡಬಿಡಂಗಿ ಹೇಳಿಕೆಗಳನ್ನು ಕೂಡಾ ಎಡಪಕ್ಷಗಳು ಟೀಕಿಸುತ್ತಾ ಬಂದಿವೆ. ಆ ಮುಖಂಡರು ಬಿ.ಜೆ.ಪಿ., ಆರ್.ಎಸ್.ಎಸ್.ಗಳಂತಹ ಕೋಮುಶಕ್ತಿಗಳ ಏಕದಂ ಹಿಂದೂ ಕೋಮುವಾದವನ್ನು, ಸುಮಾರಾಗಿ ಮತೀಯ ಆಧಾರದ ಪ್ರಭುತ್ವ ಬೇಕೆಂಬ ಅವರ ಬೇಡಿಕೆಯನ್ನು ಕೋಮುದಂಗೆಗಳಲ್ಲಿ ಅವರ ಪಾತ್ರವನ್ನು, ಹಿಂದೂ ಮತ್ತು ಮುಸ್ಲಿಮರ ನಡುವೆ ದ್ವೇಷ ತಂದು ದೇಶವನ್ನು ಶಾಶ್ವತವಾಗಿ ವಿಭಜಿಸುವ ಸಾಮ್ರಾಜ್ಯಶಾಹಿಗಳ ಆಟವನ್ನು ಅವರು ಹೇಗೆ ಆಡುತ್ತಿದ್ದಾರೆ ಎಂಬುದನ್ನು ಕಾಣುತ್ತಿಲ್ಲ. ಇಂತಹ ಶಕ್ತಿಗಳೊಂದಿಗೆ ಸಖ್ಯತೆ ಖಂಡಿತವಾಗಿಯೂ ಅಲ್ಪಸಂಖ್ಯಾತರನ್ನು ಈ ಬೂರ್ಜ್ವಾ ಪಕ್ಷಗಳ ವಿರುದ್ಧ ನಿಲ್ಲಿಸುತ್ತವೆ. ಮುಂದುವರಿದ ಪ್ರಜಾಪ್ರಭುತ್ವ ಆಂದೋಲನ ಹಾಗೂ ಅಲ್ಪಸಂಖ್ಯಾತರ ನಡುವೆ ಅಡ್ಡಗೋಡೆ ನಿರ್ಮಿಸುತ್ತದೆ.

ಈ ಎರಡು ದಾರಿಗಳ ನಡುವೆ ಹೋರಾಟ ನಡೆಯುತ್ತಲೇ ಇದೆ. ಇದುವರೆಗೆ ರಾಷ್ಟ್ರೀಯ ರಂಗದಲ್ಲಿ ಬಿ.ಜೆ.ಪಿ.ಯನ್ನು ಸೇರಿಸಿಕೊಂಡಿಲ್ಲ. ಒಳ್ಳೆಯದೇ. ಆದರೂ ಹೋರಾಟವಿನ್ನೂ ಮುಗಿದಿಲ್ಲ. ಈಗಲೂ ರಾಷ್ಟ್ರೀಯರಂಗ ಮತ್ತು ಜನತಾದಳದ ವಿವಿಧ ಮುಖಂಡರು ರಾಜೀವ್ ಸರ್ಕಾರವನ್ನು ಸೋಲಿಸುವ ಹೋರಾಟಕ್ಕೆ ಕುಂದುಂಟುಮಾಡುವ ಅಭಿಪ್ರಾಯಗಳನ್ನು ಪ್ರತಿಪಾದಿಸುತ್ತಲೇ ಇದ್ದಾರೆ.

ಇಂತಹ ಚಂಚಲತೆಯನ್ನು ಹೋಗಲಾಡಿಸಲೆಂದೇ ನಾಲ್ಕು ಎಡ ಪಕ್ಷಗಳು ಮತ್ತು ಕಾಂಗ್ರೆಸ್(ಎಸ್), ಲೋಕದಳ ಹಾಗೂ ಜನಮೋರ್ಚಾ ಈಗ ಒಂದು ಚಳುವಳಿ ಆರಂಭಿಸಲು ಒಟ್ಟುಸೇರಿ ರಾಷ್ಟ್ರೀಯ ಆಂದೋಲನ ಸಮಿತಿ ರಚಿಸಿದ್ದೇವೆ. ಅವು ರೂಪಿಸುವ 15 ಅಂಶಗಳ ಕಾರ್ಯಕ್ರಮವನ್ನು ಜ್ಯಾರಿಗೆ ತಂದಲ್ಲಿ ಜನಸಾಮಾನ್ಯರಿಗೆ ಪರಿಹಾರ ನೀಡುವಲ್ಲಿ, ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವಲ್ಲಿ, ರಾಷ್ಟ್ರೀಯ ಸ್ವಾತಂತ್ರವನ್ನು ಬಲಗೊಳಿಸುವಲ್ಲಿ ಮತ್ತು ಉಚ್ಛ ಸ್ಥಾನಗಳಲ್ಲಿನ ಭ್ರಷ್ಟಾಚಾರ ವಿರುದ್ಧ ಹೋರಾಡುವಲ್ಲಿ ಬಹಳಷ್ಟು ನೆರವು ನೀಡಬಲ್ಲದು.

ರಾಷ್ಟ್ರೀಯ ಆಂದೋಲನ ಸಮಿತಿ ಕಾರ್ಯಕ್ರಮವನ್ನು ಬಿಡುಗಡೆ ಮಾಡುತ್ತಾ ನೀಡಿದ ಮೊತ್ತ ಮೊದಲ ಹೇಳಿಕೆಯಲ್ಲೇ ಸ್ಪಷ್ಟ ಮಾತುಗಳಲ್ಲಿ ಹೀಗಂದಿದೆ-

"ಮುಂಬರುವ ಚುನಾವಣೆಗಳಲ್ಲಿ ರಾಜೀವ್‌ಗಾಂಧಿ ಸರ್ಕಾರ ಮತ್ತು ಆಳುವ ಪಕ್ಷಕ್ಕೆ ವಿರುದ್ಧವಾದ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳ ವಿಶಾಲ ಐಕ್ಯತೆ ಕಟ್ಟುವ ಸಾರ್ವತ್ರಿಕ ಆಕಾಂಕ್ಷೆ ಹಾಗೂ ವಿಭಿನ್ನ ಪ್ರಯತ್ನಗಳನ್ನು ನಾವು ಸ್ವಾಗತಿಸುತ್ತೇವೆ" ಕೊನೆಯಲ್ಲಿ ಆ ಹೇಳಿಕೆ "ಎಲ್ಲಾ ಇತರ ಪ್ರಜಾಪ್ರಭುತ್ವ,ಜಾತ್ಯಾತೀತ ಮತ್ತು ದೇಶಪ್ರೇಮೀ ಶಕ್ತಿಗಳು ರಾಷ್ಟ್ರೀಯ ಆಂದೋಲನ ಸಮಿತಿ ಸೇರಬೇಕು, ಇದು ಸದ್ಯದ ಅವಶ್ಯಕತೆ" ಎಂದು ಮನವಿ ಮಾಡಿಕೊಂಡಿತ್ತು.

ರಾಷ್ಟ್ರೀಯ ಆಂದೋಲನ ಸಮಿತಿಯ ರಚನೆ ಮತ್ತು ಅದರ ಕಾರ್ಯಕ್ರಮ ಜನ ಸಾಮಾನ್ಯರ ಆಕಾಂಕ್ಷೆಗಳನ್ನು ಪ್ರತಿನಿಧಿಸುವುದರಿಂದ ಅದಕ್ಕೆ ಸಿಕ್ಕಿರುವ ವ್ಯಾಪಕ ಸ್ವಾಗತ ಆಕಸ್ಮಿಕವೇನಲ್ಲ. ಆದರೆ ಜನತಾದಳ ಹಾಗೂ ರಾಷ್ಟ್ರೀಯ ರಂಗದ ಕೆಲವು ವಿಭಾಗಗಳು ಈ ಪ್ರಯತ್ನಗಳಿಗೆ ಪ್ರತಿಕೂಲವಾಗಿ ಪ್ರತಿಕ್ರಿಯಿಸಿವೆ. ಕಾರ್ಯಕ್ರಮದ ಬಗ್ಗೆ, ವಿದೇಶಾಂಗ ನೀತಿಯ ಪ್ರಶ್ನೆಯ ಮೇಲಾಗಲೀ, ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯ ಮೇಲಾಗಲೀ ಭಿನ್ನಾಭಿಪ್ರಾಯವಿಲ್ಲ ಎಂದು ಅವರು ಹೇಳಿದ್ದಾರೆ. ಆದರೆ ಕೇವಲ ಎರಡೇ ವಾರಗಳ ಹಿಂದೆ ಜನತಾದಳದ ಕಾರ್ಯದರ್ಶಿ ಮಂಡಳಿ ರಾಜೀವ್‌ಗಾಂಧಿಯ ಚೀನಾ ಭೇಟಿಯನ್ನು ಟೀಕಿಸಿ ಹೇಳಿಕೆ ನೀಡಿತ್ತು ಎಂಬುದನ್ನು ನಿರಾಕರಿಸಲು ಅವರಿಗೆ ಸಾಧ್ಯವಿಲ್ಲ. ವಿ.ಪಿ.ಸಿಂಗ್ ಮರುದಿನ ಹೇಳಿಕೆ ತಪ್ಪೆಂದು ಹೇಳಿದರೆಂಬುದೇನೋ ನಿಜ. ಜನವರಿ 12ರಂದು ದಳದ ಸಂಸದೀಯ ಮಂಡಳಿ ಸಭೆ ಸೇರಿದಾಗ ಈ ಬಗ್ಗೆ ಪ್ರಾಮಾಣಿಕ ಹೇಳಿಕೆ ನೀಡಲಾಗುವುದು ಎಂದು ಅವರು ಅಂದು ಭರವಸೆ ಕೊಟ್ಟರು. ಆದರೆ ಜನವರಿ 12ರ ಸಭೆಯಲ್ಲಿ ಇಂತಹ ನಿರ್ಣಯವೇನೂ ಆಗಲಿಲ್ಲ ಎಂಬುದು ಎಲ್ಲರಿಗೂ ಗೊತ್ತು.

ಇದೇ ರೀತಿ ಬಿ.ಜೆ.ಪಿ. ಆರ್.ಎಸ್.ಎಸ್., ಹಿಂದೂರಾಷ್ಟ್ರ ಪ್ರತಿಪಾದಿಸುವುದನ್ನು, ದೇಶದಲ್ಲಿ ಅಲ್ಪಸಂಖ್ಯಾತರೇ ಇಲ್ಲ ಎಂದು ಅವರು ಒತ್ತಿ ಹೇಳುವುದನ್ನು ಖಂಡಿಸುವ ಒಂದಾದರೂ ಹೇಳಿಕೆ ಇದುವರೆಗೆ ಜನತಾ ದಳದ ಮುಖಂಡರಿಂದ ಬಂದಿಲ್ಲ. ಬದಲಿಗೆ ಅವರಲ್ಲಿ ಕೆಲವರು ಇನ್ನೂ ಕೂಡಾ ಅವರೊಂದಿಗೆ ಸಖ್ಯತೆಯನ್ನು ಪ್ರತಿಪಾದಿಸುತ್ತಿದ್ದಾರೆ; ರಾಷ್ಟ್ರೀಯ ಐಕ್ಯತೆಯ ನಿರಂತರ ಪ್ರತಿಪಾದಕರಾದ ಎಡಶಕ್ತಿಗಳನ್ನು ಮತ್ತು ಅವರನ್ನು ಒಂದೇ ತಕ್ಕಡಿಯಲ್ಲಿ ತೂಗುತ್ತಿದ್ದಾರೆ.

ಇದಲ್ಲದೆ ರಾಷ್ಟ್ರೀಯ ಆಂದೋಲನ ಸಮಿತಿ ಸೇರಿದವರನ್ನು ಉಚ್ಚಾಟನೆ ಮಾಡುವ ರಾಷ್ಟ್ರೀಯ ರಂಗದ ಅಧ್ಯಕ್ಷರ ನಿರ್ಣಯವೂ ದುರ್ದೈವಕರ. ಈಗ ಎಡ, ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸುವ ಅವಶ್ಯಕತೆಯಿರುವಾಗ ಕೆಲವರನ್ನು ರಾಷ್ಟ್ರೀಯ ಆಂದೋಲನವೊಂದರಲ್ಲಿ ಎಡಶಕ್ತಿಗಳೊಡನೆ ಸೇರಿದ್ದಕ್ಕಾಗಿ ಉಚ್ಚಾಟನೆ ಮಾಡುವುದು ರಾಜೀವ್‌ಗಾಂಧಿಯನ್ನು ಸೋಲಿಸಲು ವಿಶಾಲ ಐಕ್ಯತೆ ಬೆಸೆಯುವ ಆಕಾಂಕ್ಷೆಗೆ ಅನುಗುಣವಾದ ಕ್ರಮ ಅಲ್ಲ. ಹಲವಾರು ಕಾರಣಗಳಿಗಾಗಿ ಅವರನ್ನು ತಮ್ಮ ಸಂಘಟನೆಯಲ್ಲಿ ಸೇರಿಸಿಕೊಳ್ಳಲು ಜನತಾ ದಳಕ್ಕೆ ಸಾಧ್ಯವಿಲ್ಲವಾದರೆ ಅದು ಪ್ರತ್ಯೇಕ ವಿಷಯ. ಆ ಬಗ್ಗೆ ನಾವೇನೂ ಹೇಳುವುದಿಲ್ಲ. ಆದರೆ ರಾಷ್ಟ್ರೀಯ ರಂಗದಲ್ಲಿ ಅವರಿಗೊಂದು ಸ್ಥಾನ ಏಕೆ ಸಾಧ್ಯವಿಲ್ಲ?

ರಾಷ್ಟ್ರೀಯರಂಗದ ಮುಖಂಡರು ಸನ್ನಿವೇಶವನ್ನೂ ಸಮಗ್ರದೃಷ್ಟಿಯಿಂದ ಕಂಡು ವಿಭಿನ್ನ ಗುಂಪುಗಳ ನಡುವಿನ ವಿವಾದಗಳ ಒಳಗೆ ಪ್ರವೇಶಿಸದೆ ರಾಜೀವ್ ಗಾಂಧಿಯನ್ನೂ ಸೋಲಿಸಬಯಸುವ ಎಲ್ಲಾ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಟ್ಟುಗೂಡಿಸಲು ಸರ್ವ ಪ್ರಯತ್ನ ನಡೆಸಬೇಕೆಂದು ಈಗಲೂ ನಾವು ರಾಷ್ಟ್ರೀಯರಂಗದ ಮುಖಂಡರಿಗೆ ಸಲಹೆ ನೀಡಬಯಸುತ್ತೇವೆ. ನಾವು ಮತ್ತು ಇತರ ಎಡಪಕ್ಷಗಳಂತೂ ರಾಷ್ಟ್ರೀಯರಂಗ ಮತ್ತು ಜನತಾದಳದ ಬಗ್ಗೆ ಇನ್ನು ಮುಂದೆಯೂ ಸಕಾರಾತ್ಮಕ ನಿಲುವನ್ನೇ ತಳೆಯುತ್ತೇವೆ. ಇವುಗಳ ಪಾತ್ರವಿಲ್ಲದೆ ರಾಜೀವ್‌ಗಾಂಧಿ ಸರ್ಕಾರವನ್ನು ಸೋಲಿಸುವುದರ ಬಗ್ಗೆ ಯೋಚಿಸಲೂ ಸಾಧ್ಯವಿಲ್ಲ. ಆದರೆ ಇದರ ಜತೆಜತೆಗೇ ನಾವು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟುಗೂಡಿಸುವುದನ್ನು ಆಂದೋಲನದ ಕಾರ್ಯಕ್ರಮದಲ್ಲಿ ಹೇಳಿದ ವಿಷಯಗಳ ಮೇಲೆ ಗಮನ ಸೆಳೆಯುವುದನ್ನು ಮುಂದುವರೆಸುತ್ತೇವೆ. ಇದರಿಂದ ಮಾತ್ರವೇ ಈಗಿನ ಸರ್ಕಾರದ ವಿರುದ್ಧ ಹೋರಾಟ ಬಲಗೊಳಿಸಲು ಮತ್ತು ಅದರ ಸೋಲನ್ನು ಖಾತರಿಗೊಳಿಸಲು ಸಾಧ್ಯ.

ಶ್ರೀಕೃಷ್ಣ ಆಲನಹಳ್ಳಿ

42ರ ಹರೆಯದ ಕೃಷ್ಣ ಆಲನಹಳ್ಳಿ ನಿಧನರಾಗಿದ್ದಾರೆ. ಕನ್ನಡದ ಕಾವ್ಯ, ಕಥೆ, ಕಾದಂಬರಿ ಕ್ಷೇತ್ರಕ್ಕೆ ಮಣ್ಣಿನ ವಾಸನೆಯನ್ನು ಧಾರೆಯೆರೆದ ಆಲನಹಳ್ಳಿ ಅದಕ್ಕಾಗಿಯೇ ವಿಶಿಷ್ಟ ಹೆಸರು.

ಸಮಾಜದ ಹೊಸತನದ ನವಿರು, ದುಃಖದುಮ್ಮಾನಗಳ ವಿಷಾದ ತೆರೆದಿಟ್ಟು ಹಲವು ಓದುಗರ ನೆನಪಿನಂಗಳಕ್ಕೆ ಕಲ್ಲು ಹೊಡೆದು ನೆನಪು ಕೆದಕುತ್ತಿದ್ದ ಕೃಷ್ಣನಿಗೆ "ಐಕ್ಯರಂಗ"ದ ಸಂತಾಪ.

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053 . Managing Editor: N.K.Upadhyaya Managenial Office: Shobha Lodge C... Bangalore. 560 009.